Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–10 ಮಾರ್ಚ್ 6–12, 2023 ಪುಟ 16 ರೂ. 10/–
Volume-17 Issue-10 March 6-12, 2023 Pages:16 Price: 10/-

ನಡೆಯದ ಮುಷ್ಕರ ದಕ್ಕದ ಪರಿಹಾರ



ಅಡುಗೆ ಅನಿಲದ ಬೆಲೆ ಏರುತ್ತಲೇ ಇದೆಯೇಕೆ?





ತ್ರಿಪುರಾ: ಮತಗಳ ವಿಭಜನೆಯ ತಂತ್ರಗಾರಿಕೆ: ಬಿಜೆಪಿಗೆ ಸಿಕ್ಕಿರುವುದು ಸರಳ ಬಹುಮತ

ಕರ್ನಾಟಕದ ಆರ್ಥಿಕ ದುರವಸ್ಥೆ

ಹೋರಾಟ ನಿರತ ಪ್ಯಾಲೆಸ್ತೇನಿ ಜನತೆಗೆ ಸೌಹಾರ್ದತೆ ತೋರೋಣ...

ಮಿಥ್ಯೆ 1: 'ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ'!?

ಈ ಮಿಥ್ಯೆ ಎಂತಹ ಅರೆ ಸತ್ಯಗಳು ಮತ್ತು ಸುಳ್ಳುಗಳಿಂದ ಕೂಡಿದೆ ಎಂಬುದನ್ನು ಓದಿದ್ದೀರಿ. ತನ್ನ ರಾಜಕೀಯ ಜೀವನದ ಮೊದಲ ಘಟ್ಟದಲ್ಲಿ ಕೋಮು ಸಾಮರಸ್ಯದ ಸ್ವತಂತ್ರ ಭಾರತದ ಆದರ್ಶಕ್ಕಾಗಿ ತುಡಿಯುತ್ತಿದ್ದ ಕ್ರಾಂತಿಕಾರಿಯಾಗಿದ್ದ ಸಾವರ್ಕರ್, ಸೆಲ್ಯುಲರ್ ಜೈಲಿನಲ್ಲಿನ ಕಾರಾಗೃಹವಾಸ ಮತ್ತು ಅಲ್ಲಿನ ಘೋರ ಯಾತನೆ ಕಂಡ ನಂತರ ಕ್ರಾಂತಿಕಾರಿಯಾಗಿ ಉಳಿದಿರಲಿಲ್ಲ.

ಮಿಥ್ಯೆ 2: ಸಾವರ್ಕರ್ ತಮ್ಮ ಬದುಕಿನ ಬಹುಭಾಗವನ್ನು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಕಳೆದರು!?

ಸಾವರ್ಕರ್ ನಿಜವಾಗಿಯೂ ಕ್ರಾಂತಿಕಾರಿಯಾಗಿದ್ದಾಗ ಅವರಿಗೆ ಬ್ರಿಟಿಷರು ಎರಡು ವಿಭಿನ್ನ ಪ್ರಕರಣಗಳಲ್ಲಿ ಒಟ್ಟು 50 ವರ್ಷ ಗಡೀಪಾರಿನ ಶಿಕ್ಷೆ ವಿಧಿಸಿದ್ದು ನಿಜ. ಆದರೆ ಅದರಲ್ಲಿ ಅವರು ಅಂಡಮಾನಿನ ಸೆಲ್ಯಲುರ್ ಜೈಲಿನಲ್ಲಿ ಶಿಕ್ಷೆ ಅನುಭವಿಸಿದ್ದು ಕೇವಲ 10 ವರ್ಷ.


ಮಿಥ್ಯೆ 3 – ಸಾವರ್ಕರ್ ಅವರ ಕ್ಷಮಾಯಾಚನೆಯ ಅರ್ಜಿಗಳು ಸ್ವಾತಂತ್ರ್ಯ ಗಳಿಕೆಗೆ ಒಂದು ತಂತ್ರವಷ್ಟೆ!?

ಸಾವರ್ಕರ್ ಅವರು ಬ್ರಿಟಿಷ್ ಆಳರಸರಿಗೆ ಕ್ಷಮಾಯಾಚನೆಯ ಪತ್ರಗಳನ್ನು ಬರೆದಿದ್ದರು ಎಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲವಾದ್ದರಿಂದ, ಅದು .ದರಿದ್ರ ಜೈಲಿನಿಂದ ಹೊರಬಂದು ಸಕ್ರಿಯ ರಾಜಕೀಯ ಮತ್ತು ಸ್ವಾತಂತ್ರ್ಯ ಚಳವಳಿಗೆ ಮರಳಲು ಮಾಡಿದ್ದ ತಂತ್ರ ಎಂದು ಅದನ್ನು ಅವರ ಬೆಂಬಲಿಗರು ಸಮರ್ಥಿಸಿಕೊಳ್ಳುತ್ತಿದ್ದಾರೆ. ಆದರೆ ಈ ಸಮರ್ಥನೆಯೂ ಸಾವರ್ಕರ್ 1913 ಮತ್ತು 1920 ರಲ್ಲಿ ಬರೆದ ಕ್ಷಮಾಯಾಚನೆಯ ಪತ್ರದ ಮೂಲ ಪಠ್ಯವನ್ನು ಓದಿದರೆ, ಅರ್ಥಹೀನವಾಗುತ್ತದೆ ಎನ್ನುತ್ತಾರೆ ಲೇಖಕರು ಈ ಅಧ್ಯಾಯದಲ್ಲಿ..

'ವೀರ' ಸಾವರ್ಕರ್–ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ 'ಸಾವರ್ಕರ್ ಅನ್‌ಮಾಸ್ಕ್ಡ್' ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.

ಭಾಗ–19



ಡಾ. ಶಮ್ಸುಲ್‌ಇಸ್ಲಾಂ
ಅನು: ಟಿ.ಸುರೇಂದ್ರರಾವ್

ಮಿಥ್ಯೆ 3 ಬಿಡುಗಡೆ ಮಾಡಿದ್ದು ಮನಪರಿವರ್ತನೆಯಾಗಿತ್ತೆಂದಲ್ಲ, ಹೋರಾಟದ ಐಕ್ಯತೆಯನ್ನು ಮುರಿಯಲು ಉಪಯೋಗಿಸಬಹುದು ಎಂದಷ್ಟೇ

ಸಾವರ್ಕರ್ ತಮ್ಮ ಬಿಡುಗಡೆಯ ಷರತ್ತುಗಳನ್ನು ಸ್ವಸಂತೋಷದಿಂದ ಒಪ್ಪಿಕೊಂಡಿದ್ದರು.

ಧನಂಜಯ್ ಕೀರ್ ಅವರು ಬರೆದ ಸಾವರ್ಕರ್ ಅವರ ಜೀವನ ಚರಿತ್ರೆ **ವೀರ್ ಸಾವರ್ಕರ್** ಪುಸ್ತಕವನ್ನು ಅಧಿಕೃತ ಜೀವನ ಚರಿತ್ರೆ ಎಂದು ಹೇಳಬಹುದು; ಏಕೆಂದರೆ ಆ ಪುಸ್ತಕದ ಮುನ್ನುಡಿಯಲ್ಲಿ ಕೀರ್ ಅವರು ಹೀಗೆ ಬರೆದಿದ್ದಾರೆ: 'ಈ ಜೀವನ ಚರಿತ್ರೆ ಬರೆಯಲು ಸಾವರ್ಕರ್ ಅವರೇ ಕೊಟ್ಟ ಮಾಹಿತಿಗಳನ್ನು ಮತ್ತು ಅವರ ಸಂದರ್ಶನಗಳನ್ನು ಯಥೇಚ್ಛವಾಗಿ ಬಳಸಿಕೊಳ್ಳಲಾಗಿದೆ.'

ಈ ಜೀವನ ಚರಿತ್ರೆಯು ಸಾವರ್ಕರ್ ಅವರ ಬಿಡುಗಡೆಯ ಎಲ್ಲಾ ವಿವರಗಳನ್ನು ಹೇಳುವಾಗಲೇ, ಸಾವರ್ಕರ್ ಮತ್ತು ಬ್ರಿಟಿಷರ ನಡುವಿನ ನೀತಿಗೆಟ್ಟ ಗುಪ್ತ ಕರಾರುಗಳ ಮೇಲೆಯೂ ಬೆಳಕು ಚೆಲ್ಲುತ್ತದೆ. 1924 ರಲ್ಲಿ ಸಾವರ್ಕರ್ ಅವರ ಬಿಡುಗಡೆಯ ಬಗ್ಗೆ ಈ ಜೀವನ ಚರಿತ್ರೆ ಹೀಗೆ ವಿವರಿಸುತ್ತದೆ:

ಈಗ ಅವರ ಪರವಾಗಿ ಅನುಕೂಲಕರ ಗಾಳಿಯು ಬೀಸಲಾರಂಭಿಸುತ್ತದೆ. ಇಂಗ್ಲೆಂಡಿನಲ್ಲಿ ಸಾವರ್ಕರ್ ಅವರ ಗಡೀಪಾರು ವಿಚಾರಣೆಯನ್ನು ರಾಣಿಯ ಪರವಾಗಿ ನಡೆಸಿದ ಸರ್ ರುಫಸ್ ಐಸಾಕ್ ಅವರು ಭಾರತದಲ್ಲಿ ಗೌರ್ನರ್ ಜನರಲ್ ಆಗಿದ್ದರು. ಅವರು ಸಾವರ್ಕರ್ ಪರ ಅನುಕಂಪ ವ್ಯಕ್ತಪಡಿಸಿದ್ದಿರಬೇಕು. ಬಾಂಬೆಯ ಗೌರ್ನರ್ ಆಗಿದ್ದ ಘನತೆವೆತ್ತ ಜಾರ್ಜ್ ಲಾಯ್ಡ್ ಅವರು ತಮ್ಮ ಮಂಡಳಿಯೊಂದಿಗೆ ಸಾವರ್ಕರ್ ಅವರನ್ನು ಸಂದರ್ಶನ ಮಾಡಲು ಬಂದಿದ್ದರು. ಸೆಲ್ಯುಲರ್ ಜೈಲಿನಲ್ಲಿ ಜೈಲ್ ಸೂಪರಿಂಟೆಂಡೆಂಟ್ ಆಗಿದ್ದ ಲೆಫ್ಟಿನೆಂಟ್ ಕರ್ನಲ್ ಜೆ.ಹೆಚ್.ಮುರ್ರೆ ಐಎಂಎಸ್ ಅವರು ಈಗ ಯೆರವಾಡಾ ಜೈಲಿನ ಜೈಲ್ ಸೂಪರಿಂಟೆಂಡೆಂಟ್ ಆಗಿದ್ದಾರೆ. ಆಗ ಗೃಹ ಮಂಡಳಿ ಸದಸ್ಯನಾಗಿದ್ದ ಎ.ಮಾಮಟ್ಗೊಮೇರಿಯೊಂದಿಗೆ ಘನತೆವೆತ್ತ ಗೌರ್ನರ್ ಮತ್ತು ಸಾವರ್ಕರ್ ಅವರ ನಡುವೆ ನಡೆದ ಚರ್ಚೆಯ ಆಧಾರದಲ್ಲಿ ಬಿಡುಗಡೆಯ ಕರಾರುಗಳನ್ನು ಸಿದ್ದಪಡಿಸಲಾಗಿತ್ತು. ಕೆಲವು ಪದಗಳನ್ನು ಬದಲಾಯಿಸುವುದರೊಂದಿಗೆ ಸಾವರ್ಕರ್ ಅವರು ಕರಾರುಗಳನ್ನು ಒಪ್ಪಿಕೊಂಡರು; ಡಿಸೆಂಬರ್ 27, 1923 ರಂದು ಆ ಕರಾರುಗಳಿಗೆ ಸಹಿ ಮಾಡಿದರು. ಷರತ್ತುಗಳ ಆಧಾರದಲ್ಲಿ ಸಾವರ್ಕರ್ ಅವರನ್ನು ಯೆರವಾಡಾ ಜೈಲಿನಿಂದ ಜನವರಿ 6, 1924 ರಂದು ಬಿಡುಗಡೆ ಮಾಡಲಾಯಿತು.

ಆ ಕರಾರುಗಳು ಹೀಗಿದ್ದವು:

ಸಾವರ್ಕರ್ ಅವರು ರತ್ನಗಿರಿಯಲ್ಲಿ ವಾಸ ಮಾಡಬೇಕಿತ್ತು ಮತ್ತು ಸರ್ಕಾರದ ಅಥವಾ ತುರ್ತು ಇದ್ದರೆ ಜಿಲ್ಲಾ ಮ್ಯಾಜಿಸ್ಟ್ರೇಟ್ ಅನುಮತಿಯಿಲ್ಲದೇ ಆ ಜಿಲ್ಲೆಯ ಮಿತಿ ಮೀರಿ ಹೋಗಬಾರದು; ಐದು ವರ್ಷಗಳ ಕಾಲ ಸರ್ಕಾರದ ಅನುಮತಿಯಿಲ್ಲದೇ ಸಾರ್ವಜನಿಕವಾಗಿ ಅಥವಾ ಖಾಸಗಿಯಾಗಿ ಯಾವುದೇ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಬಾರದು. ಆ ಅವಧಿಯ ಕೊನೆಯಲ್ಲಿ ಸರ್ಕಾರದ ವಿವೇಚನೆಯ ಮೇಲೆ ಆ ನಿರ್ಬಂಧಗಳನ್ನು ನವೀಕರಿಸಬಹುದು.

ಇದು ಬ್ರಿಟಿಷ್ ಆಳರಸರಿಗೆ ಸಾವರ್ಕರ್ ಅವರು ಬರೆದು ಕೊಟ್ಟ ಕೊನೆಯ ವಾಗ್ದಾನವಲ್ಲ. ಕೀರ್ ಅವರು ಆ ಜೀವನ ಚರಿತ್ರೆಯಲ್ಲಿ ನೀಡಿರುವ ವಿವರಗಳ ಪ್ರಕಾರ 1934 ರಲ್ಲಿ ಅವರು ಇನ್ನೊಂದು ವಾಗ್ದಾನವನ್ನು ನೀಡಿದ್ದರು. ಹಿಂದೂ ಮಹಾಸಭಾದ ಸದಸ್ಯ ಮತ್ತು ರತ್ನಗಿರಿಯ ಜಗಳಗಂಟ ವ್ಯಕ್ತಿ ವಾಮನ್ ರಾವ್ ಚವಾಣ್ ಬಾಂಬೇಯಲ್ಲಿ ಸ್ವೀಟ್ ಲ್ಯಾಂಡ್ ಎಂಬ ಬ್ರಿಟಿಷ್ ಅಧಿಕಾರಿಯ ಮೇಲೆ ಗುಂಡು ಹಾರಿಸಿದ ಪ್ರಕರಣದಲ್ಲಿ ಸಾವರ್ಕರ್ ಅವರನ್ನು ಮತ್ತೆ ಬಂಧಿಸಲಾಗಿತ್ತು ಹಾಗೂ ಎರಡು ವಾರಗಳ ಕಾಲ ಬಂಧನದಲ್ಲಿರಿಸಲಾಗಿತ್ತು. ಮೇ 8, 1934 ರಲ್ಲಿ ರತ್ನಗಿರಿ ಜೈಲಿನಿಂದ ಒಂದು ಪತ್ರ ಬರೆದ ಸಾವರ್ಕರ್ ವಾಮನ್ ಚವಾಣ್ ಮತ್ತು ಗಜಾನನ್ ದಾಂಬ್ಲೆಗೂ ತನಗೂ ಯಾವುದೇ ಸಂಬಂಧವಿಲ್ಲ; ವಾಮನ್ ಚವಾಣ್ ತನ್ನ ಟ್ರಂಕನ್ನು ಗಜಾನನ್ ದಾಂಬ್ಲೆಯ ಬಳಿ ಇಟ್ಟಿದ್ದರಿಂದ ಅವನನ್ನೂ ಬಂಧಿಸಲಾಗಿತ್ತು. . . . ಸರ್ಕಾರದ ಪೂರ್ವ ಅನುಮತಿಯಿಲ್ಲದೇ ಯಾವುದೇ ಸಾಮಾಜಿಕ ಅಥವಾ ರಾಜಕೀಯ ಹೋರಾಟದಲ್ಲಿ ಭಾಗವಹಿಸುವುದನ್ನು ತಾನು ನಿಲ್ಲಿಸಲು ಸಿದ್ಧವಿರುವುದಾಗಿ ಸಾವರ್ಕರ್ ತಿಳಿಸಿದರು.

ಸಾವರ್ಕರ್ ಅವರ ಮನಃಪರಿವರ್ತನೆ

ಆರ್.ಸಿ.ಮಜುಂದಾರ್ ಅವರನ್ನು ಒಬ ನಿಜವಾದ ಭಾರತೀಯ ಎಂದು ಹಿಂದುತ್ವ ಪಡೆ ಭಾವಿಸುತ್ತದೆ. ಅವರು ಸೆಲ್ಯುಲರ್ ಜೈಲಿನ ಬಗ್ಗೆ 'ಪೀನಲ್ ಸೆಟ್‌ಲ್ಮೆಂಟ್ ಇನ್ ಅಂಡಮಾನ್ಸ್' ಎಂಬ ಈ ವಿಷಯದಲ್ಲಿ ಮೈಲಿಗಲ್ಲು ಎಂದೆನಿಸುವ ತಮ್ಮ ಪುಸ್ತಕಕ್ಕೆ, ಬರೆಯುವಾಗ ಸಂಬಂಧಪಟ್ಟ ಎಲ್ಲಾ ರಾಶಿ ರಾಶಿ ದಾಖಲೆಗಳನ್ನು ಪರಿಶೀಲಿಸುತ್ತಿದ್ದಾಗ ಸಾವರ್ಕರ್ ಮತ್ತು ಬರೀಂದ್ರ ಕುಮಾರ್ ಘೋಷ್ ಅವರ ಕ್ಷಮಾಯಾಚನೆಯ ಅರ್ಜಿಗಳನ್ನು ಕಂಡು ಆಘಾತಗೊಂಡಿರಬಹುದು. ಅವರು ಹೀಗೆ ಬರೆಯುತ್ತಾರೆ:

ಅಂಡಮಾನಿನಲ್ಲಿ ಜೈಲುವಾಸದಲ್ಲಿರುವ ಮಹಾನ್ ಕ್ರಾಂತಿಕಾರಿ ಮುಖಂಡರಲ್ಲಿ ಬ್ರಿಟಿಷ್ ಸರ್ಕಾರದ ಬಗ್ಗೆ ಅವರ ನಿಲುವು ಮತ್ತು ಕ್ರಾಂತಿ ಅಥವಾ ಗುಪ್ತ ಸಂಚುಗಳ ಮೂಲಕ ಅದನ್ನು ನಾಶಮಾಡಬಹುದು ಎಂಬ ಅವರ ಅಭಿಪ್ರಾಯಗಳಲ್ಲಿ ಭಾರಿ ಬದಲಾವಣೆಗಳಾಗಿರುವುದನ್ನು ಇದು ನಿಸ್ಸಂಶಯವಾಗಿಯೂ ಸೂಚ್ಯವಾಗಿ ಹೇಳುತ್ತದೆ.

ಸೆಲ್ಯುಲರ್ ಜೈಲಿಗೆ ಸಂಬಂಧಪಟ್ಟಂಥ ಬ್ರಿಟಿಷ್ ಪತ್ರಾಗಾರವನ್ನು ಆಳವಾಗಿ ಅಧ್ಯಯನ ಮಾಡಿದ ಆರ್.ಸಿ.ಮಜುಂದಾರ್ ಜೈಲಿನಿಂದ ಹೊರ ಬಂದ ಮೇಲೆ ಸಾವರ್ಕರ್ ಅವರು ಬರೆದಿದ್ದ ಅವರ ಜೀವನ ವೃತ್ತಾಂತದೊಂದಿಗೆ ಹೋಲಿಕೆ ಮಾಡಿದರು. ಗೌರ್ನರ್ ಜನರಲ್ ಕೌನ್ಸಿಲಿನ ಗೃಹ ಸದಸ್ಯ, ಸರ್ ರೆಜಿನಾಲ್ಡ್ ಕ್ರಡಕ್ ಮತ್ತು ಸಾವರ್ಕರ್ ಅವರ ನಡುವೆ ಆದ ಕಲಾಪಗಳ ಬಗ್ಗೆ ವಿಶೇಷ ಗಮನ ನೀಡಿದರು. (ಇಂತಹ ಒಂದು ಸಭೆಯ ಸಮಯದಲ್ಲಿ ಸಾವರ್ಕರ್ ಅವರು ತಮ್ಮ ಕ್ಷಮಾದಾನ ಕೋರಿಕೆ ಪತ್ರವನ್ನು ಬ್ರಿಟಿಷ್ ಸರ್ಕಾರಕ್ಕೆ ವೈಯಕ್ತಿಕವಾಗಿ ಕ್ರಡಕ್ ಅವರ ಮೂಲಕ ಸಲ್ಲಿಸಿದರು.) ಈ ದಾಖಲೆಗಳನ್ನೆಲ್ಲಾ ಪರಿಶೀಲಿಸಿದ ನಂತರ ಮಜುಂದಾರ್ ಅವರು ನೇರಾ ನೇರ ಈ ತೀರ್ಮಾನಕ್ಕೆ ಬಂದರು:

ಸಾವರ್ಕರ್ ಅವರು ತಮ್ಮ ನಿಲುವನ್ನು ಬದಲಾಯಿಸಿದ್ದಾಗ್ಯೂ ಸರ್ಕಾರವು ತನ್ನ ಮೊದಲ ನಿಲುವನ್ನೇ ಮುಂದುವರಿಸಿತು. 'ಕಡ್ಡಾಯ ಶಿಕ್ಷಣ ಕುರಿತ ಗೋಖಲೆಯವರು ಶಾಸನ ಪರಿಷತ್ತಿನಲ್ಲಿ ಮಂಡಿಸಿದ ನಿರ್ಣಯವನ್ನು ಸರ್ಕಾರವು ಒಪ್ಪಿದ್ದೇ ಆದರೆ ಮತ್ತು ಭಾರತೀಯರು ಒಂದು ರಾಷ್ಟ್ರವಾಗಿ ಎದ್ದುಬರಲು ಅಂತಹ ಪ್ರಗತಿಪರ ಕ್ರಮವನ್ನು ಖಾತರಿಪಡಿಸಿದ್ದೇ ಆದರೆ, ಆಗ ಎಲ್ಲಾ ಕ್ರಾಂತಿಕಾರಿಗಳು ಶಾಂತಿಯ ಪಥವನ್ನು ಅನುಸರಿಸುತ್ತಾರೆ.' 'ನಿಶ್ಚಿತವಾಗಿಯೂ ಇಂತಹ ಶಾಂತಿಯ ವಿಧಾನಗಳ ಮೂಲಕ ಮುನ್ನಡೆದರೆ, ನಾವು ಹಿಂಸೆಯ ವಿಧಾನಗಳನ್ನು ಅನುಸರಿಸುವುದು ಅನೈತಿಕವಾಗುತ್ತದೆ.' ಎಂದು ಸಾವರ್ಕರ್ ಹೇಳಿದರು. ಇದಕ್ಕೆ ಕ್ರಡಕ್ ಅವರು ಹೀಗೆ ಉತ್ತರಿಸಿದರು: 'ಕ್ಷಮಿಸಿ, ನೀವು ಸಂಪೂರ್ಣವಾಗಿ ತಪ್ಪು ತಿಳಿದಿದ್ದೀರಿ, ಅವರು ನಿಮ್ಮ ಬಗ್ಗೆ ವಿಶ್ವಾಸ ವ್ಯಕ್ತಪಡಿಸುತ್ತಾರೆ ಆದರೆ ಮತ್ತೊಂದೆಡೆ ಉಗ್ರವಾದವನ್ನು ಸಮರ್ಥಿಸುತ್ತಾರೆ. ಭಾರತದಲ್ಲಿ ಮತ್ತು ಅಮೆರಿಕಾದಲ್ಲಿ ನಿಮ್ಮ ಅನುಯಾಯಿಗಳು ಈಗಲೂ ಕೂಡ ತಮ್ಮ ಗುಪ್ತ ಸಮಾಜದ ಯೋಜನೆಗಳಲ್ಲಿ ಮತ್ತು ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ.

ಸಾವರ್ಕರ್ ಕ್ಷಮಾದಾನಕ್ಕಾಗಿ ಕ್ರಡಕ್‌ರವರ ಸುತ್ತಮುತ್ತ ಸುತ್ತಾಡುತ್ತಿದ್ದಾಗಲೂ ಮತ್ತು ಅನುಕಂಪಕ್ಕಾಗಿ ಗೋಗರೆಯುತ್ತಿದ್ದಾಗಲೂ ಅವರು ಈ ಮೇಲಿನಂತೆ ವಾಸ್ತವವನ್ನು ವಿವರಿಸಿದ್ದು ಬ್ರಿಟಿಷ್ ಸರ್ಕಾರವು ಅವರನ್ನು ಏಕೆ ಜೈಲಿನಿಂದ ಬಿಡುಗಡೆ ಮಾಡುತ್ತಿಲ್ಲ ಎನ್ನುವುದಕ್ಕೆ ಉತ್ತರವಾಗುತ್ತದೆ. ಕ್ಷಮಾದಾನಕ್ಕಾಗಿನ ಅವರ ಮನವಿಯು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಮತ್ತೊಂದು ಅವಕಾಶವನ್ನು ಪಡೆಯುವುದಕ್ಕಾಗಿ ಸಾವರ್ಕರ್ ಅವರ ಒಂದು ತಂತ್ರ ಎಂದು ಹಿಂದುತ್ವ ಪಡೆಗಳು ಆಗಾಗ ಸಮರ್ಥಿಸಿಕೊಳ್ಳುತ್ತವೆ. ಈ ಷಡ್ಯಂತ್ರ ಬ್ರಿಟಿಷ್ ಸರ್ಕಾರಕ್ಕೆ ಗೊತ್ತಾಗಿರುವುದರಿಂದಲೇ ಸಾವರ್ಕರ್ ಅವರ ಜೈಲು ಅವಧಿಯನ್ನು ರದ್ದು ಮಾಡುತ್ತಿಲ್ಲ ಮತ್ತು ಅವರನ್ನು ಬಿಡುಗಡೆ ಮಾಡುತ್ತಿಲ್ಲ ಎಂದೂ ಅವರು ಹೇಳುತ್ತಿರುತ್ತಾರೆ. ಆದರೆ ಸಾವರ್ಕರ್ ಅವರನ್ನು ಏಕೆ ಬಿಡುಗಡೆ ಮಾಡುತ್ತಿಲ್ಲ ಎಂಬುದನ್ನು ಮಜುಂದಾರ್ ಅವರ ವಿವರಣೆಯು ಬಹಳ ಸ್ಪಷ್ಟವಾಗಿ ಹೇಳಿದೆ. ಬ್ರಿಟಿಷ್ ದೊರೆಗಳಿಗೆ ಸಾವರ್ಕರ್ ಅವರು ಶರಣಾಗಿರುವುದು ನಿಜವೇ ಆದರೂ ಭಾರತ ಮತ್ತು ಹೊರಗಡೆ ಇರುವ ರಾಷ್ಟ್ರೀಯವಾದಿ ಕ್ರಾಂತಿಕಾರಿಗಳು ಈ ಸತ್ಯ ಗೊತ್ತಿಲ್ಲದೇ ಅವರನ್ನು ಬಾರತದ ವಿಮೋಚನೆಯ ಬಹು ದೊಡ್ಡ ನಾಯಕ ಎಂದು ಬಗೆದಿದ್ದಾರೆ. ಹೋರಾಟಗಳು ವ್ಯರ್ಥ ಎನ್ನುವುದನ್ನು ಕ್ರಾಂತಿಕಾರಿಗಳಿಗೆ ಮನವರಿಕೆ ಮಾಡಿಕೊಡುವ ಉದ್ದೇಶದಿಂದ ಸಾವರ್ಕರ್ ಅವರನ್ನು ಜೈಲಿನಲ್ಲಿ ಬಂಧಿಸಿಡುವುದು ಆಳರಸರಿಗೆ ಸನ್ನಿವೇಶದ ತುರ್ತಾಗಿತ್ತು. ಆದರೆ ಹಿಂದೂ–ಮುಸ್ಲಿಂ ಐಕ್ಯತೆಯನ್ನು ಮುರಿಯಲು ಸಾವರ್ಕರ್ ಅವರನ್ನು ಜೈಲಿನಿಂದ ಬಿಡುಗಡೆ ಮಾಡಬೇಕು ಎಂದು 1920 ರಲ್ಲಿ ಯಾವಾಗ ಬ್ರಿಟಿಷ್ ದೊರೆಗಳಿಗೆ ಅನಿಸಿತೋ, ಎರಡು ಅವಧಿಯ ಐವತ್ತು ವರ್ಷಗಳ ಜೈಲು ವಾಸದ ಶಿಕ್ಷೆ ಎಂದು ಘೋಷಿಸಿದ್ದರೂ ಅವರನ್ನು ಬಿಡುಗಡೆ ಮಾಡಲು ಆಗ ಅವರು ಸ್ವಲ್ಪವೂ ಹಿಂದುಮುಂದೆ ನೋಡಲಿಲ್ಲ.

ಕ್ಷಮಾ ಯಾಚನೆಯ ಅರ್ಜಿ ಕುರಿತು ಕ್ರಡಕ್ ಅವರ ಟಿಪ್ಪಣಿಗಳು

ಅಂಡಮಾನ್ ಸೆಲ್ಯುಲರ್ ಜೈಲಿನಲ್ಲಿನ 'ವೈಯಕ್ತಿಕವಾಗಿ' ಕ್ಷಮೆ ಬೇಡುವವರು ಮತ್ತು ಕ್ರಡಕ್ ಅವರ ನಡುವೆ ಏನು ಸಂಭವಿಸಿತು ಎಂಬ ಸಂಗತಿಯನ್ನು ಕ್ರಡಕ್ ಅವರ ಟಿಪ್ಪಣಿಯಲ್ಲಿ ಸುರಕ್ಷಿತವಾಗಿ ಇಡಲಾಗಿದೆ; ಅವರು ನವಂಬರ್ 23, 1913 ರಂದು ಮಹಾರಾಜ ಹಡಗಿನಲ್ಲಿ ಅಂಡಮಾನಿನಿಂದ ಭಾರತದ ಪ್ರಧಾನ ಪ್ರದೇಶಕ್ಕೆ ಹಿಂತಿರುಗುವಾಗ ಆ ಟಿಪ್ಪಣಿಯನ್ನು ಬರೆದಿದ್ದರು. ಆ ಟಿಪ್ಪಣಿಯನ್ನು ಗೌರ್ನರ್ ಜನರಲ್ ಅವರು ಮಾತ್ರ ಅವಲೋಕಿಸಬೇಕು ಮತ್ತು ಅವರು

ಪುಟ 04 ಕ್ಕೆ

ಸಂಪಾದಕೀಯ

ನಡೆಯದ ಮುಷ್ಕರ ದಕ್ಕದ ಪರಿಹಾರ

ರಾಜ್ಯ ಸರ್ಕಾರಿ ನೌಕರರು ಒಂದು ಚರಿತ್ರಾರ್ಹ ಮುಷ್ಕರಕ್ಕೆ ಕಾಲಿಡುತ್ತಿದ್ದಾರೆ ಎಂಬ ಸುದ್ದಿ ದಟ್ಟವಾಗಿತ್ತು ಮುಷ್ಕರವೇನು ಆರಂಭ ಆಗಿಯೇ ಬಿಟ್ಟಿತ್ತು. ಮುಷ್ಕರಕ್ಕೆ ಕರೆಕೊಟ್ಟ ನೌಕರರು ಮಾತ್ರವಲ್ಲ, ಮುಷ್ಕರಕ್ಕೆ ಪರೋಕ್ಷ ಬೆಂಬಲ ನೀಡಿದವರೆಲ್ಲರೂ ಸಹ ಮುಷ್ಕರ ಯಶಸ್ವಿಯಾಗಲೆಂದು ಒಳಗೊಳಗೆ ಹರಸುತಿದ್ದರು. ಬಹುತೇಕ ಎಲ್ಲಾ ಇಲಾಖೆಗಳಲ್ಲಿ ಬೆಳಿಗ್ಗೆಯಿಂದಲೇ ಮುಷ್ಕರದ ಬಿಸಿ ವ್ಯಾಪಿಸಿತ್ತು. ನಾಗರಿಕರು ಸಹಜವಾಗಿ ಅನಾನುಕೂಲದ ಪರಿಸ್ಥಿತಿಯನ್ನು ಅನುಭವಿಸತೊಡಗಿದ್ದರು. ಆದರೆ ಅವರೆಲ್ಲರೂ ಸರ್ಕಾರದ ಹಠಮಾರಿತನವನ್ನು ಶಪಿಸಲಾರಂಭಿಸಿದ್ದರು.

ಆದರೆ ಎಲ್ಲವೂ ನೌಕರರ ನಿರೀಕ್ಷೆಯಂತೆ ನಡೆಯಲಿಲ್ಲ. ಮುಷ್ಕರ ಆರಂಭವಾಗಿ ಕೇವಲ ಮೂರು ಗಂಟೆಗಳಲ್ಲಿ ಮುಷ್ಕರವನ್ನು ಹಿಂಪಡೆದಿರುವುದಾಗಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಸಿ ಎಸ್ ಷಡಕ್ಷರಿಯವರು ಏಕಪಕ್ಷೀಯವಾಗಿ ನಿರ್ಣಯವನ್ನು ಪ್ರಕಟಿಸಿದರು. ಹಾಲಿ ಮೂಲವೇತನ ಮತ್ತು ತುಟ್ಟಿ ಭತ್ಯೆಗೆ ಹೆಚ್ಚುವರಿಯಾಗಿ ಶೇಕಡ 17%ರಷ್ಟು ವೇತನವನ್ನು ಮಧ್ಯಂತರ ಪರಿಹಾರವಾಗಿ ಘೋಷಿಸಿದಂತಾಗಿದೆ. 2006ರಲ್ಲಿ ಶೇ. 10%ರಷ್ಟು ಮಧ್ಯಂತರ ಪರಿಹಾರ ನೀಡಲಾಗಿತ್ತು. ಮುಂದೆ ಐದನೇ ವೇತನ ಆಯೋಗದ ವರದಿಯನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೆ ತರುವಾಗ ಶೇ. 22ರಷ್ಟು ವೇತನ ಹೆಚ್ಚಳ ಮಾಡಲಾಗಿತ್ತು. 2014 ರಲ್ಲಿ ಒಟ್ಟು ಶೇ. 17.5 ರಷ್ಟು ಪರಿಹಾರ ನೀಡಲಾಗಿತ್ತು. 6ನೇ ವೇತನ ಆಯೋಗ 2018ರಲ್ಲಿ ಜಾರಿಗೆ ತಂದಾಗ ಶೇ. 30ರಷ್ಟು ಹೆಚ್ಚಳ ನೀಡಲಾಗಿತ್ತು.

ಈ ಸಲ ಸರ್ಕಾರಿ ನೌಕರರ ಬೇಡಿಕೆಗೆ ಬಸವರಾಜ ಬೊಮ್ಮಾಯಿ ಸರ್ಕಾರದಿಂದ ಸೂಕ್ತ ಸ್ಪಂದನೆ ಸಿಕ್ಕಿಲ್ಲ. ನೌಕರರ ಸಂಘದ ಅಧ್ಯಕ್ಷ ಷಡಕ್ಷರಿಯವರು ಮುಷ್ಕರವನ್ನು ಹಿಂಪಡೆಯಲು ಕೈಗೊಂಡ ಅವಸರದ ತೀರ್ಮಾನದಿಂದ ವಿವಿಧ ಸಂಘಟನೆಗಳು ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿವೆ. ಇದು ಮುಷ್ಕರಕ್ಕೆ ಮುಂದಾದ ಸರ್ಕಾರಿ ನೌಕರರಿಗೆ ಬಗೆದ ಮೋಸವೆಂದು ಬಣ್ಣಿಸಲಾಗುತ್ತಿದೆ. 2022ರ ಜುಲೈ ಒಂದರಿಂದ ಅನ್ವಯವಾಗುವಂತೆ ಶೇ. 40ರಷ್ಟು ವೇತನ ಹೆಚ್ಚಾಗಬೇಕೆಂದು ಮತ್ತು ನೂತನ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಬೇಕೆಂದು ಆಗ್ರಹಿಸಿ ಮುಷ್ಕರಕ್ಕೆ ಕರೆ ನೀಡಲಾಗಿತ್ತು. ಈ ಎರಡೂ ಮುಖ್ಯ ಬೇಡಿಕೆಗಳಿಗೆ ನೌಕರರ ಸಂಪೂರ್ಣ ಬೆಂಬಲ ಇದ್ದರೂ ಸರ್ಕಾರ ನೌಕರರ ಬೇಡಿಕೆಗಳಿಗೆ ಸ್ಪಂದಿಸಲಿಲ್ಲ. ಮುಖ್ಯ ಮಂತ್ರಿಗಳ ಮತ್ತು ನೌಕರರ ಸಂಘದ ಅಧ್ಯಕ್ಷರ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಹಳೆಯ ಪಿಂಚಣಿ ಯೋಜನೆ ಜಾರಿಗೆ ಸರ್ಕಾರ ಸಮಿತಿ ರಚಿಸಿರುವುದು ನೌಕರರ ಸಂಘಗಳ ನಡುವೆ ಒಡಕಿಗೆ ಕಾರಣವಾಗಿದೆ. ವೇತನ ಹೆಚ್ಚಳವನ್ನು ನೌಕರರ ಸಂಘ ಸ್ವಾಗತಿಸಿದರೆ, ಸಚಿವಾಲಯ ನೌಕರರ ಸಂಘ ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದೆ. ಮುಷ್ಕರಕ್ಕೆ ಕರೆ ನೀಡುವಾಗ ನೌಕರರೊಂದಿಗೆ ಚರ್ಚಿಸಲಾಗಿತ್ತು ಎನ್ನಲಾಗುತ್ತಿದ್ದು, ಮುಷ್ಕರವನ್ನು ಹಿಂಪಡೆಯುವಾಗ ಏಕಪಕ್ಷೀಯ ನಿರ್ಧಾರ ಕೈಗೊಳ್ಳಲಾಗಿದೆ ಎಂದು ನೌಕರರು ಆಕ್ಷೇಪ ಎತ್ತಿದ್ದಾರೆ. ಸಂಘದ ನಾಯಕರು ಸರ್ಕಾರವನ್ನು ಮೆಚ್ಚಿಸಿ ಅದರ ಲಾಭ ಪಡೆಯಲು ಪ್ರಯತ್ನಿಸಿದ್ದಾರೆ ಎಂದು ನೌಕರರು ಆಕ್ಷೇಪ ಎತ್ತಿದ್ದಾರೆ. ಸಂಘದ ನಾಯಕರು ಕಡಿಮೆ ಮಧ್ಯಂತರ ಪರಿಹಾರ ಕೊಡಿಸಿ ದ್ರೋಹ ಮಾಡಿದ್ದಾರೆ. ನೌಕರರು 8 ತಿಂಗಳ ವೇತನ ಹೆಚ್ಚಳವನ್ನು ಕಳೆದುಕೊಂಡಂತಾಗಿದೆ.

ಕಾರ್ಖಾನೆಗಳ ಕಾಯ್ದೆ ತಿದ್ದುಪಡಿ ವಿರೋಧಿಸಿ
ಮಾರ್ಚ್ 23 ರಂದು ಕೈಗಾರಿಕಾ ಮುಷ್ಕರಕ್ಕೆ ಜೆಸಿಟಿಯು ಕರೆ

ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ 2023 ಕೂಡಲೇ ವಾಪಸ್ಸು ಪಡೆಯಬೇಕೆಂದು ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ(ಜೆಸಿಟಿಯು) ಭಗತ್ ಸಿಂಗ್ ಹುತಾತ್ಮರಾದ ದಿನವಾದ ಮಾರ್ಚ್ 8 ರಂದು ಒಂದು ದಿನದ ಕೈಗಾರಿಕಾ ಮುಷ್ಕರಕ್ಕೆ ಕರೆ ನೀಡಿದೆ. ಬೆಂಗಳೂರು ನಗರದ ಸ್ವಾತಂತ್ರ ಉದ್ಯಾನವನದಲ್ಲಿ ಕೈಗಾರಿಕಾ ಕಾರ್ಮಿಕರ ಬೃಹತ್ ಪ್ರತಿಭಟನೆ ನಡೆಯಲಿದೆ ಹಾಗೂ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ಪ್ರತಿಭಟನೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದೆ.

ವಿಶ್ರಾಂತಿಯ ಮಧ್ಯಂತರವನ್ನು 5 ರಿಂದ 6 ಗಂಟೆಗೆ ಹೆಚ್ಚಿಸುವ ಮೂಲಕ ಕಾರ್ಮಿಕ ವಿರೋಧಿ ನೀತಿಗಳನ್ನು ಜಾರಿಗೊಳಿಸಿರುವುದರಿಂದ ಕಾರ್ಮಿಕರ ಶೋಷಣೆ ಹೆಚ್ಚಾಗುವುದು, ಗಾರ್ಮೆಂಟ್ಸ್ ನಂತಹ ಕೈಗಾರಿಕೆಗಳಲ್ಲಿ ಅಸುರಕ್ಷಿತ ಪರಿಸ್ಥಿತಿಗಳಲ್ಲಿ ಮಹಿಳಾ ಕಾರ್ಮಿಕರನ್ನು ರಾತ್ರಿಯ ಪಾಳಿಯಲ್ಲಿ ಬಲವಂತಪಡಿಸಲಾಗುವುದು, ರಾಜ್ಯ ಸರ್ಕಾರದ ಈ ತಿದ್ದುಪಡಿಗಳು, ದಿನಕ್ಕೆ 14 ಗಂಟೆಗಳ ಕಾಲ ಕೆಲಸ ಮಾಡಲು ಒತ್ತಾಯಿಸಲ್ಪಟ್ಟ ಬ್ರಿಟಿಷ್ ವಸಾಹತುಶಾಹಿ ಯುಗಕ್ಕೆ ಕಾರ್ಮಿಕರನ್ನು ಹಿಂದಕ್ಕೆ ತಳ್ಳುತ್ತದೆ ಎಂದು ಜೆಸಿಟಿಯು ಹೇಳಿದೆ.

ಪ್ರಪಂಚಾದ್ಯಂತ ಕೆಲಸದ ಅವಧಿಯನ್ನು ಕಡಿಮೆ ಮಾಡಿ, ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುವ ಪ್ರಯತ್ನಗಳು ನಡೆಯುತ್ತಿದೆ. ರಾಜ್ಯದ ಬಿಜೆಪಿ ಸರ್ಕಾರ ಕೈಗೊಂಡ ಈ ತಿದ್ದುಪಡಿಗಳು ನಮ್ಮ ದೇಶ ಅನುಮೋದಿಸಿರುವ ಐಎಲ್ಒ convention no.1 ನ ವಿರುದ್ಧವಾಗಿದೆ. ಇಂತಹ ಪರಿಸ್ಥಿತಿಯಲ್ಲಿ, ಸರ್ಕಾರ ಕೆಲಸದ ಅವಧಿಯನ್ನು ಹೆಚ್ಚಿಸಿ, ಓವರ್ ಟೈಮ್ ಗಂಟೆಗಳನ್ನು 75 ರಿಂದ 140 ಗಂಟೆಗಳಿಗೆ ಹೆಚ್ಚಿಸಿರುವ ಕ್ರಮದಿಂದ ನಿರುದ್ಯೋಗವೂ ಹೆಚ್ಚಲಿದೆ. ರಾಜ್ಯ ಸರ್ಕಾರ ಕಾರ್ಮಿಕ ಸಂಘಟನೆಗಳೊಂದಿಗೆ ಯಾವುದೇ ಚರ್ಚೆ ಮಾಡದೆ, ಇಂತಹ ಏಕಪಕ್ಷೀಯ ತಿರ್ಮಾನದ ಕ್ರಮ ಸಾಮಾಜಿಕ ಒಪ್ಪಂದಕ್ಕೆ ದ್ರೋಹವಾಗಿದೆ ಹಾಗೂ ಕೇವಲ ದೊಡ್ಡ ಕಾರ್ಪೊರೇಟ್ ಕಂಪನಿಗಳ ಪರವಾಗಿರುವ ತೀರ್ಮಾನವಾಗಿದೆ ಎಂದು ಅದು ಆರೋಪಿಸಿದೆ.

ಇದರ ಹಿನ್ನೆಲೆಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನವಾದ ಮಾರ್ಚ್ 8 ರಂದು, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮುಷ್ಕರದ ನೋಟಿಸ್ಸನ್ನು ಸಲ್ಲಿಸಲಾಗುವುದು. ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿರುವ ಕಾರ್ಖಾನೆಗಳ ನಿರ್ದೇಶಕರಿಗೆ ಮುಷ್ಕರದ ನೋಟೀಸ್ಸನ್ನು ನೀಡಲಾಗುವುದು ಎಂದು ಜೆಸಿಟಿಯು ತಿಳಿಸಿದೆ.

ಜೆಸಿಟಿಯು ವೇದಿಕೆಯಲ್ಲಿ ಸಿಐಟಿಯು, ಎಐಯುಟಿಯುಸಿ, ಐಎನ್‌ಟಿಯುಸಿ, ಎಐಟಿಯುಸಿ, ಹೆಚ್ಎಂಎಸ್, ಟಿಯುಸಿಸಿ, ಎಐಸಿಸಿಟಿಯು, ಹೆಚ್ಎಂಕೆಪಿ, ಜಿಎಟಿಡಬ್ಲ್ಯೂಯು, ಎನ್‌ಸಿಎಲ್, ಕೆಡಬ್ಲ್ಯೂಯು ಸಂಘಟನೆಗಳಿವೆ.

ಕಾರ್ಮಿಕರ ಕೆಲಸದ ಅವಧಿ ಹೆಚ್ಚಳ ವಿರೋಧಿಸಿ ರಾಜ್ಯಾದ್ಯಂತ ಸಿಐಟಿಯು ಪ್ರತಿಭಟನಾ ಪ್ರದರ್ಶನ

'ಕಾರ್ಖಾನೆ ಕಾಯ್ದೆ–1948'ಕ್ಕೆ ತಿದ್ದುಪಡಿ ಮಾಡಿ, ರಾಜ್ಯದ ಕಾರ್ಖಾನೆಗಳಲ್ಲಿ ದಿನದ ಕೆಲಸದ ಗರಿಷ್ಠ ಅವಧಿಯನ್ನು 9 ಗಂಟೆಯಿಂದ 12 ಗಂಟೆಗೆ ಹೆಚ್ಚಿಸುವ ಹಾಗೂ ದುಡಿಯುವ ಮಹಿಳೆಯರನ್ನು ರಾತ್ರಿ ಪಾಳಿಯಲ್ಲಿ ದುಡಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಡುವ 'ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ 2023' ನ್ನು ರಾಜ್ಯ ಬಿಜೆಪಿ ಸರ್ಕಾರ ವಿಧಾನ ಸಭೆಯಲ್ಲಿ ಮಂಡಿಸಿ ಅಂಗೀಕಾರ ಪಡೆದಿದೆ. ತಿದ್ದುಪಡಿ ವಿಧೇಯಕವನ್ನು ಹಿಂಪಡೆಯಲು ಆಗ್ರಹಿಸಿ ಹಾಗೂ ಕಾರ್ಮಿಕರ ಶೋಷಣೆಗೆ ಹಾಗೂ ಬಂಡವಾಳಗಾರರ ಲಾಭ ಹೆಚ್ಚಳಕ್ಕೆ ಅವಕಾಶ ನೀಡಿದ ರಾಜ್ಯದ ಬಿಜೆಪಿ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿ, ಮತ್ತು ವಾರಕ್ಕೆ 5 ದಿನ ಕೆಲಸ, ದಿನಕ್ಕೆ 7 ಗಂಟೆ ಅಥವಾ ವಾರಕ್ಕೆ 35 ಗಂಟೆ ಕೆಲಸದ ಅವಧಿ ನಿಗದಿಪಡಿಸಿ ಕಾಯ್ದೆಯನ್ನು ಮತ್ತೊಮ್ಮೆ ತಿದ್ದುಪಡಿ ಮಾಡಬೇಕೆಂದು ಒತ್ತಾಯಿಸಿ ಮಾರ್ಚ್ 2ರಂದು ರಾಜ್ಯಾದ್ಯಂತ ಪ್ರತಿಭಟನೆಗೆ ಸಿಐಟಿಯು ಕರೆಕೊಟ್ಟಿತ್ತು. ರಾಜ್ಯದ ಹಲವೆಡೆ ಸಿಐಟಿಯು ಸಂಘಟನೆ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನಗಳು ನಡೆದ ವರದಿಗಳು ಬಂದಿವೆ.



ಬೆಂಗಳೂರು:

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಸಿಐಟಿಯು ಬೆಂಗಳೂರು ಉತ್ತರ, ದಕ್ಷಿಣ ಮತ್ತು ರಾಮನಗರ ಜಿಲ್ಲಾ ಸಮಿತಿಗಳು ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದವು. ಸರ್ಕಾರದ ತಿದ್ದುಪಡಿ ವಿಧೇಯಕ ಜಾರಿ ಖಂಡಿಸಿ ವಿಧೇಯಕದ ಪ್ರತಿಯನ್ನು ದಹನ ಮಾಡುವ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಮೂರೂ ಜಿಲ್ಲಾ ಸಮಿತಿಯ ಮುಖಂಡರು ರಾಜ್ಯ ಸರ್ಕಾರದ ಕಾರ್ಮಿಕ ವಿರೋಧಿ ಧೋರಣೆಗಳನ್ನು ಖಂಡಿಸಿ ಮಾತನಾಡಿದರು.

ಮಂಗಳೂರು:

ಫ್ಯಾಕ್ಟರಿ ಕಾಯಿದೆಯನ್ನು ತಿದ್ದುಪಡಿ ಮಾಡಿ ದಿನದ ದುಡಿಮೆಯ ಅವಧಿಯನ್ನು 3 ಗಂಟೆ ಹೆಚ್ಚಿಸಿ 12 ಗಂಟೆ ನಿಗದಿಗೊಳಿಸಿ ಮೇ ದಿನದ 8 ಗಂಟೆ ದುಡಿಮೆಯನ್ನು ನಿರರ್ಥಕಗೊಳಿಸಿ ಕರ್ನಾಟಕ ರಾಜ್ಯ ಸರಕಾರ ಮಂಡಿಸಿದ ಮಸೂದೆಯನ್ನು ಖಂಡಿಸಿ ಜೆಸಿಟಿಯುವಿನ ನೇತೃತ್ವದಲ್ಲಿ ಮಂಗಳೂರಿನಲ್ಲಿ ಮಾರ್ಚ್ 1 ರಂದು ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು.

ರಾಜ್ಯಾದ್ಯಂತ ಕಾರ್ಮಿಕ ಸಂಘಟನೆಗಳು ಮಾರ್ಚ್ 1 ರಂದು ದುಡಿಮೆಯ ಸ್ಥಳದಲ್ಲಿ ಹಾಗೂ ನಗರ ಕೇಂದ್ರಗಳಲ್ಲಿ ಸದ್ರಿ ತಿದ್ದುಪಡಿ ಮಸೂದೆಯನ್ನು ಖಂಡಿಸಿ ಪ್ರತಿಭಟನೆ ನಡೆಸಲು ಕರೆ ನೀಡಿದ ಮೇರೆಗೆ, ಮಂಗಳೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿಐಟಿಯು ಮತ್ತು ಇಂಟಕ್ ಕೇಂದ್ರ ಸಂಘಟನೆಗಳಿಗೆ ಸೇರಿದ ಕಾರ್ಮಿಕರು ಭಾಗವಹಿಸಿದ್ದರು. ಪ್ರಸ್ತಾವಿತ ಮಸೂದೆಯಲ್ಲಿ ರಾತ್ರಿ ಪಾಳಿಯಲ್ಲಿ ಮಹಿಳೆಯರು ಕೆಲಸ ಮಾಡಬೇಕೆಂಬ ಪ್ರಸ್ತಾಪವನ್ನು ಖಂಡಿಸಲಾಯಿತು. ಈಗ ರಾಜ್ಯದ ಆಡಳಿತದ ಮಹಿಳೆಯರು ಸುರಕ್ಷಿತವಾಗಿ ಓಡಾಡುವ ಭದ್ರತೆ ಒದಗಿಸಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ ರಾತ್ರಿ ಪಾಳಿಯಲ್ಲಿ ಮಹಿಳೆಯರು ಒಪ್ಪಿಗೆ ಕೊಡುವರೆಂಬ ಕಾರಣಕ್ಕೆ ದುಡಿಸುವುದು ಸಲ್ಲದು ಎಂದು ಪ್ರತಿಭಟನಾಕಾರರು ಘೋಷಿಸಿದರು. ಬಂಡವಾಳದಾರರ ಅನುಕೂಲಕ್ಕಾಗಿ ಈ ತಿದ್ದುಪಡಿ ತರಲಾಗಿದೆ ಎಂದು ಟೀಕಿಸಲಾಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಸಮಿತಿ ಉಪಾಧ್ಯಕ್ಷರಾದ ವಸಂತ ಆಚಾರಿ, ಇಂಟಕ್‌ನ ದ.ಕ. ಜಿಲ್ಲಾ ಸಮಿತಿ ಅಧ್ಯಕ್ಷ ಬೊಂಡಾಲ ಚಿತ್ತರಂಜನ ಶೆಟ್ಟಿ ಮಾತನಾಡಿದರು. ಸಿಐಟಿಯು ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಸ್ವಾಗತಿಸಿದರು. ಸಿಐಟಿಯು ಜಿಲ್ಲಾ ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ಯೋಗೀಶ್ ಜಪ್ಪಿನಮೊಗರು ಮೊದಲಾದವರು ಭಾಗವಹಿಸಿದ್ದರು.

ತುಮಕೂರು:

ನೂರಾರು ಕಾರ್ಮಿಕರು ತುಮಕೂರಿನ ಜಿಲ್ಲಾಧಿಕಾರಿಗಳ ಕಛೇರಿ ಎದುರು ಸಿಐಟಿಯು ಜಿಲ್ಲಾ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು. ಸಿಐಟಿಯು ಜಿಲ್ಲಾ ಅಧ್ಯಕ್ಷ ಸೈಯದ್ ಮುಜೀಬ್ ಮಾತನಾಡಿ, ಈ ಹಿಂದೆ ವಿಧಾನ ಪರಿಷತ್ ನಲ್ಲಿ ಸೋಲು ಕಂಡಿದ್ದ ಮಸೂದೆಯನ್ನು ಮತ್ತೆ ಚರ್ಚೆಯೇ ಇಲ್ಲದೆ ಅಂಗೀಕರಿಸಲಾಗಿದೆ, ಇದು ಅನ್ಯಾಯ. ದಿನಕ್ಕೆ 8 ಗಂಟೆಯ ದುಡಿಮೆಯ ಸೂತ್ರ ವೈಚಾರಿಕವಾಗಿ ಜಗತ್ತಿನ ಎಲ್ಲೆಡೆ ಇರುವಾಗ, ಕಾರ್ಮಿಕರಿಗೆ ಅನ್ಯಾಯವೆಸಗುವ ಈ ಹೊಸ ನೀತಿ ಏಕೆ ಎಂದು ಪ್ರಶ್ನಿಸಿದರು.

ಸಿಐಟಿಯು ಜಿಲ್ಲಾ ಪ್ರಧಾನ

ಪುಟ 5 ಕ್ಕೆ

ಬುಲ್ಡೋಜರ್ ಬಳಸಿ ಒಕ್ಕಲೆಬ್ಬಿಸುವುದರ ವಿರುದ್ಧ ಜಮ್ಮು–ಕಾಶ್ಮೀರ ರೈತರ ಹೋರಾಟ: ಎಐಕೆಎಸ್ ಬೆಂಬಲ

ಎಲ್ಲಾ ರಾಜ್ಯ ಭೂಕಾಯಿದೆಗಳನ್ನು ರದ್ದುಗೊಳಿಸುವ ಅಕ್ಟೋಬರ್ 2020ರ ಅಧಿಸೂಚನೆಯನ್ನು ಹಿಂಪಡೆಯಲು ಆಗ್ರಹ

ಜಮ್ಮು ಮತ್ತು ಕಾಶ್ಮೀರದ ಉಪರಾಜ್ಯಪಾಲ ಮನೋಜ್ ಸಿನ್ಹಾ ಮತ್ತು ಅವರ ಆಡಳಿತವು ವಿವಿಧ ಜಿಲ್ಲೆಗಳಲ್ಲಿ ನೂರಾರು ಬಡ ರೈತರು ಮತ್ತು ಸಣ್ಣ ಉತ್ಪಾದಕರ ವಿರುದ್ಧ ಬುಲ್ಡೋಜರ್‌ಗಳನ್ನು ಬಳಸಿ ತೆರವು ಮಾಡುವ ಹುನ್ನಾರದಲ್ಲಿದೆ, ಅವರನ್ನು ಬಲವಂತವಾಗಿ ಮನೆಗಳಿಂದ, ಅವರು ಸಾಗುವಳಿ ಮಾಡುತ್ತಿರುವ ಭೂಮಿಯಿಂದ ಹೊರಹಾಕಲಾಗುತ್ತಿದೆ. ಅವರು 'ಅಕ್ರಮ ನಿವಾಸಿಗಳು', ಅವರಿಂದ ಸರ್ಕಾರಿ ಭೂಮಿಯನ್ನು ಹಿಂಪಡೆಯುವ ಒಂದು ರೆವನ್ಯೂ ಆದೇಶವಿದೆ ಎಂದು ಅದನ್ನು ನೆಪವಾಗಿಸಿಕೊಂಡು ಈ ಕೃತ್ಯಗಳನ್ನು ನಡೆಸಲಾಗುತ್ತಿದೆ.

ಇದರ ವಿರುದ್ಧ ರೈತರು ಜಮ್ಮು ಮತ್ತು ಕಾಶ್ಮೀರದಾದ್ಯಂತ ಪ್ರತಿಭಟನೆ ನಡೆಸುತ್ತಿದ್ದಾರೆ. ದಶಕಗಳಿಂದ ಸರ್ಕಾರಿ ಭೂಮಿಯನ್ನು ಅವಲಂಬಿಸಿರುವ ಸಣ್ಣ ಉತ್ಪಾದಕರಾಗಿ ಹಳ್ಳಿಗಳಲ್ಲಿ ವಾಸಿಸುವ ರೈತರು ಮತ್ತು ಭೂರಹಿತರಿಗೆ ಹಾನಿ ಮಾಡುವ ಇಂತಹ ಕ್ರಮಗಳನ್ನು ನಿಲ್ಲಿಸಬೇಕೆಂದು ರೈತ ಸಂಘಟನೆಗಳು ಮನೋಜ್ ಸಿನ್ಹಾ ಆಡಳಿತವನ್ನು ಒತ್ತಾಯಿಸುತ್ತಿವೆ. ಈ ಅಧಿಸೂಚನೆಯ ವಿರುದ್ಧ ರಾಜಕೀಯ ಪಕ್ಷಗಳೂ ಹರಿಹಾಯ್ದಿವೆ.

ಕಂದಾಯ ಇಲಾಖೆಯು 20 ಲಕ್ಷಕ್ಕೂ ಹೆಚ್ಚು ಕನಲ್ (ಒಂದು ಕನಲ್=ಎಂಟನೇ ಒಂದು ಎಕರೆ) ಭೂಮಿಯ ಒತ್ತುವರಿಯಾಗಿದೆ ಎಂದು ಒಂದು ಪಟ್ಟಿಯನ್ನು ಜಮ್ಮು ಮತ್ತು ಕಾಶ್ಮೀರದ ಹೈಕೋರ್ಟ್‌ಗೆ ಸಲ್ಲಿಸಿದೆ. ಅವರ ಪ್ರಕಾರ ಒತ್ತುವರಿಗಳು 3 ಮರ್ಲ (ಅರ್ಧ ಕನಾಲ್) ಗಳಿಂದ ದೊಡ್ಡ ಪ್ರಮಾಣದ ಭೂಮಿವರೆಗೆ ಇವೆ. ಒತ್ತುವರಿಗಳು ಹೊಸದೇನಲ್ಲ, ಇದು ಡೋಗ್ರಾ ಅರಸರ ಆಳ್ವಿಕೆಯಲ್ಲಿ ನಡೆದಿವೆ ಮತ್ತು ಸ್ವಾತಂತ್ರ್ಯದ ನಂತರ ಇಲ್ಲಿಯವರೆಗೆ ಮುಂದುವರೆದಿದೆ. ಹೀಗಾಗಿ, ಉಪರಾಜ್ಯಪಾಲರ ಅಡಿಯಲ್ಲಿ ಪ್ರಸ್ತುತ ಆಡಳಿತವು ಪ್ರಸ್ತುತ ನಿವಾಸಿಗಳಿಗೆ ಭೂಗಳ್ಳರೆಂದೇ ಹಣೆಪಟ್ಟಿ ಹಚ್ಚುತ್ತಿರುವುದು ಕೇವಲ ಅನ್ಯಾಯಯುತವಷ್ಟೇ ಅಲ್ಲ, ಸಂಪೂರ್ಣವಾಗಿ ತಪ್ಪುದಾರಿಗೆಳೆಯುವ ಕ್ರಮ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಉಪರಾಜ್ಯಪಾಲರ ಆಡಳಿತದ ಈ ನಡೆಯನ್ನು ಖಂಡಿಸುತ್ತ ಫೆಬ್ರುವರಿ 24 ರಂದು ನವದೆಹಲಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದೆ. ಸುಪ್ರಿಂಕೋರ್ಟ್ ಆದೇಶವು ಸಹ 30 ವರ್ಷಗಳಿಗಿಂತ ಹೆಚ್ಚು ಕಾಲ ನಿರಂತರವಾಗಿ ಪ್ರತಿಕೂಲ ಸ್ವಾಧೀನವನ್ನು ಹೊಂದಿರುವವರು ಸರ್ಕಾರಿ ಭೂಮಿಯನ್ನು ಸಕ್ರಮಗೊಳಿಸುವ ಹಕ್ಕುಗಳನ್ನು ಪಡೆದುಕೊಂಡಿರಬಹುದು ಎಂದು ಗಮನಿಸಿರುವುದನ್ನು ಎಐಕೆಎಸ್ ನೆನಪಿಸಿದೆ.

1924 ರಿಂದ ಇಲ್ಲಿಯವರೆಗೆ ಸರ್ಕಾರಿ ಭೂಮಿಯಲ್ಲಿ ವಾಸಿಸುವವರ ಹಕ್ಕುಗಳನ್ನು ಗುರುತಿಸುವ ಹಲವಾರು ಸರ್ಕಾರಿ ಆದೇಶಗಳು ಮತ್ತು ಅಧಿಸೂಚನೆಗಳು ಇವೆ. ಜಮ್ಮು ಮತ್ತು ಕಾಶ್ಮೀರದ ಜನರು ದೇಶವಿಭಜನೆ ಮತ್ತು ಸಂಬಂಧಿತ ವಲಸೆಗಳಿಂದ ತೊಂದರೆಗೀಡಾಗಿರುವ ಇತಿಹಾಸವನ್ನು ಹೊಂದಿದ್ದಾರೆ. ಜಮ್ಮು ಮತ್ತು ಕಾಶ್ಮೀರದಲ್ಲಿನ ಅಂದಿನ ಆಡಳಿತವು ಸರ್ಕಾರಿ ಭೂಮಿಯಲ್ಲಿ ನೆಲೆಸಲು ಜನರಿಗೆ ಸಹಾಯ ಮಾಡಿತು ಮತ್ತು ಸರ್ಕಾರಿ ಭೂಮಿಯಲ್ಲಿ ಸಾಗುವಳಿಯನ್ನು ಪ್ರೋತ್ಸಾಹಿಸಲು 'ಹೆಚ್ಚು ಆಹಾರವನ್ನು ಬೆಳೆಯಿರಿ' ನಂತಹ ಯೋಜನೆಗಳನ್ನು ಸಹ ಒದಗಿಸಿತು. ಅನೇಕ ತಲೆಮಾರುಗಳು ಅಂತಹ ಭೂಮಿಯಲ್ಲಿ ವಾಸಿಸುತ್ತಿದ್ದಾರೆ ಮತ್ತು ತಮ್ಮ ಜೀವನಕ್ಕೆ ಆಧಾರವಾಗಿ ಅವುಗಳನ್ನು ಸಾಗುವಳಿ ಮಾಡುತ್ತಿದ್ದಾರೆ.

ಇವನ್ನೆಲ್ಲ ಸಕ್ರಮಗೊಳಿಸಬೇಕು ಮತ್ತು ಈ ರೈತರ ಭೂಮಿಯ ಹಕ್ಕುಗಳನ್ನು ರಕ್ಷಿಸಬೇಕು. ಬದಲಾಗಿ, ಉಪರಾಜ್ಯಪಾಲರು ಯಾವುದೇ ಪರಿಹಾರವನ್ನು ನೀಡದೆ ಬಡ ಜನರನ್ನು ಭೂಮಿಯಿಂದ ಹೊರಹಾಕಲು ಬುಲ್ಡೋಜರ್‌ಗಳನ್ನು ಬಳಸುತ್ತಿದ್ದಾರೆ. ಇಂತಹ ಕಾನೂನುಬಾಹಿರ ಕ್ರಮಗಳನ್ನು ರೈತರು ಮತ್ತು ಸಾಮಾನ್ಯ ಜನರು ಸಹಿಸಲು ಸಾಧ್ಯವಿಲ್ಲ ಎಂದಿರುವ ಎಐಕೆಎಸ್ ಮುಂದಿನ ದಿನಗಳಲ್ಲಿ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದೆ.

ಕೇಂದ್ರ ಸರ್ಕಾರರ ಮಧ್ಯಪ್ರವೇಶಿಸಿ ಜಮ್ಮು ಮತ್ತು ಕಾಶ್ಮೀರದ ರೈತರ ಭೂಮಿ ಮತ್ತು ಜೀವನೋಪಾಯದ ಮೇಲಿನ ಹಕ್ಕುಗಳನ್ನು ರಕ್ಷಿಸಬೇಕು ಎಂದು ಅದು ಆಗ್ರಹ ಪಡಿಸಿದೆ.

ಅಂದೇ ರಾಜಧಾನಿಯ ಜಂತರ್ ಮಂತರ್‌ನಲ್ಲಿ ಅಕ್ಟೋಬರ್ 2020 ಭೂ ಒಕ್ಕಲೆಬ್ಬಿಸುವಿಕೆ ಆದೇಶವನ್ನು ಬಳಸಿಕೊಂಡು ರೈತರನ್ನು ಒಕ್ಕಲೆಬ್ಬಿಸುತ್ತಿರುವುದರ ವಿರುದ್ಧ ಒಂದು ಕಿಸಾನ್ ಪ್ರತಿಭಟನಾ ಧರಣಿ ನಡೆಯಿತು. ಎಐಕೆಎಸ್ ಮತ್ತು ಜಮ್ಮು–ಕಾಶ್ಮೀರ ಕಿಸಾನ್ ತೆಹ್ರೀಕ್(ಜೆಕೆಕೆಟಿ) ಇದನ್ನು ಸಂಘಟಿಸಿದ್ದವು.

ಮಹಿಳೆಯರ ಬದುಕಿನ ಮೇಲೆ ಮೋದಿ ಸರಕಾರದ ನಿರ್ದಯ ಪ್ರಹಾರ

–ಎಐಡಿಡಬ್ಲ್ಯುಎ ಖಂಡನೆ

ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯಲ್ಲಿ 50 ರೂ.ಗಳಷ್ಟು ಹೆಚ್ಚಳವನ್ನು ಹೇರಿರುವ ಮೋದಿ ನೇತೃತ್ವದ ಬಿಜೆಪಿ ಸರಕಾರದ ನಿರ್ಧಾರವನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ. ಮೂರು ಈಶಾನ್ಯ ರಾಜ್ಯಗಳಲ್ಲಿ ಮತದಾನ ಮುಗಿದ ತಕ್ಷಣವೇ ಬಿಜೆಪಿ ಸರಕಾರ ಈ ಬೆಲೆಯೇರಿಕೆಯನ್ನು ಮಾಡಿರುವುದು ಗಮನಾರ್ಹ ಎಂದು ಅದು ಹೇಳಿದೆ.

ಮಹಿಳೆಯರಿಗೆ ಈಗಾಗಲೇ ಅಡುಗೆ ಅನಿಲ ಸಿಲಿಂಡರ್‌ಗಳನ್ನು ಖರೀಸುವ ಶಕ್ತಿಯಿಲ್ಲದಾಗಿದೆ. ಏಕೆಂದರೆ ಅವುಗಳ ಬೆಲೆ ರೂ 900 ರಿಂದ ರೂ 1200 ವರೆಗೆ ಇದೆ.

ಈಗಾಗಲೇ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯಲ್ಲಿ ಮತ್ತೆ–ಮತ್ತೆ ಏರಿಕೆ, ಅಸಹನೀಯ ಮಟ್ಟದ ಹಣದುಬ್ಬರ ಮತ್ತು ಏರುತ್ತಿರುವ ಆಹಾರದ ಬೆಲೆಗಳು ಮತ್ತು ಬೃಹತ್ ನಿರುದ್ಯೋಗವು ಮಹಿಳೆಯರಿಗೆ ಮನೆಯಲ್ಲಿ ಒಲೆಯ ಬೆಂಕಿ ಆರದಂತೆ ನೋಡಿಕೊಳ್ಳುವುದನ್ನು ಅತ್ಯಂತ ಕಷ್ಟಕರವಾಗಿಸಿದೆ. ಈ ಇತ್ತೀಚಿನ ಏರಿಕೆಯು ಮೋದಿ ನೇತೃತ್ವದ ಬಿಜೆಪಿ–ಆರ್‌ಎಸ್‌ಎಸ್ ಆಳ್ವಿಕೆಯ ಸಂವೇದನಾಶೂನ್ಯ ಮತ್ತು ನಿರ್ದಯ ಮನೋಭಾವವನ್ನು ತೋರಿಸುತ್ತದೆ. ಇದು ಅತ್ಯಂತ ಖಂಡನೀಯ ಎಂದಿರುವ ಎಐಡಿಡಬ್ಲ್ಯುಎ ಈ ಅನ್ಯಾಯಯುತ ಬೆಲೆ ಏರಿಕೆಯನ್ನು ತಕ್ಷಣ ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ ಮತ್ತು ಮಹಿಳೆಯರ ಬದುಕಿನ ಮೇಲೆ ಮೋದಿ ಸರಕಾರದ ಈ ಪ್ರಹಾರವನ್ನು ಪ್ರತಿಭಟಿಸಲು ದೇಶಾದ್ಯಂತ ಬಲವಾದ ಪ್ರತಿಭಟನೆಗಳನ್ನು ನಡೆಸಬೇಕು ಎಂದು ಕರೆ ನೀಡಿದೆ.

ಬಿಡುಗಡೆ ಮಾಡಿದ್ದು ಮನಪರಿವರ್ತನೆಯಾಗಿತ್ತೆಂದಲ್ಲ, ಹೋರಾಟದ ಐಕ್ಯತೆಯನ್ನು ಮುರಿಯಲು........ ಪುಟ 2 ರಿಂದ

ಸಮ್ಮತಿಸಿದರೆ ಕಾರ್ಯಕಾರಿ ಮಂಡಳಿಯ ಇತರರು ನೋಡಬಹುದಿತ್ತು. ಆರ್.ಸಿ.ಮಜುಂದಾರ್ ಅವರ ಪ್ರಕಾರ: ಆ ಇಡೀ ದಸ್ತಾವೇಜು ಒಂದು ಅಸಾಧಾರಣ ಆಸಕ್ತಿ ಕೆರಳಿಸುವಂತದ್ದು ಹಾಗೂ ಬಹಳ ಪ್ರಮುಖವಾದುದಾಗಿತ್ತು. ಏಕೆಂದರೆ ಅದು ಅಂಡಮಾನ್ ಜೈಲಿನಲ್ಲಿದ್ದ ರಾಜಕೀಯ ಕೈದಿಗಳು ಹಾಗೂ ಆ ಜೈಲನ್ನು ನಿಯಂತ್ರಿಸುತ್ತಿದ್ದ ಅಧಿಕಾರಿಗಳ ಸ್ವಭಾವ, ವರ್ತನೆಗಳು ಮತ್ತು ಮನೋಭಾವಗಳ ಒಳನೋಟವನ್ನು ನಮಗೆ ನೀಡುತ್ತದೆ.

ಅದರಲ್ಲಿ ಸೆಲ್ಯುಲರ್ ಜೈಲಿನ ಸಾಮಾನ್ಯ ವಿವರಣೆ ಮತ್ತು ಅವರು ಸಾವರ್ಕರ್ ಅವರನ್ನೂ ಒಳಗೊಂಡಂತೆ ವೈಯಕ್ತಿಕವಾಗಿ ಪ್ರತಿಯೊಬ್ಬ ಕೈದಿಯ ಜತೆ ನಡೆಸಿದ ಮಾತುಕತೆಗಳ ವಿವರಗಳು ಇವೆ. ಆಳರಸರ ಅಪೇಕ್ಷೆಗೆ ಅನುಗುಣವಾಗಿ ತಲೆ ಬಗ್ಗಿಸಲು ಸಿದ್ಧರಿದ್ದವರು ಒಂದು ಕಡೆಯಾದರೆ, ಮತ್ತೊಂದೆಡೆ ತಮ್ಮ ಎಲ್ಲಾ ಕಷ್ಟಗಳು ಹಾಗೂ ಗೋಳುಗಳ ನಡುವೆಯೂ ತಮ್ಮ ನಂಬಿಕೆಗಳನ್ನು ಮುಂದುವರಿಸುವವರ ಬಗ್ಗೆ ಪುರಾವೆಗಳು ಅದರಲ್ಲಿದ್ದವು.

ಕ್ರಡಕ್ ಅವರ ಟಿಪ್ಪಣಿ ಹೀಗಿತ್ತು:

ನಾನು ಪರಿಶೀಲನೆಗಾಗಿ ಭೇಟಿ ನೀಡಿದ ಎರಡು ದಿನಗಳ ನಂತರ ಜೈಲು ಕಛೇರಿಯಲ್ಲಿ ನನ್ನ ಬಳಿ ವಿ.ಡಿ.ಸಾವರ್ಕರ್, ಹೃಷಿಕೇಶ್ ಕಾಂಜಿಲಾಲ್, ಬರೀಂದ್ರ ಕುಮಾರ್ ಘೋಷ್, ನಂದ ಗೋಪಾಲ್ ಹಾಗೂ ಸುಧೀರ್ ಕುಮಾರ್ ಸರ್ಕಾರ್ ಈ ಐವರ ಅರ್ಜಿಗಳಿದ್ದವು.

ಸಾವರ್ಕರ್ ಅವರದ್ದು ಕ್ಷಮಾ ಯಾಚನೆ ಅರ್ಜಿಯಾಗಿತ್ತು. ಅವರು ವಿಷಾದನ್ನಾಗಲೀ ಅಥವಾ ಪಶ್ಚಾತ್ತಾಪವನ್ನಾಗಲೀ ವ್ಯಕ್ತಪಡಿಸಿದಂತಿರಲಿಲ್ಲ; ಆದರೆ ತಮ್ಮ ಅಭಿಪ್ರಾಯಗಳನ್ನು ಬದಲಾಯಿಸಿಕೊಂಡಂತಿತ್ತು; 1906–07ರಲ್ಲಿ ಪಿತೂರಿಮಾಡಲು ಭಾರತೀಯರ ದಯನೀಯ ಪರಿಸ್ಥಿತಿಯೇ ಕಾರಣವಾಯಿತು ಎಂದು ಮೊರೆಯಿಟ್ಟಿದ್ದರು. ಆ ಸಮಯದಿಂದ ಸರ್ಕಾರವು ಮಂಡಳಿಗಳು, ಶಿಕ್ಷಣ ಹಾಗೂ ಇನ್ನಿತರ ವಿಷಯಗಳಲ್ಲಿ ಹೆಚ್ಚು ರಾಜಿ ಮಾಡಿಕೊಳ್ಳುವ ಧೋರಣೆ ಹೊಂದಿತ್ತು, ಆದಕಾರಣ ಕ್ರಾಂತಿಕಾರಿ ಕಾರ್ಯಾಚರಣೆಗಳಿಗೆ ಸನ್ನಿವೇಶವೇ ಇರಲಿಲ್ಲ ಎಂಬುದು ಅವರ ನಿಲುವಾಗಿತ್ತು. ತನಗೆ ಕ್ಷಮೆ ನೀಡಿದರೆ ಅದು ಬ್ರಿಟಿಷರ ವಿರುದ್ಧ ಪಿತೂರಿ ಮಾಡುತ್ತಿದ್ದವರ ಮೇಲೆ ಸಮಾಧಾನಪಡಿಸುವ ಪರಿಣಾಮ ಬೀರುತ್ತದೆ; ತನ್ನ ನಿಲುವು ಬದಲಾಗಿರುವುದರ ಬಗ್ಗೆ ಸ್ಥಳೀಯ ಮಾಧ್ಯಮಗಳಲ್ಲಿ ಒಂದು ಬಹಿರಂಗ ಹೇಳಿಕೆ ನೀಡಲು ತಾನು ಉತ್ಸುಕನಾಗಿದ್ದೇನೆ ಹಾಗೂ ಸಿದ್ಧನಾಗಿದ್ದೇನೆ ಎಂದು ಸಾವರ್ಕರ್ ಹೇಳಿದ್ದರು. ಆ ವಿಚಾರದಲ್ಲಿ ತನಗೆ ಕಾನೂನಾತ್ಮಕ ಹಕ್ಕುಗಳು ಇಲ್ಲ ಎಂಬುದನ್ನು ಒಪ್ಪಿಕೊಂಡು, ಅನುಕಂಪದಿಂದ ಪರಿಗಣಿಸಬೇಕು ಎಂದು ಮೊರೆಯಿಟ್ಟಿದ್ದರು; ಭಾರತದ ಅಥವಾ ಬರ್ಮಾದ ಜೈಲೊಂದಕ್ಕೆ ತನ್ನನ್ನು ವರ್ಗಾವಣೆ ಮಾಡಿ, ಅಲ್ಲಿ ಕೊನೇ ಪಕ್ಷ 14 ವರ್ಷಗಳ ನಂತರವಾದರೂ ಬಿಡುಗಡೆ ಹೊಂದುವ ನೈತಿಕ ಹಕ್ಕು ಸಿಗುತ್ತದೆ ಎಂದು ಗೋಗರೆದರು. ಯಾವುದಾದರೂ ಭರವಸೆ ನೀಡಿ ಅಥವಾ ತನಗೆ ಭರವಸೆ ಹುಟ್ಟಬಹುದಾದಂತಹ ದಾಖಲೆಮಾಡಿ ಎಂದು ಅವರು ಬಹಳ ಒತ್ತಾಯಿಸಿದರು. ನಿಜವೋ ಅಥವಾ ಸುಳ್ಳೋ, ನಂತರದಲ್ಲಿ ಅವರ ಪ್ರಕರಣವನ್ನು ಪರಿಗಣಿಸಲಾಗುತ್ತದೆ, ತನ್ನ ನಿಲುವು ಬದಲಾಗಿದೆ ಎಂದು ಕೇವಲ ಒಂದು ಹೇಳಿಕೆಯನ್ನು ಕೊಡುವ ಮಾತ್ರಕ್ಕೆ ಅವರ ಹಿಂದಿನ ದಾಖಲೆಯನ್ನು ಅಳಿಸಲು ಸಾಧ್ಯವಿಲ್ಲ ಎಂಬುದನ್ನು ನಾನು ಅವರಿಗೆ ಹೇಳಿದೆ; ಅವರ ಪ್ರಕರಣದಲ್ಲಿ ಶುದ್ಧ ರಾಜಕೀಯ ಅಂಶವೆಂಬುದಷ್ಟೇ ಆಗಿರದೆ, ನಾಸಿಕ್‌ನ ಜಾಕ್ಸನ್ ಎಂಬ ಅಧಿಕಾರಿಯ ಕೊಲೆಗೆ ಕುಮ್ಮಕ್ಕು ನೀಡಿದ್ದರು ಎಂಬ ಕಾರಣಕ್ಕಾಗಿ ಅವರಿಗೆ ಶಿಕ್ಷೆ ನೀಡಲಾಗಿತ್ತು. 20 ಬ್ರೌನಿಂಗ್ ಪಿಸ್ತೂಲುಗಳನ್ನು ಕಳಿಸುವುದರಲ್ಲೂ ಅವರ ಪಾತ್ರವಿತ್ತು. ಪಿಸ್ತೂಲುಗಳು ಕೊಲೆಯ ಉದ್ದೇಶಕ್ಕಾಗಿ ಅಲ್ಲ, ಅದು ಕ್ರಾಂತಿಕಾರಿ ಚಳವಳಿಯನ್ನು ಬೆಂಬಲಿಸಲು ಎಂದು ಅವರು ವಿವರಿಸಿದ್ದರು. ಪಿಸ್ತೂಲುಗಳಿಂದ ಕ್ರಾಂತಿಯನ್ನು ನಡೆಸಲು ಸಾಧ್ಯವಿಲ್ಲ ಮತ್ತು ಅದನ್ನು ಕೊಲೆಗೆ ಮಾತ್ರ ಬಳಸಬಹುದು ಎಂದು ನಾನು ಹೇಳಿದಾಗ ಅವರು ನಿರುತ್ತರರಾದರು. ಎಲ್ಲಿಯ ತನಕ ಸರ್ಕಾರದ ವಿರುದ್ಧ ಪಿತೂರಿ ಮಾಡುವ ಅಥವಾ ಅಂತಹ ಪ್ರವೃತ್ತಿ ಹೊಂದಿರುತ್ತಾರೋ ಅಂಥವರು ಪಿತೂರಿ ಮಾಡಿದರು ಅಥವಾ ಸಂಘಟಿಸಿದರು ಎನ್ನುವುದು ಅನಾನುಕೂಲಕರ ಅಂಶವಾಗುತ್ತದೆ; ಆದ್ದರಿಂದ ಪಿತೂರಿಗಾರನೊಬ್ಬನನ್ನು ಬಿಡುಗಡೆ ಮಾಡುವುದು ಅತ್ಯಂತ ಅಪಾಯಕಾರಿ ಎಂಬುದು ಮುಂದುವರಿಯುತ್ತದೆ ಮತ್ತು ಅವರ ಪ್ರಕರಣದಲ್ಲಿ ಅದು ಎಂದಿಗೂ ಹೆಚ್ಚು ಅಪಾಯಕಾರಿಯಾಗಿರುತ್ತದೆ, ಏಕೆಂದರೆ ಅವರೇ ಒಬ್ಬ ಮುಖಂಡರಾಗಿರುವುದರಿಂದ ಎಂದು ನಾನು ಒತ್ತಿ ಹೇಳಿದೆ. ಮತ್ತೂ ಮುಂದುವರಿದು, ನಾನು ಯಾವುದೇ ಭರವಸೆ ಕೊಡಲು ಸಾಧ್ಯವಿಲ್ಲ ಮತ್ತು ವಿಶೇಷ ಪರಿಗಣನೆಯಿಂದ ಕೂಡ ಭರವಸೆ ಕೊಡಲಾರೆ; ಒಂದೊಮ್ಮೆ ನಾನು ಅಂತಹ ಭರವಸೆ ನೀಡಿದರೂ, ನನ್ನ ನಂತರ ಬರುವವರು ಅದಕ್ಕೆ ಬದ್ಧರಾಗಬೇಕಿಲ್ಲ ಎಂದು ಹೇಳಿದೆ.

ಕ್ರಡಕ್ ಅವರ ನಿರ್ಧಾರ ಹೀಗಿತ್ತು:

ಸಾವರ್ಕರ್ ಅವರಿಗೆ ಸಂಬಂಧಪಟ್ಟಂತೆ, ಇಲ್ಲಿ ಅವರಿಗೆ ಯಾವುದೇ ರೀತಿಯ ಸ್ವಾತಂತ್ರ್ಯ ನೀಡಲು ಖಂಡಿತಾ ಸಾಧ್ಯವಿಲ್ಲ, ಮತ್ತು ಅವರು ಭಾರತದ ಯಾವುದೇ ಜೈಲಿನಿಂದ ತಪ್ಪಿಸಿಕೊಂಡು ಹೋಗುತ್ತಾರೆಂಬುದು ನನಗೆ ಗೊತ್ತು. ಅವರು ಎಂತಹ ಮುಖಂಡರೆಂದರೆ ಭಾರತೀಯ ಅರಾಜಕತಾವಾದಿಗಳ (ಇಂಡಿಯನ್ ಅನಾರ್ಕಿಸ್ಟ್ಸ್) ಯೂರೋಪಿನ ವಿಭಾಗದವರು ಅವರು ತಪ್ಪಿಸಿಕೊಂಡು ಹೋಗಲು ಯೋಜನೆ ರೂಪಿಸುತ್ತಾರೆ. ಅಂಡಮಾನಿನಲ್ಲೇ ಸೆಲ್ಯುಲರ್ ಜೈಲಿನಿಂದ ಹೊರಗೆ ಬಿಟ್ಟಿದ್ದೇ ಆದರೆ, ಅವರು ಖಂಡಿತವಾಗಿಯೂ ತಪ್ಪಿಸಿಕೊಳ್ಳುತ್ತಾರೆ. ಅವರ ಗೆಳೆಯರು ಅವರಿಗೊಂದು ಸ್ಟೀಮರನ್ನು ಏರ್ಪಾಟು ಮಾಡಿ ಯಾವುದಾದರೂ ದ್ವೀಪಕ್ಕೆ ಹೋಗಲು ವ್ಯವಸ್ಥೆ ಮಾಡುತ್ತಾರೆ ಮತ್ತು ಸ್ಥಳೀಯವಾಗಿ ಸ್ವಲ್ಪ ಹಣದ ವ್ಯವಸ್ಥೆ ಮಾಡಿದರೂ ಸಾಕು ಉಳಿದಿದ್ದೆಲ್ಲಾ ತಾನೇ ತಾನಾಗಿ ಆಗುತ್ತದೆ.

(ಮುಂದುವರೆಯುವುದು)

ಸ್ಕಾಲರ್‌ಶಿಪ್ ಹೆಚ್ಚಿಸಿ ಅಂದಿದಕ್ಕೆ ಅಮಾನತ್ತಿನ ಶಿಕ್ಷೆ !? ಶಿಕ್ಷಣ ಉಳ್ಳವರ ಸೊತ್ತೆ?

ಗುರುರಾಜ ದೇಸಾಯಿ

ದೆಹಲಿಯ ದಕ್ಷಿಣ ಏಷ್ಯಾ ವಿಶ್ವವಿದ್ಯಾಲಯದ (ಎಸ್‌ಎಯು) ಎರಡನೇ ವರ್ಷದ ಎಲ್‌ಎಲ್‌ಎಂ ವಿದ್ಯಾರ್ಥಿನಿ ಅಪೂರ್ವ ವೈಕೆ ತನ್ನ ವಿರುದ್ಧದ ಉಚ್ಚಾಟನೆ ನೋಟಿಸ್ ಅನ್ನು ಹಿಂಪಡೆಯುವಂತೆ ಒತ್ತಾಯಿಸಿ ವಾರ್ಸಿಟಿ ಗೇಟ್ ಮುಂದೆ ಧರಣಿ ಸತ್ಯಾಗ್ರಹ ನಡೆಸುತ್ತಿದ್ದಾರೆ. ಕ್ಯಾಂಪಸ್ ಡೆಮಾಕ್ರಸಿಯ ಮೇಲಿನ ಗದಾ ಪ್ರಹಾರ ಮುಂದುವರೆದಿದೆ.

ಫೆಬ್ರವರಿ 25 ರ ರಾತ್ರಿ ಅಪೂರ್ವ ಅವರನ್ನು ತನ್ನ ಹಾಸ್ಟೆಲ್‌ನಿಂದ ಹೊರಹಾಕಲಾಯಿತು ಮತ್ತು ಅಂದಿನಿಂದ ಗೇಟ್‌ನ ಹೊರಗೆ ಪ್ರತಿಭಟನೆ ನಡೆಸುತ್ತಿದ್ದಾರೆ. ಪ್ರತಿಭಟನಾ ಸ್ಥಳಕ್ಕೆ ಜೆಎನ್‌ಯು ವಿದ್ಯಾರ್ಥಿ ಸಂಘಟನೆಯ ನಾಯಕಿ ಆಯಿಷಿ ಘೋಷ್ ಸೇರಿದಂತೆ ಅನೇಕರು ಬೆಂಬಲ ನೀಡಿದ್ದಾರೆ.

ವೈ. ಕೆ ಅಪೂರ್ವ ಕರ್ನಾಟಕದವರಾಗಿದ್ದು, ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಯರಬಹಳ್ಳಿ ಗ್ರಾಮಾದವರಾಗಿದ್ದಾರೆ. ವಿದ್ಯಾರ್ಥಿ ವೇತನ ಹೆಚ್ಚಿಸಿ, ಗುಣಮಟ್ಟದ ಶಿಕ್ಷಣ ನೀಡಿ ಎಂದು ಪ್ರತಿಭಟಿಸುವ ವಿದ್ಯಾರ್ಥಿಗಳನ್ನು ಅಮಾನತ್ತಿನ ಹೆಸರಿನಲ್ಲಿ ದೌರ್ಜನ್ಯ ನಡೆಸುತ್ತಿರುವುದು ಸರಿಯಾದ ಕ್ರಮವಲ್ಲ, ಇದು ಶಿಕ್ಷಣ ಹಕ್ಕಿನ ಉಲ್ಲಂಘನೆ ಎಂದು ವಿದ್ಯಾರ್ಥಿ ಸಂಘಟನೆಗಳು ಆರೋಪಿಸುತ್ತಿವೆ.

ಘಟನೆಗಳ ಕಾಲಾನುಕ್ರಮಣಿಕೆ ಹೀಗಿದೆ

13ನೇ ಅಕ್ಟೋಬರ್ 2022 ರಿಂದ, ಹೊಸ ದೆಹಲಿಯ ದಕ್ಷಿಣ ಏಷ್ಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಹೆಚ್ಚಳ ಮಾಡಬೇಕು ಮತ್ತು ಲೈಂಗಿಕ ಕಿರುಕುಳದ ದೂರುಗಳ ಬಗ್ಗೆ ವ್ಯವಹರಿಸುವ ವಿಶ್ವವಿದ್ಯಾಲಯದ ದೂರುಗಳ ಸಮಿತಿಯಲ್ಲಿ ವಿದ್ಯಾರ್ಥಿಗಳ ಪ್ರಾತಿನಿಧ್ಯ ಸೇರಿದಂತೆ ವಿದ್ಯಾರ್ಥಿವೇತನ ನೀತಿಯಲ್ಲಿನ ಬದಲಾವಣೆಗಳಿಗಾಗಿ ಪ್ರತಿಭಟನೆ ಆರಂಭಿಸುತ್ತಾರೆ. ವಿದ್ಯಾರ್ಥಿಗಳು ವಿವಿ ನಿಯಗಳಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ, ಹಾಗೂ ಗುಂಪು ಕಟ್ಟಿಕೊಂಡು ಗಲಾಟೆ ಮಾಡುತ್ತಿದ್ದಾರೆ ಎಂದು ಪ್ರತಿಕ್ರಿಯೆ ನೀಡಿತ್ತು.

ನವೆಂಬರ್ 1 ರಂದು, ಸಾಮಾನ್ಯ ಸಭೆಯೊಂದರಲ್ಲಿ ವಿದ್ಯಾರ್ಥಿಗಳು ವ್ಯಕ್ತಪಡಿಸಿದ ಕಳವಳಗಳನ್ನು ಪರಿಹರಿಸಲು ಆಡಳಿತವು ವಿಫಲವಾದ ನಂತರ ವಿದ್ಯಾರ್ಥಿಗಳ ಅನಿರ್ದಿಷ್ಟ ಧರಣಿಯನ್ನು ಪ್ರಾರಂಭಿಸಿದರು. ಅಲ್ಲಿ ಅಮ್ಮರ್ ಅಹ್ಮದ್ ಸೇರಿದಂತೆ ವಿದ್ಯಾರ್ಥಿಗಳು ಹಣಕಾಸಿನ ತೊಂದರೆಗಳು ಮತ್ತು ಹೆಚ್ಚಿನ ಸಹಾಯದ ಅಗತ್ಯದ ಬಗ್ಗೆ ವಿವರವಾಗಿ ವಿವರಿಸಿದರು.

ನವೆಂಬರ್ 4 ರಂದು, ವಿಶ್ವವಿದ್ಯಾನಿಲಯದ ಆಡಳಿತವು ಇಬ್ಬರು ವಿದ್ಯಾರ್ಥಿಗಳನ್ನು ಹೊರಹಾಕಿತು (ಉಮೇಶ್ ಜೋಶಿಯನ್ನು, ಅಮ್ಮರ್ ಅಹ್ಮದ್) ಮತ್ತು ಒಬ್ಬ ವಿದ್ಯಾರ್ಥಿಯನ್ನು ಯಾವುದೇ ಪ್ರಕ್ರಿಯೆಗಳನ್ನು ಅನುಸರಿಸದೆ ನಿರಂಕುಶವಾಗಿ (ಭೀಮರಾಜ್) ಅಮಾನತುಗೊಳಿಸಿತು.

ನವೆಂಬರ್ 7 ರಂದು, ವಿದ್ಯಾರ್ಥಿಗಳು ತಮ್ಮ ಪ್ರತಿಭಟನೆಯ ಸ್ವರೂಪವನ್ನು ಬದಲಾಯಿಸಿಕೊಡರು. ಅನಿರ್ದಿಷ್ಟ ಉಪವಾಸ ಸತ್ಯಾಗ್ರಹವನ್ನು ನಡೆಸಲು ಮುಂದಾಗುತ್ತಾರೆ. ಈ ಹಿಂದೆ ಇಟ್ಟಿದ್ದ ಬೇಡಿಕೆಗಳನ್ನು ಈಡೇರಿಸಬೇಕು ಹಾಗೂ ಅನಿಯಂತ್ರಿತ ಶಿಸ್ತು ಕ್ರಮಗಳನ್ನು ಹಿಂಪಡೆಯಬೇಕು ಎಂಬ ಆಗ್ರಹವನ್ನು ಮಾಡುತ್ತಾರೆ.

ನವೆಂಬರ್ 22ರ ರಾತ್ರಿ, ಮೊದಲ ವರ್ಷದ ಎಂ.ಎ ಸಮಾಜಶಾಸ್ತ್ರದ ವಿದ್ಯಾರ್ಥಿಗಳಲ್ಲಿ ಒಬ್ಬರಾದ ಅಮ್ಮರ್ ಅಹಮದ್ ಅವರು ಅನಾರೋಗ್ಯದ ಸಮಸ್ಯೆಯಿಂದ ತಮ್ಮ ಹಾಸ್ಟೆಲ್ ಕೋಣೆಯಲ್ಲಿ ಕುಸಿದುಬಿಳಿತ್ತಾರೆ. ಮತ್ತು ಅವರನ್ನು ಚಾಣಕ್ಯಪುರಿಯ ಪ್ರಿಮಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ತೀವ್ರ ನಿಗಾ ಘಟಕಕ್ಕೆ ದಾಖಲಿಸಲಾಯಿತು. ಐಸಿಯುನಲ್ಲಿದ್ದಾಗ, ಅಮ್ಮಾರ್ ಹೃದಯ ಸ್ತಂಭನದಿಂದ ಬಳಲುತ್ತಿದ್ದ. ನಂತರ ಅವರು ನಿರಂತರ ಚಿಕಿತ್ಸೆಯ ಬಳಿಕ ಚೇತರಿಸಿಕೊಳ್ಳುತ್ತಾರೆ. ಆದರೂ ಅಮ್ಮರ್ ಸರಣಿ ಅನಾರೋಗ್ಯದ ಸಮಸ್ಯೆಗಳನ್ನು ಅನುಭವಿಸುತ್ತಾರೆ. ಅಮ್ಮಾರ್ ತೀವ್ರ ಒತ್ತಡಕ್ಕೊಳಗಾದ ಕಾರಣ ಮನೋವೈದ್ಯಕೀಯ ಚಿಕಿತ್ಸೆಗೆ ಒಳಗಾಗುತ್ತಾರೆ. ತಮ್ಮ ಮೇಲೆ ಹೇರಲಾಗಿರುವ ಅಮಾನತ್ತಿನ ಆದೇಶವನ್ನು ಮರುಪರಿಶೀಲಿಸುವಂತೆ ಅಮ್ಮಾರ್ ಅವರು ಆಡಳಿತದ ಸದಸ್ಯರಿಗೆ, ವಿಶೇಷವಾಗಿ ಹಂಗಾಮಿ ರಿಜಿಸ್ಟ್ರಾರ್ ಪ್ರೊ. ಮೊಹಮ್ಮದ್ ಅಬುಲೈಶ್ ಅವರಿಗೆ ಪದೇ ಪದೇ ಮನವಿ ಮಾಡಿದರು. ಆದರೆ ಯಾವುದೇ ಪ್ರಯೋಜನವಾಗಲಿಲ್ಲ. ನಿರಂತರ ಸಾಂಸ್ಥಿಕ ಕಿರುಕುಳದ ಪರಿಣಾಮವಾಗಿ, ಅಮ್ಮಾರ್ ಸಾಯಬೇಕು ಎಂದು ಪ್ರಯತ್ನಿಸುತ್ತಾನೆ. ಅಮ್ಮಾರ್ ಮೊದಲ ತಲೆಮಾರಿನ ಕಲಿಯುವವರಾಗಿದ್ದು, ಉನ್ನತ ಶಿಕ್ಷಣವನ್ನು ಪ್ರವೇಶಿಸಲು ಹಲವಾರು ಅಡೆತಡೆಗಳನ್ನು ನಿವಾರಿಸಬೇಕಾಯಿತು. ಅವರ ಕುಟುಂಬಕ್ಕೆ ವೈದ್ಯಕೀಯ ವೆಚ್ಚ ಭರಿಸುವ ಆರ್ಥಿಕ ಸ್ಥಿತಿ ಇರಲಿಲ್ಲ.

ನವೆಂಬರ್ 23 ರಂದು, ಹೆಚ್ಚಿನ ಸಂಖ್ಯೆಯ



ವಿದ್ಯಾರ್ಥಿಗಳು ಆಡಳಿತಾತ್ಮಕ ಕಛೇರಿ ಮುಂದೆ ಜಮಾಯಿಸಿ ಹಂಗಾಮಿ ಅಧ್ಯಕ್ಷರು, ಹಂಗಾಮಿ ಉಪಾಧ್ಯಕ್ಷರು ಮತ್ತು ಹಂಗಾಮಿ ರಿಜಿಸ್ಟ್ರಾರ್‌ಗೆ ಅಮ್ಮಾರ್ ಅವರ ವೈದ್ಯಕೀಯ ವೆಚ್ಚವನ್ನು ಭರಿಸಲು ಮತ್ತು ಅವರ ವಿರುದ್ಧದ ಆದೇಶವನ್ನು ಹಿಂಪಡೆಯಲು ಮನವಿ ಮಾಡಿದರು. ಆಡಳಿತವು ಅಂತಿಮವಾಗಿ ವೈದ್ಯಕೀಯ ಬಿಲ್‌ಗಳನ್ನು ಪಾವತಿಸಲು ಒಪ್ಪಿಕೊಂಡಿತು ಮತ್ತು ವೆಚ್ಚವನ್ನು ಭಾಗಶಃ ಪೂರೈಸಿತು. ಉಚ್ಚಾಟನೆ/ ರಸ್ಟಿಕೇಶನ್ ಆದೇಶಗಳನ್ನು ವಾರದ ಅವಧಿಯ ಅಮಾನತುಗಳನ್ನು ಹಿಂದಕ್ಕೆ ಪಡೆದು, ಆ ಅಮಾನತು ಆದೇಶವನ್ನು ದಂಡಕ್ಕೆ ಇಳಿಸಿದರು.

ನವೆಂಬರ್ 25 ರಂದು, ಉಮೇಶ್ ಜೋಶಿ ಮತ್ತು ಭೀಮರಾಜ್ ಎಂ ಅವರಿಗೆ ಉಚ್ಚಾಟನೆಯ ನೋಟಿಸ್‌ಗಳನ್ನು ಮತ್ತೆ ನೀಡಲಾಯಿತು.

ನವೆಂಬರ್ 26 ರಂದು, ಅಪೂರ್ವ ವೈ.ಕೆ, ರೋಹಿತ್ ಕುಮಾರ್, ಪ್ರೊಚೇತಾ ಮುಖರ್ಜಿ, ಕೇಶವ್ ಸರ್ವರ್ಣ್ ಮತ್ತು ಬನ್ಯಾ ಚಕ್ರವರ್ತಿ ಎಂಬ 5 ವಿದ್ಯಾರ್ಥಿಗಳಿಗೆ ಅಮ್ಮಾರ್ ಪರ ವಕಾಲತ್ತು ವಹಿಸಿದ್ದಾರೆ ಎಂದು ಆರೋಪಿಸಿ ಶೋಕಾಸ್ ನೋಟಿಸ್ ನೀಡುತ್ತಾರೆ.

ಜನವರಿ 13, 2023 ಶೋಕಾಸ್ ನೋಟಿಸ್‌ಗಳನ್ನು ಸ್ವೀಕರಿಸಿದ ವಿದ್ಯಾರ್ಥಿಗಳಿಗೆ ವಿಶೇಷವಾಗಿ ಶೋಕಾಸ್ ನೋಟಿಸ್‌ಗಳಿಗೆ ಅವರ ಪ್ರತಿಕ್ರಿಯೆಗಳನ್ನು ಪಡೆಯಬೇಕು ಎಂದು ತಾತ್ಕಾಲಿಕ ಉನ್ನತ ಅಧಿಕಾರಯ ಸಮಿತಿಯನ್ನು ರಚಿಸುತ್ತಾರೆ.

17ನೇ ಫೆಬ್ರವರಿ 2023 ರಂದು, ಉನ್ನತಾಧಿಕಾರ ಸಮಿತಿಯ ಶಿಫಾರಸಿನ ಮೇರೆಗೆ ಅಪೂರ್ವ ವೈ. ಕೆ ಮತ್ತು ಪ್ರೊಚೇತಾ ಎಂ ಅವರನ್ನು ವಿವಿಯಿಂದ ಹೊರಹಾಕಲಾಗುತ್ತದೆ. ಕೇಶವ್ ಸರ್ವರ್ಣ್ ಮತ್ತು ರೋಹಿತ್ ಕುಮಾರ್ ಅವರಿಗೆ ಒಂದು ವರ್ಷದವರೆಗೆ ಶಿಕ್ಷಣವನ್ನು ನಿರ್ಭಂದಿಸಲಾಗುತ್ತದೆ. ಬನ್ಯಾ ಚಕ್ರವರ್ತಿಗೆ ದಂಡ ವಿಧಿಸಲಾಯಿತು ಮತ್ತು ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಇಂತಹ ಹೋರಾಟದಲ್ಲಿ ಭಾಗವಹಿಸುವುದಿಲ್ಲ ಎಂದು ಮುಚ್ಚಳಿಕೆ ಪತ್ರ ಬರೆಯಿಸಿಕೊಳ್ಳುತ್ತಾರೆ.

ಫೆಬ್ರವರಿ 25 ರಂದು, ವಿಶ್ವವಿದ್ಯಾಲಯದ ಅಧಿಕಾರಿಗಳು ಉಚ್ಚಾಟನೆ ಆದೇಶಗಳನ್ನು ಜಾರಿಗೊಳಿಸುತ್ತಾರೆ. ಮತ್ತು ವಿದ್ಯಾರ್ಥಿಗಳಿಗೆ ತಮ್ಮ ಹಾಸ್ಟೆಲ್ ಕೊಠಡಿಗಳನ್ನು ಖಾಲಿ ಮಾಡುವಂತೆ ಒತ್ತಾಯಿಸಿದರು.

ಹೀಗೆ ವಿವಿ ಹಾಗೂ ಹಾಸ್ಟೇಲ್ ನಿಂದ ಹೊರ ಹಾಕಲ್ಪಟ್ಟ ಅಪೂರ್ವ ಇಂದಿನ ವರೆಗೆ ವಿವಿ ಮುಂಭಾಗದ ಆವರಣದಲ್ಲಿ ಅನಿರ್ದಿಷ್ಟ ಧರಣಿಯನ್ನು ಪ್ರಾರಂಭಿಸಿದ್ದಾರೆ.

ಶಿಕ್ಷಣ ಉಳ್ಳವರ ಸೊತ್ತೆ?:

ಶಿಕ್ಷಣ ಉಳ್ಳವರ ಸೊತ್ತು ಎಂಬುದನ್ನು ಸರಕಾರ ಪದೇ ಪದೇ ನಿರೂಪಿಸುತ್ತಿದೆ. ಹಲವು ರಾಜ್ಯಗಳಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಹಣ ಕಡಿತ ಮಾಡಲಾಗುತ್ತಿದೆ. ಫೆಲೋಶಿಪ್‌ಗಳು/ ವಿದ್ಯಾರ್ಥಿವೇತನಗಳಲ್ಲಿ ತೀವ್ರ ವಿಳಂಬ ಮಾಡಲಾಗುತ್ತಿದೆ. ಇದರಿಂದಾಗಿ ಶೋಷಿತ ಸಮುದಾಯಗಳ ವಿದ್ಯಾರ್ಥಿಗಳು ಶಿಕ್ಷಣವನ್ನು ಅರ್ಧಕ್ಕೇ ನಿಲ್ಲಿಸಿ ಬಿಡಬೇಕಾದ ಪರಿಸ್ಥಿತಿಗಳು ಹೆಚ್ಚುತ್ತಿವೆ. ವಿವಿಯ ಹಾಸ್ಟೆಲ್‌ಗಳು ದುಸ್ಥಿತಿಗೆ ತಳ್ಳಿವೆ, ಹಲವು ಕಡೆ ಮುಚ್ಚತ್ತಿರುವ ವರದಿಗಳು ಕೇಳಿ ಬರುತ್ತಿವೆ.

ರೋಹಿತ್ ವೇಮುಲಾ ಮತ್ತು ರಜಿನಿ ಕ್ರಿಷ್ ಅವರ ಸಾಂಸ್ಥಿಕ ಹತ್ಯೆಗಳ ಚಿತ್ರಣ ಇನ್ನೂ ಕಣ್ಮುಂದೆ ಇದೆ. ಆದರೆ ಆಳುವ ಸರಕಾರಕ್ಕೆ, ವಿವಿ ಆಡಳಿತ ಮಂಡಳಿಗೆ ವಿದ್ಯಾರ್ಥಿಗಳ ಹಕ್ಕುಗಳ ಬಗ್ಗೆ, ಅವರ ಶಿಕ್ಷಣದ ಬಗ್ಗೆ ಗಟ್ಟಿಯಾದ ಕಾಳಜಿ ಬರುತ್ತಿಲ್ಲ. ದಲಿತ, ಆದಿವಾಸಿ, ಹಿಂದುಳಿದ, ಅರೆ ಸಮುದಾಯಗಳಿಂದ ಬಂದಂತ ವಿದ್ಯಾರ್ಥಿಗಳು ಇಂದು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಆಧುನಿಕ ಶಂಬೂಕ ಮತ್ತು ಏಕಲವ್ಯರ ಹಾಗೆ ಜೀವಪರಿತ್ಯಾಗ ಮಾಡುವಂತಹ ಸನ್ನಿವೇಶವನ್ನು ಸೃಷ್ಟಿಸಲಾಗುತ್ತಿದೆ.

ಕಳೆದ ಎಂಟು ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸರಕಾರವೇ ಹಲವು ಹಾವಳಿಗಳನ್ನು ಮಾಡಿದೆ. ಕ್ಯಾಂಪಸ್ ಪ್ರಜಾಪ್ರಭುತ್ವದ ಮೇಲೆ ಒಂದಾದ ಮೇಲೊಂದರಂತೆ ಹಲ್ಲೆಗಳು ನಡೆಸಿದೆ. ಇನ್ನಷ್ಟು ಕೇಂದ್ರೀಕರಣದ ಪ್ರಯತ್ನಗಳು, ಶಿಕ್ಷಣದ ಮತ್ತಷ್ಟು ಖಾಸಗೀಕರಣ/ವ್ಯಾಪಾರೀಕರಣ ಮತ್ತು ಕೇಸರೀಕರಣದ ಭಾಗವಾಗಿ ತನ್ನ ಅಜೆಂಡಾಗಳನ್ನು ಒತ್ತಾಯಪೂರ್ವಕವಾಗಿ ಜಾರಿ ಮಾಡುತ್ತಾ ಬಂದಿದೆ. ಇನ್ನಾದರೂ ಎಚ್ಚೆತ್ತುಕೊಳ್ಳಬೇಕಿದೆ. ಕ್ಯಾಂಪಸ್ ಡೆಮಾಕ್ರಸಿಯನ್ನು ಉಳಿಸಬೇಕು. ವಿದ್ಯಾರ್ಥಿಗಳ ಹಕ್ಕುಗಳನ್ನು ಕಾಪಾಡಬೇಕಿದೆ.

ಕಾರ್ಖಾನೆಗಳ ಕಾಯ್ದೆ ತಿದ್ದುಪಡಿ ವಿರೋಧಿಸಿ ಮಾರ್ಚ್ 23 ರಂದು ಕೈಗಾರಿಕಾ ಮುಷ್ಕರಕ್ಕೆ ಜೆಸಿಟಿಯು ಕರೆ.......

ಪುಟ 3 ರಿಂದ

ಕಾರ್ಯದರ್ಶಿ ಎನ್. ಕೆ. ಸುಬ್ರಮಣ್ಯ ಅವರು ಮಾತನಾಡಿ, ಸರ್ಕಾರ ಮಹಿಳಾ ವಿರೋಧಿಯಾದ ಮತ್ತು ಮಹಿಳೆಯರ ಸುರಕ್ಷತೆಯನ್ನು ಗಾಳಿಗೆ ತೂರಿ ರಾತ್ರಿ ಪಾಳಿಯಲ್ಲಿ ಮಹಿಳೆಯಲ್ಲಿ ದುಡಿಸಲು ಕಾನೂನು ತಂದಿದೆ ಎಂದು ಆಪಾದಿಸಿದರು. ನಂತರ ತುಮಕೂರು ಜಿಲ್ಲಾಧಿಕಾರಿ ವೈ.ಎಸ್ ಪಾಟಿಲ್ ಪ್ರತಿಭಟನಾಕಾರರು ಸಲ್ಲಿಸಿದ ಮನವಿ ಸ್ವೀಕರಿಸಿದರು.

ಕರ್ನ ಲಿಬರಸ ಕಾರ್ಮಿಕರ ಸಂಘದ ಮುಖಂಡ ರಾಘವೇಂದ್ರ ಮತ್ತು ಪುಟ್ಟೆಗೌಡ, ಡಿಸಾ ಕಾರ್ಮಿಕರ ಸಂಘ ಮುಖಂಡ ಅನಂದ್, ಕುಮಾರ್, ವಾಹನ ಚಾಲಕರ ಸಂಘದ ಉಮೇಶ್, ನಾಗರಾಜು, ಕಸದ ವಾಹನ ಚಾಲಕರ ಸಂಘ ಮಂಜುನಾಥ್, ಎಂ. ಹೆಚ್ ಐ ಎನ್ ಕಾರ್ಮಿಕ ಸಂಘ, ಧನಂಜಯ, ಪೀಟ್ ವೆಲ್ ಕಾರ್ಮಿಕರ ಸಂಘ ರಮೇಶ ಮತ್ತಿತರರು ಹಾಜರಿದ್ದರು.

ಕೋಲಾರ:

ಕೋಲಾರದ ಮೆಕ್ಕೆ ವೃತ್ತದಲ್ಲಿ ಸಿಐಟಿಯು ವತಿಯಿಂದ ಪ್ರತಿಭಟನೆ ನಡೆಯಿತು. ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ ವಿಜಯಕೃಷ್ಣ, ಮುಖಂಡರಾದ ಪಿ. ಶ್ರೀನಿವಾಸ್, ಗಾಂಧಿನಗರ ನಾರಾಯಣಸ್ವಾಮಿ, ಎ.ಆರ್. ಬಾಬು, ಭೀಮರಾಜ್, ಕೇಶವರಾವ್ ಹನುಮಂತರಾಯ, ಅಪ್ಪಯ್ಯಣ್ಣ ಮತ್ತಿತರರು ಭಾಗವಹಿಸಿದ್ದರು.

ಉಡುಪಿ, ಉತ್ತರ ಕನ್ನಡ, ಚಿಕ್ಕಬಳ್ಳಾಪುರ, ಮೈಸೂರು, ಕಲಬುರಗಿ, ಕೊಪ್ಪಳ, ಯಾದಗಿರಿ, ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ಬಳ್ಳಾರಿ, ವಿಜಯಪುರ, ಚಿತ್ರದುರ್ಗ, ಮಂಡ್ಯ, ಹಾಸನ, ಬೀದರ್, ರಾಮನಗರ ಸೇರಿದಂತೆ ವಿವಿಧ ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿಯೂ ಪ್ರತಿಭಟನೆ ನಡೆದ ವರದಿಗಳು ಬಂದಿವೆ.

ಜನಶಕ್ತಿ ಕನ್ನಡ ವಾರಪತ್ರಿಕೆ


ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467

ಸಾರ್ವಜನಿಕ ರಾಜಸ್ವ ಸೊರಗುತ್ತಿದ್ದರೆ ಸಾರ್ವಜನಿಕ ಋಣ ಸೊಕ್ಕಿ ಏರಿಕೆಯಾಗುತ್ತಿದೆ. ಏಕೀಕರಣದ 1956 ರಿಂದ 2013–14ರವರೆಗೆ, ಅಂದರೆ ಸುಮಾರು 57 ವರ್ಷಗಳಲ್ಲಿನ ರಾಜ್ಯದ ಋಣ ರೂ. 1.36 ಲಕ್ಷ ಕೋಟಿ. ಕಳೆದ ಹತ್ತು ವರ್ಷಗಳಲ್ಲಿ ಏರಿಕೆ ರೂ. 3.76 ಲಕ್ಷ ಕೋಟಿಯಾಗಿದೆ. ಸರ್ಕಾರಗಳು ಸಾಲ ಮಾಡಬೇಕು. ಆದರೆ ಎತ್ತಿದ ಸಾಲವನ್ನು ಆಸ್ತಿ ನಿರ್ಮಾಣಕ್ಕೆ, ಬಂಡವಾಳ ಸೃಜನೆಗೆ ಹೂಡಿಕೆ ಮಾಡಿದರೆ ಸರಿ. ಇದಕ್ಕೆ ಬದಲಾಗಿ ರೆವಿನ್ಯೂ ಕೊರತೆಯನ್ನು ತುಂಬಲು, ಹಿಂದಿನ ಸಾಲದ ಬಡ್ಡಿಗೆ, ಮತ್ತು ಸಾಲದ ಮರುಪಾವತಿಗೆ ನೀಡಿದರೆ ಅಲ್ಲಿ ವಿತ್ತೀಯ ಶಿಸ್ತು ಇರುವುದಿಲ್ಲ. 2023–24ರ ಬಜೆಟ್ ಮಾಹಿತಿ ಪ್ರಕಾರ ಸಾಲದ ಬಡ್ಡಿ ರೂ. 34,023 ಕೋಟಿ ಮತ್ತು ಸಾಲ ಮರುಪಾವತಿ ರೂ. 22,441 ಕೋಟಿ. ಒಟ್ಟು ರೂ. 56,464 ಕೋಟಿ. ಎತ್ತಿದ ಸಾಲ ರೂ. 78,000 ಕೋಟಿಯಲ್ಲಿ ರೂ. 56,464 ಕೋಟಿ ಹೀಗೆ ವೆಚ್ಚವಾದರೆ ಬಂಡವಾಳ ಹೂಡಿಕೆಗೆ ಉಳಿಯುವುದು ಕೇವಲ ರೂ. 22,464 ಕೋಟಿ ಮಾತ್ರ.

ಕರ್ನಾಟಕದ ಆರ್ಥಿಕ ದುರವಸ್ಥೆ



ಪ್ರೊ.ಟಿ.ಆರ್. ಚಂದ್ರಶೇಖರ

ನಮ್ಮ ಆರ್ಥಿಕತೆಯಲ್ಲಿ ಅಭಿವೃದ್ಧಿ ನಡೆಯುತ್ತಿದೆ. ಇದು ಜನರ ಪರಿಶ್ರಮದಿಂದ ರೂಢಿಗತವಾಗಿ ನಡೆಯುತ್ತಿದೆ. ಇದು ಸರ್ಕಾರದ ನೀತಿ–ಕ್ರಮಗಳಿಂದ ನಡೆಯುತ್ತಿಲ್ಲ. ಆರ್ಥಿಕ ನಿರ್ವಹಣೆಯು ಸರ್ಕಾರದ ಆದ್ಯತೆಯಾಗಿ ಉಳಿದಿಲ್ಲ. ಸರ್ಕಾರದ ನೀತಿ–ಕಾರ್ಯಕ್ರಮಗಳು ಇಲ್ಲದಿದ್ದರೂ ಅಭಿವೃದ್ಧಿಯು ಯಥಾ ಪ್ರಕಾರ ನಡೆಯುತ್ತದೆ ಎಂಬುದು ನಮ್ಮ ನಂಬಿಕೆ. ಮಳೆರಾಯ ಮಳೆ ತರುತ್ತಾನೆ, ರೈತರು–ಕೂಲಿಕಾರರು ದುಡಿಯುತ್ತಾರೆ. ಆಹಾರ ಉತ್ಪಾದನೆ ನಡೆಯುತ್ತಿರುತ್ತದೆ. ಕೈಗಾರಿಕೆಗಳಲ್ಲಿ ಕೆಲಸ ನಡೆಯುತ್ತಿರುತ್ತದೆ. ಸರ್ಕಾರಿ ನೌಕರರು ಕೆಲಸ ಮಾಡುತ್ತಿರುತ್ತಾರೆ. ಇಂದು ಅಭಿವೃದ್ಧಿ ನಡೆಯುತ್ತಿರುವುದು ಹೀಗೆಯೇ! ಜನರ ಬದುಕು–ಬವಣೆಗಳು ಸರ್ಕಾರಕ್ಕೆ ಸಮಸ್ಯೆಯಾಗುತ್ತಿಲ್ಲ. ಅದಕ್ಕೆ ಸಮಸ್ಯೆ ಯಾವುವೆಂದರೆ: ಊರು–ಕೇರಿಗಳ ಹೆಸರು ಬದಲಾಯಿಸುವುದು, ದೇವಸ್ಥಾನಗಳನ್ನು ನಿರ್ಮಿಸುವುದು, ಮಸೀದಿಗಳನ್ನು ಹಳೆಯ ದೇವಾಲಯಗಳೆಂದು ಆಕ್ರಮಿಸಿಕೊಳ್ಳುವುದು, ರಸ್ತೆಗಳು, ಅಣೆಕಟ್ಟೆಗಳನ್ನು ಜನರು ಕೇಳಬಾರದು. ಲವ್ ಜಿಹಾದ್ ಬಗ್ಗೆ, ಹಿಜಾಬ್ ಬಗ್ಗೆ, ಆಜಾನ್ ಬಗ್ಗೆ ಜನರು ಗಮನ ನೀಡಬೇಕು ಎಂಬುದು ಈ ಸರ್ಕಾರ ಜನರಿಗೆ ನೀಡುತ್ತಿರುವ ಸಂದೇಶ. ಮಾಧ್ಯಮಗಳನ್ನು ಅಡಿಯಾಳುಗಳನ್ನಾಗಿ ಮಾಡಿಕೊಳ್ಳುವುದು ಇದರ ಮತ್ತೊಂದು ತಂತ್ರ. ಪಠ್ಯ ಪುಸ್ತಕಗಳಲ್ಲಿ ಕೋಮುವಾದವನ್ನು–ಮೌಢ್ಯವನ್ನು ತುಂಬುವುದು ಇದರ ಇನ್ನೊಂದು ಷಡ್ಯಂತ್ರ. ಸರ್ಕಾರದ–ಆಳುವ ಪಕ್ಷದ ಈ ಜಾಯಮಾನಕ್ಕೆ ಜನರೂ ಒಗ್ಗಿಕೊಳ್ಳುತ್ತಿರುವಂತೆ ಕಾಣುತ್ತದೆ. ಧರ್ಮ–ಧರ್ಮಗಳ ನಡುವೆ, ಜಾತಿ–ಜಾತಿಗಳ ನಡುವೆ ವಿಷ ಬಿತ್ತುವುದು, ಜಗಳ ಹುಟ್ಟು ಹಾಕುವುದು ಇತ್ಯಾದಿ. ಇದಕ್ಕೆ ನಿದರ್ಶನಗಳು–ಉದಾಹರಣೆಗಳನ್ನು ನೀಡುವ ಅಗತ್ಯವಿಲ್ಲ. ಇವೆಲ್ಲ ಜಗಜ್ಜಾಹೀರಾಗಿವೆ. ಆರ್ಥಿಕತೆಯ ಬಗ್ಗೆ ಬರೀ ಸುಳ್ಳುಗಳನ್ನು ಹೇಳುವುದು ಸರ್ಕಾರಕ್ಕೆ ರೂಢಿಯಾಗಿ ಬಿಟ್ಟಿದೆ. ಈ ಪಟ್ಟಿಯನ್ನು ಹೀಗೆ ಬೆಳೆಸುತ್ತಾ ಹೋಗಬಹುದು. ಇಷ್ಟು ಸಾಕು!

(1). ಆರ್ಥಿಕತೆ ಎಂತಹ ದುಸ್ಥಿತಿಲ್ಲಿದೆ ಎಂದರೆ –

ಇಂದು ನಮ್ಮ ಆರ್ಥಿಕತೆಯು ಕುಸಿಯುತ್ತಾ ನಡೆದಿದೆ. ಈ ಕೆಳಗಿನ ಪಟ್ಟಿ ನೋಡಿ:

ಕ್ರ.ಸಂ.	ಆರ್ಥಿಕ ವಲಯಗಳು	ವಾರ್ಷಿಕ ಆರ್ಥಿಕ ಬೆಳವಣಿಗೆ ಪ್ರಮಾಣ		
		2019–20	2021–22	2022–23
1	ಕೃಷಿ–ತತ್ಸಂಬಂಧಿ ವಲಯ	ಶೇ. 18.1	ಶೇ. 8.7	ಶೇ.5.5
2	ಕೈಗಾರಿಕಾ ವಲಯ	ಶೇ.(_)3.3	ಶೇ.10.3	ಶೇ.5.1
3	ಸೇವಾ(ತೃತೀಯ)ವಲಯ	ಶೇ.9.5	ಶೇ.10.3	ಶೇ.9.2
4	ಜಿ.ಎಸ್.ಡಿ.ಪಿ.	ಶೇ.5.9	ಶೇ.11.9	ಶೇ.7.9

ಮೂಲ: ಮಧ್ಯಮಾವಧಿ ವಿತ್ತೀಯ ಯೋಜನೆ: 2023–2027

ಕರ್ನಾಟಕದಲ್ಲಿ 2022–23 ಸಾಮಾನ್ಯ ವರ್ಷವಾಗಿದೆ. ಯಾವುದೇ ವಿಪತ್ತು–ವಿಕೋಪ ಸಂಭವಿಸಿಲ್ಲ. ಕೊವಿಡ್ ಪೆಂಡಮಿಕ್ ನಿಂದ ಆರ್ಥಿಕತೆ ಚೇತರಿಸಿಕೊಂಡಿದೆ ಎಂದು ಸರ್ಕಾರ ಹೇಳಿಕೊಳುತ್ತಿದೆ. ಆದರೂ ಆರ್ಥಿಕತೆ ಏಕೆ ಹಿಂಜರಿತವನ್ನು ಅನುಭವಿಸಿದೆ? ಜಿಎಸ್‌ಡಿಪಿ ಸೇರಿಸಿಕೊಂಡು ಆರ್ಥಿಕತೆಯ ಮೂರು ವಲಯಗಳು ಕುಸಿತವನ್ನು ಕಂಡಿವೆ.

(2) ರಾಜ್ಯದ 2018–19ರ ಬಜೆಟ್ ಗಾತ್ರ ರೂ. 2.09 ಲಕ್ಷ ಕೋಟಿ. ಇದು ಸದರಿ ವರ್ಷದ ಜಿಎಸ್‌ಡಿಪಿ ಯ ಶೇ. 14.85 ರಷ್ಟಿತ್ತು. ಆದರೆ 2023–24ರ ಬಜೆಟ್ ಗಾತ್ರ ಜಿಎಸ್‌ಡಿಪಿ ಯಲ್ಲಿ ಶೇ. 13.24 ರಷ್ಟಾಗಿದೆ. ಬಜೆಟ್ಟಿನ ಗಾತ್ರವೇನೋ ಮೊತ್ತದಲ್ಲಿ ಏರಿಕೆಯಾಗಿದೆ. ಆದರೆ ಹಣದುಬ್ಬರ ಮತ್ತು ಸಾಪೇಕ್ಷವಾಗಿ ಹೆಚ್ಚಿಗೆಯಾಗಿಲ್ಲ. ಸಾಮಾನ್ಯ ವರ್ಷದಲ್ಲಿಯೇ ಹೀಗಾದರೆ ವಿಪತ್ತು–ವಿಕೋಪ ಸಂಭವಿಸಿದಾಗ ಏನಾಗಬಹುದು?

(3) ಬಜೆಟ್ಟಿನಲ್ಲಿ ಸಾಲ ಮತ್ತು ಬಡ್ಡಿ ಪ್ರಮಾಣಗಳಲ್ಲಿ ವಿಪರೀತ ಏರಿಕೆಯಾಗುತ್ತಿದೆ. ಒಟ್ಟು ರಾಜಸ್ವ ಸ್ವೀಕೃತಿಯಲ್ಲಿ ಸಾಲದ ಪ್ರಮಾಣ 2018–19ರಲ್ಲಿ ಶೇ. 25.42 ರಷ್ಟಿದ್ದುದು 2023–24ರಲ್ಲಿ ಇದು ಶೇ. 34.53 ರಷ್ಟಾಗಿದೆ. ಇದೇ ಅವಧಿಯಲ್ಲಿ ಬಡ್ಡಿ ವೆಚ್ಚವು 2018–19ರಲ್ಲಿ ಒಟ್ಟು ರಾಜಸ್ವ ಸ್ವೀಕೃತಿಯಲ್ಲಿ ಶೇ. 9.35ರಷ್ಟಿದ್ದುದು 2023–24ಲ್ಲಿ ಇದು ಶೇ. 15.06 ರಷ್ಟಾಗಿದೆ.

(4) ಒಕ್ಕೂಟದಿಂದ ಕರ್ನಾಟಕಕ್ಕೆ 2018–19ರಲ್ಲಿ ವರ್ಗಾವಣೆಯಾಗಿದ್ದ ಒಟ್ಟು ತೆರಿಗೆಗಳಲ್ಲಿನ ಪಾಲು ಮತ್ತು ಸಹಾಯಾನುದಾನ ರೂ. 50,621 ಕೋಟಿ. ಇದು 2023–24ರಲ್ಲಿ ರೂ. 50,257 ಕೋಟಿ. ಕಳೆದ 5 ವರ್ಷಗಳಲ್ಲಿ ಏರಿಕೆಯಾಗಿಲ್ಲ. ರಾಜ್ಯದ 2018–19ರ ರಾಜಸ್ವದಲ್ಲಿ ವರ್ಗಾವಣೆ ಪ್ರಮಾಣ ಶೇ. 30.68 ರಷ್ಟಿದ್ದುದು ಮುಂದಿನ ವರ್ಷದಲ್ಲಿ ಇದು ಶೇ. 19.63ಕ್ಕಿಳಿದಿದೆ. ಪ್ರಧಾನಮಂತ್ರಿ ಅವರು ತಮ್ಮ ಆಡಳಿತದಲ್ಲಿ ರಾಜ್ಯಗಳಿಗೆ ಸಂಪನ್ಮೂಲ ವರ್ಗಾವಣೆ ಹೆಚ್ಚಿದೆ ಎನ್ನುತ್ತಾರೆ. ಎಲ್ಲಿ ಹೆಚ್ಚಿದೆ?

(5) ರಾಜ್ಯದ ಸ್ವಂತ ತೆರಿಗೆ ರಾಶಿಯು 2018–19ರ ಜಿಎಸ್‌ಡಿಪಿಯ ಶೇ. 7.64 ರಷ್ಟಿದ್ದುದು 2023–24ರಲ್ಲಿ ಇದು ಶೇ. 7.05ಕ್ಕಿಳಿದಿದೆ. ವಾಣಿಜ್ಯ ತೆರಿಗೆಯಲ್ಲಿಯೂ ಕುಸಿತ ಉಂಟಾಗಿದೆ. ಅಬಕಾರಿ, ಮೋಟಾರು ವಾಹನ ತೆರಿಗೆ ಮತ್ತು ನೋಂದಣಿ– ಮುಂದ್ರಾಂಕ ತೆರಿಗೆಗಳಲ್ಲಿ ಕನಿಷ್ಟ ಏರಿಕೆಯಾಗಿದೆ.

ಈ ಮೇಲಿನ ಅಂಶಗಳು ರಾಜ್ಯದ ರೆವಿನ್ಯೂ ಸಂಗ್ರಹ ಸೊರಗುತ್ತಿರುವುದನ್ನು ತೋರಿಸುತ್ತದೆ. ಸಾರ್ವಜನಿಕ ವೆಚ್ಚವು ಮಾತ್ರ ಏರಿಕೆಯಾಗುತ್ತಿರುತ್ತದೆ. ಈ ವೆಚ್ಚಕ್ಕೆ ರಾಜ್ಯ ಸಂಗ್ರಹಿಸುತ್ತಿರುವ ರಾಜಸ್ವ ಸಾಕಾಗುವುದಿಲ್ಲ. ಇದಕ್ಕಾಗಿ ಸರ್ಕಾರವು ಸಾಲದ ಮೊರೆ ಹೋಗುತ್ತಿದೆ. ಸಾರ್ವಜನಿಕ ರಾಜಸ್ವ ಸೊರಗುತ್ತಿದ್ದರೆ ಸಾರ್ವಜನಿಕ ಋಣ ಸೊಕ್ಕಿ ಏರಿಕೆಯಾಗಿತ್ತಿದೆ.

(6) ಏಕೀಕರಣದ 1956ರಿಂದ 2013–14ರವರೆಗೆ, ಅಂದರೆ ಸುಮಾರು 57 ವರ್ಷಗಳಲ್ಲಿನ ರಾಜ್ಯದ ಋಣ ರೂ. 1.36 ಲಕ್ಷ ಕೋಟಿ. ಆದರೆ ಇದು 2017–18ರಲ್ಲಿ ರೂ. 2.42 ಲಕ್ಷ ಕೋಟಿಗೆ ಮತ್ತು 2022–23ರಲ್ಲಿ ಇದು ರೂ. 5.12 ಲಕ್ಷ ಕೋಟಿಗೇರಿದೆ. ಅಂದರೆ ಕಳೆದ ಹತ್ತು ವರ್ಷಗಳಲ್ಲಿ ಏರಿಕೆ ರೂ. 3.76 ಲಕ್ಷ ಕೋಟಿಯಾಗಿದೆ. ಸರ್ಕಾರಗಳು ಸಾಲ ಮಾಡಬೇಕು. ಆದರೆ ಎತ್ತಿದ ಸಾಲವನ್ನು ಆಸ್ತಿ ನಿರ್ಮಾಣಕ್ಕೆ, ಬಂಡವಾಳ ಸೃಜನೆಗೆ ಹೂಡಿಕೆ ಮಾಡಿದರೆ ಸರಿ. ಇದಕ್ಕೆ ಬದಲಾಗಿ ರೆವಿನ್ಯೂ ಕೊರತೆಯನ್ನು ತುಂಬಲು, ಹಿಂದಿನ ಸಾಲದ ಬಡ್ಡಿಗೆ, ಮತ್ತು ಸಾಲದ ಮರುಪಾವತಿಗೆಗೆ ನೀಡಿದರೆ ಅಲ್ಲಿ ವಿತ್ತೀಯ ಶಿಸ್ತು ಇರುವುದಿಲ್ಲ. ಉದಾ: 2023–24ರ ಬಜೆಟ್ ಮಾಹಿತಿ ಪ್ರಕಾರ ಸಾಲದ ಬಡ್ಡಿ ರೂ. 34,023 ಕೋಟಿ ಮತ್ತು ಸಾಲ ಮರುಪಾವತಿ ರೂ. 22,441 ಕೋಟಿ. ಒಟ್ಟು ರೂ. 56,464 ಕೋಟಿ. ಎತ್ತಿದ ಸಾಲ ರೂ. 78,000 ಕೋಟಿಯಲ್ಲಿ ರೂ. 56,464 ಕೋಟಿ ಹೀಗೆ ವೆಚ್ಚವಾದರೆ ಬಂಡವಾಳ ಹೂಡಿಕೆಗೆ ಉಳಿಯುವುದು ಕೇವಲ ರೂ. 22,464 ಕೋಟಿ ಮಾತ್ರ.



(7) ಸರ್ಕಾರದ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳು

ಒಟ್ಟು ಮಂಜೂರಾದ 7.72 ಲಕ್ಷ ಹುದ್ದೆಗಳಲ್ಲಿ ಖಾಲಿಯಿರುವ ಹುದ್ದೆಗಳು 2.59 ಲಕ್ಷ (ಶೇ. 33.15). ಶಿಕ್ಷಣ ಇಲಾಖೆ ಮತ್ತು ಆರೋಗ್ಯ ಇಲಾಖೆಗಳಲ್ಲಿನ ಖಾಲಿ ಹುದ್ದೆಗಳ ಪ್ರಮಾಣ ಅನುಕ್ರಮವಾಗಿ ಶೇ. 23.33 ಮತ್ತು ಶೇ. 47.05. ಈ ಸ್ಥಿತಿಯಲ್ಲಿ ಯಾವ ಬಗೆಯ ಅಭಿವೃದ್ಧಿ ಕಾರ್ಯಕ್ಷಮತೆ ಸಾಧ್ಯ? ಮೀಸಲಾತಿಯ ವಿಷಯವನ್ನು ಬಿಡಿಸಲಾಗದ ಗೊಂದಲದ ಗೂಡನ್ನಾಗಿ ಸರ್ಕಾರ ಮಾಡಿದೆ. ಮೀಸಲಾತಿ ಪ್ರಮಾಣ ಏರಿಕೆಯಾದರೂ ಅಲ್ಲಿ ದೊರೆಯುವ ಉದ್ಯೋಗಗಳು ಕ್ವಚಿತ್ತಾಗಿವೆ.

(8) ಕಾಮಗಾರಿ–ಕಾಂಟ್ರಾಂಕ್ಟ್ ಗಿರಿ ಸರ್ಕಾರ

ಈ ಬಜೆಟ್ಟಿನಲ್ಲಿ ಸುಮಾರು ರೂ. 3000 ಕೋಟಿ ಅನುದಾನವನ್ನು ಮಹತ್ವಾಕಾಂಕ್ಷಿ (ಹಿಂದುಳಿದ) ತಾಲ್ಲೂಕುಗಳಿಗೆ ಮೀಸಲಿಟ್ಟಿದೆ. ಹಿಂದುಳಿದ ತಾಲ್ಲೂಕುಗಳ ಅಭಿವೃದ್ದಿಗೆ ಅಡ್ಡಿಯಾಗಿರುವ ಅಂಶಗಳೆಂದರೆ ಶಿಕ್ಷಣ, ಆರೋಗ್ಯ, ಆಹಾರ ಭದ್ರತೆ, ಕುಡಿಯುವ ನೀರಿನ ಕೊರತೆಗಳು. ಈ ರೂ. 3000 ಕೋಟಿಯಲ್ಲಿ ಮುಕ್ಕಾಲು ಮೂರು ವೀಸೆ ಪಾಲು ಹಣವನ್ನು ಕಟ್ಟಡಗಳ ನಿರ್ಮಾಣಕ್ಕೆ ಹಂಚಲಾಗಿದೆ. ಉದಾ: ಗುಣಮಟ್ಟದ ಶಿಕ್ಷಣ ಎಂದರೆ ಸರ್ಕಾರಕ್ಕೆ ಹಾಸ್ಟೆಲ್‌ಗಳ ಕಟ್ಟಡ, ಕಾಲೇಜುಗಳ ಕಟ್ಟಡ, ನವೋದಯ ಶಾಲಾ ಕಟ್ಟಡ, ವಸತಿ ಶಾಲಾ ಕಟ್ಟಡ, ಮಹಿಳೆ–ಮಕ್ಕಳ ಅಭಿವೃದ್ಧಿ ಅಂದರೆ ಅಂಗನವಾಡಿಗಳ ನಿರ್ಮಾಣ, ಕಾರ್ಮಿಕ ಕಲ್ಯಾಣ ಎಂದರೆ ಕೌಶಲ್ಯ ಅಭಿವೃದ್ಧಿ – ಹೀಗೆ ಮಹತ್ವಾಕಾಂಕ್ಷಿ ತಾಲ್ಲೂಕುಗಳ ಅಭಿವೃದ್ಧಿಯನ್ನು ಯೋಜಿಸಲಾಗಿದೆ. ಇಲ್ಲಿ ಜನರ ಮತ್ತು ಅವರ ಜೀವನೋಪಾಯದ ಸ್ಪರ್ಶವೇ ಇಲ್ಲ. ಒಟ್ಟು ವೆಚ್ಚದಲ್ಲಿ ಒಕ್ಕೂಟ ಹಾಗೂ ರಾಜ್ಯ ಸೇರಿ ಪೋಷಣ್ ಕಾರ್ಯಕ್ರಮಕ್ಕೆ ಅನುದಾನ ರೂ. 1.96 ಕೋಟಿ(ಶೇ. 0.07).

(9). ಮಿತಿ ಮೀರಿದ ಬಹುಮುಖಿ ಬಡತನ

ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳ 2021ರ ಜನಸಂಖ್ಯೆ(ಅಂದಾಜು) ಅನುಕ್ರಮವಾಗಿ 14.45 ಲಕ್ಷ ಮತ್ತು 22.28 ಲಕ್ಷ. ಒಕ್ಕೂಟ ಸರ್ಕಾರದ ನೀತಿ ಆಯೋಗದ ವರದಿಯಂತೆ ಯಾದಗಿರಿ ಜಿಲ್ಲೆಯಲ್ಲಿ ಬಹುಮುಖಿ ಬಡವರ ಪ್ರಮಾಣ ಶೇ. 41.67 ಮತ್ತು ರಾಯಚೂರಿನ ಬಹುಮುಖಿ ಬಡವರ ಪ್ರಮಾಣ ಶೇ. 32.19. ಅಂದರೆ ಯಾದಗಿರಿ ಜಿಲ್ಲೆಯ 14.45 ಲಕ್ಷ ಜನಸಂಖ್ಯೆಯಲ್ಲಿ ಬಡವರ ಸಂಖ್ಯೆ 6.02 ಲಕ್ಷ. ಇದೇ ರೀತಿಯಲ್ಲಿ ರಾಯಚೂರು ಜಿಲ್ಲೆಯಲ್ಲಿನ ಒಟ್ಟು ಜನಸಂಖ್ಯೆ 22.28 ಲಕ್ಷದಲ್ಲಿ 7.17 ಲಕ್ಷ ಬಡವರಿದ್ದಾರೆ. ಈ ಬಡತನದ ನಿವಾರಣೆಗೆ ಸರ್ಕಾರ ರೂಪಿಸಿರುವ "ಮಹತ್ವಾಕಾಂಕ್ಷೆ" ಯೋಜನೆಯಲ್ಲಿ ಯಾವುದೇ ಕಾರ್ಯಕ್ರಮಗಳಿಲ್ಲ. ಸರ್ಕಾರ 'ಎವಿಡೆನ್ಸ–ಲೆಡ್ ಪಾಲಿಸಿ ಅನಾಲಿಸಿಸ್' ಎಂದು ಹೇಳುತ್ತದೆ. ಆದರೆ ಮಹತ್ವಾಕಾಂಕ್ಷೆ ಜಿಲ್ಲೆಗಳಲ್ಲಿನ ಪುರಾವೆಗಳೇ ಬೇರೆ ಮತ್ತು ಸರ್ಕಾರ ರೂಪಿಸಿರುವ ಕಾರ್ಯಯೋಜನೆಗಳೇ ಬೇರೆ. ಈ ಜಿಲ್ಲೆಗಳಲ್ಲಿ ದುಸ್ಥಿತಿ ಅಂಚಿನಲ್ಲಿರುವ ಜನರ(ವಲ್‌ನರಬಲ್ ಸೆಕ್ಷನ್)ಪ್ರಮಾಣ ಶೇ. 50ಕ್ಕಿಂತ ಅಧಿಕ. ಈ ಪುರಾವೆಗಳನ್ನು(ಎವಿಡೆನ್ಸ)ಗಳನ್ನು ಗಮನಕ್ಕೆ ತೆಗೆದುಕೊಳ್ಳದೆ, ಕೇವಲ 'ಕಾಮಗಾರಿ–ನಿರ್ಮಾಣ–ಕಾಂಟ್ರಾಕ್ಟ್‌ಗಿರಿ' ಯೋಜನೆಗಳನ್ನು ಹಮ್ಮಿಕೊಂಡರೆ ಬಡತನ. ಅಪೌಷ್ಟಿಕತೆ, ನಿರುದ್ಯೋಗ, ಆಹಾರ ಅಭದ್ರತೆ, ಹಸಿವು ಕಡಿಮೆಯಾಗುವುದಿಲ್ಲ.

ನಮಗೆ ಅಗತ್ಯವಾಗಿರುವುದು ಮಹಿಳೆಯರನ್ನು ಸೇರಿಸಿಕೊಂಡು 'ಜನರನ್ನು' ಕೇಂದ್ರವಾಗಿಟ್ಟುಕೊಂಡ ಅಭಿವೃದ್ಧಿ ಕಾರ್ಯಕ್ರಮ. ಆದರೆ ಬಜೆಟ್ಟಿನಲ್ಲಿ ಇಂತಹ ಕಾರ್ಯಯೋಜನೆ ಕಾಣುತ್ತಿಲ್ಲ.

ಹೋರಾಟ ನಿರತ ಪ್ಯಾಲೆಸ್ತೀನಿ ಜನತೆಗೆ ಸೌಹಾರ್ದತೆ ತೋರೋಣ...

ಪ್ರಕಾಶ್ ಕಾರತ್

ಬೆಂಜಮಿನ್ ನೇತ್ಯಾನಹು ಕಳೆದ ವರ್ಷದ ಕೊನೆಯಲ್ಲಿ ತೀವ್ರ–ಬಲಪಂಥೀಯ ಹಾಗೂ ಅತಿಸಂಪ್ರದಾಯವಾದಿ ಧಾರ್ಮಿಕ ಪಕ್ಷಗಳನ್ನು ಒಳಗೊಂಡ ಸಮ್ಮಿಶ್ರ ಸರಕಾರವನ್ನು ರಚಿಸಿದ್ದಾರೆ. ಅಂದಿನಿಂದ ಇಸ್ರೇಲಿ ಭದ್ರತಾ ಪಡೆಗಳು ಮತ್ತು ಯೆಹೂದಿ ವಸಾಹತುವಾದಿಗಳು (ಸೆಟ್ಲರ್‌ಗಳು) ಪಶ್ಚಿಮ ದಂಡೆಯಲ್ಲಿ ಪ್ಯಾಲೆಸ್ತೀನಿಯರ ವಿರುದ್ಧದ ಆಕ್ರಮಣಗಳನ್ನು ಸತತವಾಗಿ ಹೆಚ್ಚಿಸಿದ್ದಾರೆ.

ಅಂತರರಾಷ್ಟ್ರೀಯ ಕಾನೂನಿಗೆ ವಿರುದ್ಧವಾಗಿ ಪಶ್ಚಿಮ ದಂಡೆಯನ್ನು ಇಸ್ರೇಲ್‌ನಲ್ಲಿ ವಿಲೀನಗೊಳಿಸುವುದಾಗಿ ನೇತ್ಯಾನಹು ಸರಕಾರ ಘೋಷಿಸಿದೆ. ಪಶ್ಚಿಮ ದಂಡೆಯು 1967ರಿಂದಲೂ ಇಸ್ರೇಲ್ ಆಕ್ರಮಿಸಿರುವ ಪ್ರದೇಶ ಎಂದು ಅಂತರರಾಷ್ಟ್ರೀಯ ಕಾನೂನು ಪರಿಗಣಿಸಿದೆ.

ಇಸ್ರೇಲ್ ಸರಕಾರ ಫೆಬ್ರವರಿ ಮಧ್ಯ ಭಾಗದಲ್ಲಿ ಪಶ್ಚಿಮ ದಂಡೆಯ ಹಿಂದಿನ ಒಂಬತ್ತು ಅಕ್ರಮ ವಸಾಹತುಗಳನ್ನು ಅಧಿಕೃತಗೊಳಿಸಿದೆ. ಈ ವಸಾಹತುಗಳಲ್ಲಿ 10,000 ಹೊಸ ಮನೆಗಳೂ ಇರಲಿವೆ.

ಇಸ್ರೇಲ್ 1967ರ ಅತಿಕ್ರಮಣದ ನಂತರದಿಂದ, ಪಶ್ಚಿಮ ದಂಡೆ ಮತ್ತು ಪೂರ್ವ ಜೆರುಸಲೇಂನಲ್ಲಿ 140 ವಸಾಹತುಗಳನ್ನು ಕಟ್ಟಿದ್ದು ಆರು ಲಕ್ಷ ಯೆಹೂದಿ ಸೆಟ್ಲರ್‌ಗಳು ಅಲ್ಲಿ ನೆಲೆಸಿದ್ದಾರೆ. ಯೆಹೂದಿ ಸೆಟ್ಲರ್‌ಗಳ ಅಕ್ರಮ ಒತ್ತುವರಿಯ ನಿರಂತರ ಒತ್ತಡವಲ್ಲದೆ ಪಶ್ಚಿಮ ದಂಡೆಯಲ್ಲಿ ನೆಲೆಸಿದ ಪ್ಯಾಲೆಸ್ತೀನಿಯರನ್ನು ಅವರ ಮನೆಗಳು ಮತ್ತು ಭೂಮಿಯಿಂದ ಒಕ್ಕಲೆಬ್ಬಿಸಲು, ಪ್ಯಾಲೆಸ್ತೀನಿಯರನ್ನು ಓಡಿಸಬೇಕೆಂದು ಬಹಿರಂಗವಾಗಿ ಪ್ರತಿಪಾದಿಸುವ ಕೆಲವು ಧಾರ್ಮಿಕ ಪಕ್ಷಗಳೇ ಇರುವಂಥ ಪ್ರಸಕ್ತ ಸರಕಾರ ಅಧಿಕಾರಕ್ಕೆ ಬರುವುದರೊಂದಿಗೆ ಹಿಂಸಾಚಾರದ ಚಕ್ರದಲ್ಲಿ ನಾಟಕೀಯ ಏರಿಕೆ ಕಂಡು ಬಂದಿದೆ. ಇಸ್ರೇಲಿ ರಕ್ಷಣಾ ಪಡೆಗಳು ಮತ್ತು ಇತರ ಅರೆ–ಸೇನಾ ಪಡೆಗಳ ಸಿಬ್ಬಂದಿ, ಭಯೋತ್ಪಾದಕರನ್ನು ಬಂಧಿಸುವ ನೆಪದಲ್ಲಿ ಪಶ್ಚಿಮ ದಂಡೆಯ ನಗರಗಳ ಮೇಲೆ ಸತತವಾಗಿ ದಾಳಿಗಳನ್ನು ನಡೆಸುತ್ತಿದ್ದಾರೆ. ಜೆನಿನ್‌ನಲ್ಲಿ ಜನವರಿ ತಿಂಗಳಲ್ಲಿ ಇಂಥ ದಾಳಿಗಳು ನಡೆದಿದ್ದು ಹತ್ತು ಪ್ಯಾಲೆಸ್ತೀನಿಯರ ಮರಣ ಸಂಭವಿಸಿದೆ. ಮೃತರಲ್ಲಿ 61 ವರ್ಷದ ಮಹಿಳೆಯ ಸಹಿತ ಬಹುತೇಕರು ನಾಗರಿಕರೇ ಆಗಿದ್ದರು. ಫೆಬ್ರವರಿ 22ರಂದು ನಬ್ಲಸ್ ಪಟ್ಟಣದಲ್ಲಿ ನಡೆದ ಇದೇ ರೀತಿಯ ಮಾರಣ ಹೋಮದಲ್ಲಿ 11 ಪ್ಯಾಲೆಸ್ತೀನಿಯರು ಮೃತರಾಗಿ 102 ಜನರು ಗಾಯಗೊಂಡಿದ್ದಾರೆ.

2023ರ ಆರಂಭದಿಂದ ಇದುವರೆಗೆ ಒಟ್ಟು 62 ಪ್ಯಾಲೆಸ್ತೀನಿಯರ ಹತ್ಯೆ ನಡೆದಿದೆ. ಅಂದರೆ ಸರಾಸರಿ ಪ್ರತಿ ದಿನ ಒಬ್ಬರಿಗಿಂತ ಹೆಚ್ಚು ಪ್ಯಾಲೆಸ್ತೀನಿಯರ ಹತ್ಯೆ ನಡೆದಂತಾಗಿದೆ.

ತಮ್ಮದೇ ಸ್ವಂತ ಮನೆಗಳಲ್ಲಿ ಸುತ್ತುವರಿಯಲ್ಪಟ್ಟು ದಾಳಿಗೊಳಗಾದವರ ಪೈಕಿ ಕೆಲವು ಪ್ಯಾಲೆಸ್ತೀನಿಯರು ಹತಾಶೆಯಿಂದ ಪ್ರತಿ ದಾಳಿ ನಡೆಸಿದ್ದಾರೆ. ನಬ್ಲಸ್ ದಾಳಿಯ ನಂತರ, ಆ ಪಟ್ಟಣದ ಸಮೀಪದ ಹುವಾರಾ ಎಂಬಲ್ಲಿ ಇಬ್ಬರು ಯೆಹೂದಿ ಸೆಟ್ಲರ್ ಸೋದರರನ್ನು ಗುಂಡಿಟ್ಟು ಕೊಲ್ಲಲಾಗಿದೆ. ಅದೇ ದಿನ, ಕೆಲವು ಐಡಿಎಫ್ ಸೈನಿಕರ ಜೊತೆಗೂಡಿ 400 ಯೆಹೂದಿ ಸೆಟ್ಲರ್‌ಗಳು ಪ್ಯಾಲೆಸ್ತೀನಿ ಪ್ರದೇಶಗಳ ಮೇಲೆ ಆಕ್ರಮಣ ನಡೆಸಿದ್ದಾರೆ. 30 ಮನೆಗಳನ್ನು ಸುಟ್ಟು ಹಾಕಲಾಗಿದೆ, 40 ಮನೆಗಳು ಹಾನಿಗೊಂಡಿವೆ ಮತ್ತು 100 ಕಾರುಗಳನ್ನು ನಾಶ ಮಾಡಲಾಗಿದೆ. ಒಬ್ಬ ಪ್ಯಾಲೆಸ್ತೀನಿ ವ್ಯಕ್ತಿ ಮೃತಪಟ್ಟು ಇನ್ನೊಬ್ಬ ಗಂಭೀರವಾಗಿ ಗಾಯಗೊಂಡಿದ್ದಾನೆ. ಆಳುವ ಮೈತ್ರಿಕೂಟದ ಪ್ರಮುಖ ಸದಸ್ಯ ಪಕ್ಷವೊಂದು ಈ ಹಿಂಸಾಚಾರವನ್ನು ಸಮರ್ಥಿಸಿಕೊಂಡಿದೆ ಎನ್ನುವುದು ಗಮನಾರ್ಹ. ವಾಸ್ತವವಾಗಿ ಈ ಹಿಂಸಾಚಾರವನ್ನು ಪ್ರೋಗ್ರಾಂ (ವ್ಯವಸ್ಥಿತ ನರಮೇಧ) ಎಂದು ಮಾನವ ಹಕ್ಕುಗಳ ಸಂಸ್ಥೆಗಳು ವರ್ಣಿಸಿವೆ.

ಈ ನಡುವೆ, ಇಸ್ರೇಲ್ ಸುತ್ತುವರಿಸಿರುವ (ಬ್ಲಾಕ್ ಮಾಡಿರುವ) ಗಾಜಾ ಪಟ್ಟಿಯಲ್ಲಿ ನೆಲೆಸಿರುವ ಪಾಲೆಸ್ತೀನಿಯರ ಮೇಲೆ ನಿಯಮಿತವಾಗಿ ವೈಮಾನಿಕ ಬಾಂಬ್ ದಾಳಿ ನಡೆಸಲಾಗುತ್ತಿದ್ದು ಅಲ್ಲಿನ ಸುಮಾರು 20 ಲಕ್ಷ ಜನರಿಗೆ ಬದುಕು ಅಸಹನೀಯವಾಗಿದೆ.



ವಿಶ್ವ ಸಂಸ್ಥೆಯ ನಿರ್ಣಯಗಳನ್ನು ಉಲ್ಲಂಘಿಸಿ ಅಕ್ರಮ ವಸಾಹತುಗಳ ನಿರ್ಮಾಣಕ್ಕೆ ಇಸ್ರೇಲ್ ಸರಕಾರ ಬಹಿರಂಗವಾಗಿ ಆಶ್ರಯ ನೀಡುತ್ತಿರುವುದರಿಂದ ಇಸ್ರೇಲ್‌ನ ವಸಾಹತು ನಿರ್ಮಾಣ ಮತ್ತು ವಿಸ್ತರಣೆಯನ್ನು ಖಂಡಿಸುವ ಸರ್ವಾನುಮತದ ಗೊತ್ತುವಳಿಯನ್ನು ಭದ್ರತಾ ಮಂಡಳಿ ಫೆಬ್ರವರಿ 14ರಂದು ಅಂಗೀಕರಿಸಿದೆ. ಆದರೆ, ಅಮೆರಿಕದ ಮಧ್ಯಪ್ರವೇಶದಿಂದಾಗಿ, ಪ್ಯಾಲೆಸ್ತೀನಿ ಪ್ರತಿನಿಧಿ ಮಂಡಿಸಿದ ಕರಡು ಗೊತ್ತುವಳಿಗೆ ಹೋಲಿಸಿದರೆ ಈ ನಿರ್ಣಯ ತೀರಾ ದುರ್ಬಲವಾಗಿತ್ತು. ಪ್ಯಾಲೆಸ್ತೀನಿ ಪ್ರತಿನಿಧಿ ಮಂಡಿಸಿದ ಗೊತ್ತುವಳಿಯು ಇಸ್ರೇಲಿ ಸೆಟ್ಲ್‌ಮೆಂಟ್‌ಗಳಲ್ಲಿನ ಚಟುವಟಿಕೆಗಳಿಗೆ ಪೂರ್ಣ ವಿರಾಮ ಹಾಕುವಂತೆ ಒತ್ತಾಯಿಸಿದ್ದು ಕಾನೂನುಬದ್ಧವಾಗಿ ಅದನ್ನು ಪಾಲಿಸುವುದು ಅಗತ್ಯವಾಗುತ್ತಿತ್ತು.

ಈ ಹಿಂದಿನ ಒಂದು ಸಂಪಾದಕೀಯದಲ್ಲಿ ಗಮನಿಸಿದಂತೆ, ಪ್ಯಾಲೆಸ್ತೀನಿ ಉದ್ದೇಶಕ್ಕೆ ಬೆಂಬಲ ನೀಡುವ ದೀರ್ಘಕಾಲದ ದೃಢ ನಿಲುವಿನಿಂದ ಭಾರತ ಹಿಂದೆ ಸರಿಯುತ್ತಿದೆ. ಈಗ ನಡೆಯುತ್ತಿರುವ ಹಿಂಸಾಚಾರದ ವೇಳೆಯಲ್ಲಿ ಏಳು ಯೆಹೂದಿಗಳ ಸಾವಿಗೆ ಕಾರಣವಾದ ಜೆರುಸಲೇಂನ ಒಂದು ಯೆಹೂದಿ ಮಂದಿರದ (ಸೈನಾಗಾಗ್) ಮೇಲೆ ನಡೆದ ದಾಳಿಯನ್ನು ವಿದೇಶಾಂಗ ಸಚಿವಾಲಯದ ವಕ್ತಾರರು ಬಲವಾಗಿ ಖಂಡಿಸಿದ್ದಾರೆ. ಆದರೆ ಇಸ್ರೇಲಿ ಭದ್ರತಾ ಪಡೆಗಳು ಜೆನಿನ್ ಮತ್ತು ನಬ್ಲಸ್‌ನಲ್ಲಿ ನಡೆಸಿದ ನರಮೇಧದ ಬಗ್ಗೆ ಸರಕಾರ ದಿವ್ಯ ಮೌನ ತಾಳಿದೆ. ಅಮೆರಿಕ, ಯುಎಇ, ಇಸ್ರೇಲ್ ಮತ್ತು ಭಾರತ ಒಳಗೊಂಡಿರುವ ತಥಾಕಥಿತ ಮಧ್ಯಪ್ರಾಚ್ಯ (ಮಿಡ್ಲ್‌ಈಸ್ಟರ್ನ್) ಕ್ವಾಡ್ ಕೂಟವನ್ನು ಭಾರತ ಸೇರಿದೆ. ನೇತ್ಯಾನಹು ಸರಕಾರದ ಅತಿರೇಕದ ಜನಾಂಗವಾದಿ (ಝಿಯೋನಿಸ್ಟ್) ಧೋರಣೆಗೆ ಹಿಂದುತ್ವ ಶಕ್ತಿಗಳು ಸಂಪೂರ್ಣ ಬೆಂಬಲ ನೀಡುತ್ತಿವೆ.

ಆದ್ದರಿಂದ, ಹೋರಾಟ ನಿರತ ಪ್ಯಾಲೆಸ್ತೀನಿ ಜನರಿಗೆ ಬೆಂಬಲ ಕ್ರೋಢೀಕರಿಸಲು ಭಾರತದ ಜಾತ್ಯತೀತ ಜನತಾಂತ್ರಿಕ ಶಕ್ತಿಗಳನ್ನು ಅಣಿನೆರೆಸಬೇಕಾಗಿದೆ. ಮಾರ್ಚ್ 7 ರಿಂದ 11ರ ವರೆಗೆ ಪ್ಯಾಲೆಸ್ತೀನಿ ಸೌಹಾರ್ದ ಅಭಿಯಾನ ನಡೆಸುವಂತೆ ಅಖಿಲ ಭಾರತ ಶಾಂತಿ ಮತ್ತು ಸೌಹಾರ್ದತೆ ಸಂಸ್ಥೆ (ಎಐಪಿಎಸ್‌ಒ) ಕರೆ ನೀಡಿದೆ. ಈ ಅಭಿಯಾನವನ್ನು ಯಶಸ್ವಿಗೊಳಿಸಲು ಎಲ್ಲಾ ಸಾಮ್ರಾಜ್ಯಶಾಹಿ–ವಿರೋಧಿ, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಕೆಲಸ ಮಾಡಬೇಕು.

ಅನು: ವಿಶ್ವ

ತ್ರಿಪುರಾದಲ್ಲಿ ಭಾರೀ ಹಣ ಸುರಿದರೂ ಬಿಜೆಪಿ ಮೈತ್ರಿಕೂಟಕ್ಕೆ ಸಿಕ್ಕಿರುವುದು ಸಣ್ಣ ಬಹುಮತ

ಬಿಜೆಪಿ ಮೈತ್ರಿಕೂಟವು ತ್ರಿಪುರಾದಲ್ಲಿ ಅಧಿಕಾರಕ್ಕೆ ಮರಳಿದರೂ, ಹಿಂದಿನ 2018 ರ ಚುನಾವಣೆಯಲ್ಲಿ 60 ಶಾಸಕರ ವಿಧಾನಸಭೆಯಲ್ಲಿ 44 ಸ್ಥಾನಗಳನ್ನು ಗೆದ್ದಿದ್ದ ಅದರ ಶಾಸಕರ ಸಂಖ್ಯೆ ಈ ಬಾರಿ 33ಕ್ಕೆ ಇಳಿದಿದೆ.

ಈ ಅಲ್ಪ ಬಹುಮತ ಕೂಡ ಅದು ಅಭೂತಪೂರ್ವ ಮೊತ್ತದಲ್ಲಿ ಹಣ ಖರ್ಚು ಮಾಡಿ ಮತ್ತು ಇತರ ದುರಾಚರಣೆಗಳನ್ನು ನಡೆಸಿಯೇ ಪಡೆದಿರುವಂತದ್ದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಬಿಜೆಪಿಯನ್ನು ತಿರಸ್ಕರಿಸುವ ಮೂಲಕ ಎಡರಂಗ ಮತ್ತು ಪ್ರತಿಪಕ್ಷಗಳ ಅಭ್ಯರ್ಥಿಗಳಿಗೆ ಮತ ಹಾಕಿದ ಎಲ್ಲರಿಗೂ ಸಿಪಿಐ(ಎಂ) ಶುಭಾಶಯ ಕೋರಿದೆ. ಸಿಪಿಐ(ಎಂ) ಮತ್ತು ಎಡರಂಗದ ಸಾವಿರಾರು ಕಾರ್ಯಕರ್ತರು ಕಳೆದ ಐದು ವರ್ಷಗಳಲ್ಲಿ ತಮ್ಮ ಮೇಲೆ ಹರಿಯಬಿಟ್ಟ ದಬ್ಬಾಳಿಕೆಯನ್ನು ಎದುರಿಸಿ, ಚುನಾವಣಾ ಪ್ರಚಾರವನ್ನು ನಡೆಸಲು ಮತ್ತು ತಾವು ಬಹಳ ಸಮಯದಿಂದ ಭೇಟಿಯಾಗಲು ಸಾಧ್ಯವಾಗದಿದ್ದ ಜನರನ್ನು ತಲುಪಲು ಧೈರ್ಯದಿಂದ ಮುಂದೆ ಬಂದಿದ್ದಾರೆ ಎನ್ನುತ್ತ ಅವರನ್ನೆಲ್ಲ ಪೊಲಿಟ್‌ಬ್ಯುರೊ ಅಭಿನಂದಿಸಿದೆ

ಸಿಪಿಐ(ಎಂ) ಮತ್ತು ಎಡರಂಗವು ಜನರ ಹಿತಾಸಕ್ತಿಗಳನ್ನು ಕಾಪಾಡುವುದಕ್ಕೆ ತಮ್ಮ ಬದ್ಧತೆಯನ್ನು ಪುನರುಚ್ಚರಿಸುತ್ತ ಹೊಸ ಹುಮ್ಮಸ್ಸು ಮತ್ತು ಶಕ್ತಿಯೊಂದಿಗೆ ಕೆಲಸ ಮಾಡಲಿದೆ ಎಂದು ಅದು ಹೇಳಿದೆ.

ಅಡುಗೆ ಅನಿಲ ದರ ಹೆಚ್ಚಳ ಹಿಂಪಡೆಯಬೇಕು – ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹ

ಗೃಹಬಳಕೆಯ ಅಡುಗೆ ಅನಿಲ(ಎಲ್‌ಪಿಜಿ) ಸಿಲಿಂಡರ್‌ನ ಬೆಲೆಯನ್ನು ಮತ್ತೊಮ್ಮೆ 50 ರೂ. ಹೆಚ್ಚಿಸಿರುವುದು ಒಂದು ಕ್ರೂರ ಏರಿಕೆ ಎಂದು ತೀವ್ರವಾಗಿ ಖಂಡಿಸಿರುವ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಪೊಲಿಟ್ ಬ್ಯುರೊ, ದೇಶದಲ್ಲಿ ಹೆಚ್ಚುತ್ತಿರುವ ನಿರುದ್ಯೋಗ, ಬಡತನ ಮತ್ತು ಹಣದುಬ್ಬರದಿಂದಾಗಿ ಜನತೆ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಎಲ್ಲಾ ಆಹಾರ ಪದಾರ್ಥಗಳು ಮತ್ತು ಅಗತ್ಯ ವಸ್ತುಗಳ ಬೆಲೆಗಳು ನಿರಂತರವಾಗಿ ಏರುತ್ತಿವೆ. ಎಲ್ ಪಿಜಿ ಮೇಲಿನ ಬೆಲೆ ಹೆಚ್ಚಳ ಜನರಿಗೆ ಮತ್ತಷ್ಟು ಹೊರೆಯಾಗುತ್ತದೆ ಎಂದು ಹೇಳಿದೆ.

ಈ ದರ ಹೆಚ್ಚಳದಿಂದ, ಹೆಚ್ಚಿನ ಜನರು ಅಡುಗೆ ಅನಿಲ ಬಳಸುವುದನ್ನು ಬಿಟ್ಟುಬಿಡುತ್ತಾರೆ. ಏಕೆಂದರೆ ಅವರಿಗೆ ಅದನ್ನು ಖರೀದಿಸಿಲು ಸಾಧ್ಯವಾಗುವುದಿಲ್ಲ. ಈಗಾಗಲೇ, ಉಜ್ವಲ ಯೋಜನೆಯಡಿಯಲ್ಲಿ ಶೇಕಡಾ 10 ಕ್ಕಿಂತ ಹೆಚ್ಚು ಕುಟುಂಬಗಳು ಕಳೆದ ವರ್ಷದಲ್ಲಿ ಯಾವುದೇ ರೀಫಿಲ್ ಸಿಲಿಂಡರ್‌ಗಳನ್ನು ತೆಗೆದುಕೊಂಡಿಲ್ಲ. ಸುಮಾರು ಶೇ. 12ರಷ್ಟು ಕುಟುಂಬಗಳು ವರ್ಷಕ್ಕೆ ಕೇವಲ 1 ರೀಫಿಲ್ ತೆಗೆದುಕೊಂಡರು. ವರ್ಷಕ್ಕೆ 12 ಸಿಲಿಂಡರುಗಳನ್ನು ಪಡೆಯಬಹುದಾಗಿದ್ದರೂ ಮತ್ತು ಸರಾಸರಿಯಾಗಿ ಕನಿಷ್ಟ 7 ಕ್ಕಿಂತ ಹೆಚ್ಚು ಸಿಲಿಂಡರುಗಳ ಅಗತ್ಯವಿದ್ದರೂ, ಒಟ್ಟು ಶೇ. 56.5ರಷ್ಟು ಕುಟುಂಬಗಳು ಕೇವಲ 4 ಅಥವಾ ಇದಕ್ಕಿಂತ ಕಡಿಮೆ ರೀಫಿಲ್‌ಗಳನ್ನು ತೆಗೆದುಕೊಂಡಿದ್ದಾರೆ.

ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಈ ವರ್ಷ ಎರಡನೇ ಬಾರಿಗೆ ಹೆಚ್ಚಿಸಲಾಗಿದೆ. ಇದರೊಂದಿಗೆ ರೂ. 350.50 ಹೆಚ್ಚಳವಾಗಿ ಸಿಲಿಂಡರ್ ಗೆ ದೆಹಲಿಯಲ್ಲಿ 1769 ರೂ. ಗಳಿಂದ 2119.50 ರೂ. ಆಗುತ್ತದೆ. ಇದು ಖಂಡಿತವಾಗಿಯೂ ಎಲ್ಲಾ ಸಂಸ್ಕರಿತ ಆಹಾರ ಉತ್ಪನ್ನಗಳ ಲಾಗುವಾಡು ವೆಚ್ಚವನ್ನು ಹೆಚ್ಚಿಸುವುದರಿಂದ ಮತ್ತಷ್ಟು ಬೆಲೆ ಏರಿಕೆಗೆ ಕಾರಣವಾಗುತ್ತದೆ. ಈ ಏರಿಕೆಗಳನ್ನು ಕೂಡಲೇ ಹಿಂಪಡೆಯಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಆಗ್ರಹಿಸಿದೆ.

ಅಡುಗೆ ಅನಿಲದ (LPG) ದರ ಮಾರ್ಚ್ ಒಂದರಂದು ಮತ್ತೆ 50 ರೂಪಾಯಿ ಏರಿಕೆಯಾಗಿದೆ. ಇದರೊಂದಿಗೆ 14.2 ಕೆಜಿ ಅನಿಲದ ಗೃಹಬಳಕೆ ಸಿಲಿಂಡರ್ ಬೆಲೆ ಬೆಂಗಳೂರಿನಲ್ಲಿ 1,103 ರೂ ದಾಟಿದೆ. ಬೆಲೆ ಏರಿಕೆಯ ಈ ಓಟಕ್ಕೆ ಕಡಿವಾಣ ಇಲ್ಲದಂತಾಗಿದೆ. ಬಡತನದ ರೇಖೆಗಿಂತ ಕೆಳಗಿನ (ಬಿಪಿಎಲ್) ಕುಟುಂಬಗಳು ದುಬಾರಿ ಹಣ ಕೊಟ್ಟು ಅನಿಲವನ್ನು ಮರು ತುಂಬಿಸಿಕೊಳ್ಳಲಾಗದ ಪರಿಸ್ಥಿತಿಗೆ ಬಂದಿವೆ. ಗ್ರಾಮೀಣ ಪ್ರದೇಶದ ಬಹಳಷ್ಟು ಬಡ ಕುಟುಂಬಗಳು ಮತ್ತೆ ಸೌದೆ ಒಲೆಯ ಮೊರೆ ಹೋಗಿವೆ. ವಾಣಿಜ್ಯ ಬಳಕೆಯ 19 ಕೆಜಿ ಅನಿಲದ ಸಿಲಿಂಡರ್ ಬೆಲೆಯೂ ಒಂದೇ ಬಾರಿಗೆ 350 ರೂ ಹೆಚ್ಚಳವಾಗಿದೆ. ಈಗ ಇದರ ದರ 2,119 ರೂ. ಬೆಲೆ ಹೆಚ್ಚಳವಾದ ಕೆಲ ದಿನಗಳ ಕಾಲ ಜನರು ಮೋದಿ ಸರ್ಕಾರದ ವಿರುದ್ಧ ತಮ್ಮ ಆಕ್ರೋಶ ವ್ಯಕ್ತಪಡಿಸುತ್ತಿರುತ್ತಾರೆ.

ಅಡುಗೆ ಅನಿಲದ ಬೆಲೆ ಏಕಿಷ್ಟು ದುಬಾರಿಯಾಗುತ್ತಿದೆ? ಬೆಲೆ ಏರಿಕೆಗೆ ಮುಕ್ತ ಆರ್ಥಿಕ ನೀತಿ ಹೇಗೆ ಕಾರಣ? ಕೇಂದ್ರದಲ್ಲಿ ಆಡಳಿತ ನಡೆಸಿದ ಕಾಂಗ್ರೆಸ್ ಸೇರಿದಂತೆ ಈ ಹಿಂದಿನ ಸರ್ಕಾರಗಳು ಗೃಹಬಳಕೆಯ ಅಡುಗೆ ಅನಿಲದ ಮೇಲಿನ ಸಬ್ಸಿಡಿ ತೆಗೆಯಲು ಏನೆಲ್ಲಾ ತಂತ್ರಗಳನ್ನು ಮಾಡಿದವು? ಭಾರತ ಸರ್ಕಾರದ ಅಂತಿಮ ಗುರಿ ಏನು? ಇವೆಲ್ಲವುಗಳ ಕುರಿತು ಒಂದು ವಿಶ್ಲೇಷಣಾ ವರದಿ ಇಲ್ಲಿದೆ.

ಅಡುಗೆ ಅನಿಲದ ಬೆಲೆ ಏರುತ್ತಲೇ ಇದೆಯೇಕೆ?



ಸಿದ್ದಯ್ಯ ಸಿ.

WTO ಜೊತೆಗಿನ ಒಪ್ಪಂದ

ವಿಶ್ವ ವ್ಯಾಪಾರ ಸಂಘಟನೆ (WTO)ಯ ಜೊತೆ 1991 ರಲ್ಲಿ ಭಾರತ ಸರ್ಕಾರ ಮಾಡಿಕೊಂಡ ಒಪ್ಪಂದದ ಒಂದು ಅಂಶ ಅಡುಗೆ ಅನಿಲದ ಮೇಲಿನ ಈ ಸಬ್ಸಿಡಿ ಕಡಿತ ಮತ್ತು ಬೆಲೆ ಏರಿಕೆಗೆ ಪ್ರಮುಖ ಕಾರಣ. ಜನಸಾಮಾನ್ಯರಿಗೆ ನೀಡುತ್ತಿರುವ ಆಹಾರದ ಮೇಲಿನ ಸಬ್ಸಿಡಿ, ರಸಗೊಬ್ಬರ, ವಿದ್ಯುತ್, ಸೀಮೆ ಎಣ್ಣೆ, ಡೀಸೆಲ್, ಪೆಟ್ರೋಲ್, ಅಡುಗೆ ಅನಿಲ ಇವುಗಳಿಗೆ ಸರ್ಕಾರ ನೀಡುತ್ತಿರುವ ರಿಯಾಯಿತಿಗಳನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಬೇಕು. ಮತ್ತು ಈ ಎಲ್ಲವುಗಳ ಬೆಲೆ ನಿಗದಿ ಮೇಲಿನ ಸರ್ಕಾರದ ನಿಯಂತ್ರಣವನ್ನು ತೆಗೆದುಹಾಕಬೇಕು. ಇವುಗಳನ್ನು ಮುಕ್ತ ಮಾರುಕಟ್ಟೆ ವ್ಯವಸ್ಥೆಗೆ ತೆರೆದಿಡಬೇಕು, ಇವುಗಳ ಉತ್ಪನ್ನ, ಸರಭರಾಜು, ವಿತರಣೆಯನ್ನು ಖಾಸಗಿಯವರಿಗೆ ಬಿಟ್ಟುಕೊಡಬೇಕು ಎಂಬುದು ಡಬ್ಲ್ಯೂಟಿಒ ಸಂಸ್ಥೆ ಷರತ್ತು ವಿಧಿಸಿದ ಷರತ್ತುಗಳಲ್ಲಿ ಕೆಲವು ಅಂಶಗಳಾಗಿವೆ. ಮುಕ್ತ ಆರ್ಥಿಕ ನೀತಿಗಳನ್ನು ಒಪ್ಪಿಕೊಂಡ ನಂತರ ಕೇಂದ್ರದಲ್ಲಿ ಯಾವುದೇ ಸರ್ಕಾರ (ನರಸಿಂಹರಾವ್, ವಾಜಪೇಯಿ, ಯುಪಿಎ, ಅಥವಾ ಮೋದಿ ಸರ್ಕಾರಗಳು) ಅಧಿಕಾರದಲ್ಲಿದ್ದರೂ ಡಬ್ಲ್ಯುಟಿಒ ಒಪ್ಪಂದ ಜಾರಿಮಾಡಲು ಮುಂದಾಗುತ್ತವೆ. ಯುಪಿಎ ಒಂದರ ಆಡಳಿತದ ಸಂದರ್ಭದಲ್ಲಿ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ಕೊಟ್ಟಿದ್ದ ಎಡ ಪಕ್ಷಗಳು, ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಒಪ್ಪಂದದ ಷರತ್ತುಗಳ ಮೂಲಕ ಇಂತಹ ಜನವಿರೋಧಿ ನೀತಿಗಳ ಜಾರಿಯ ವೇಗಕ್ಕೆ ಸ್ವಲ್ಪಮಟ್ಟಿಗೆ ತಡೆಯೊಡ್ಡಿದ್ದವು.



ಪೆಟ್ರೋಲಿಯಂ ಪದಾರ್ಥಗಳ ಮೇಲಿನ ಸರ್ಕಾರದ ನಿಯಂತ್ರಣ ರದ್ದು:

ಯುಪಿಎ ಒಂದರ ಸರ್ಕಾರಕ್ಕೆ ಎಡಪಕ್ಷಗಳು ನೀಡಿದ್ದ ಬೆಂಬಲವನ್ನು ಹಿಂಪಡೆದ ನಂತರದ ಯುಪಿಎ–1ರ ಮತ್ತು ಯುಪಿಎ–2ರ ಆಡಳಿತದ ಅವಧಿಯಲ್ಲಿ ಡಬ್ಲ್ಯುಟಿಒ ಒಪ್ಪಂದಗಳ ಜಾರಿಗೆ ಸರ್ಕಾರ ಮುಂದಾಯಿತು. ಮುಕ್ತ ಆರ್ಥಿಕ ನೀತಿಗಳಿಗೆ ಅನುಗುಣವಾಗಿ ಯುಪಿಎ–2ರ ಅವಧಿಯಲ್ಲಿ ಪೆಟ್ರೋಲ್, ಡೀಸೆಲ್, ಸೀಮೆಎಣ್ಣೆ, ಅಡುಗೆ ಅನಿಲ ಇವುಗಳ ಮೇಲಿನ ಸರ್ಕಾರದ ನಿಯಂತ್ರಣವನ್ನು ಹಿಂಪಡೆಯಿತು. ನಿಯಂತ್ರಣ ರದ್ದುಗೊಳಿಸಿದ ನಂತರ ಇವುಗಳ ಬೆಲೆಯನ್ನು ತೈಲ ಕಂಪನಿಗಳೇ ನಿರ್ಧರಿಸುತ್ತವೆ ಎಂದು ಸರ್ಕಾರ ಹೇಳಿತು. ಸರ್ಕಾರ ಪೆಟ್ರೋಲಿಯಂ ಪದಾರ್ಥಗಳ ಮೇಲಿನ ದರ ನಿಯಂತ್ರಣ ರದ್ದು ಮಾಡಿದರೂ, ಇವುಗಳಿಗೆ ನೀಡುತ್ತಿದ್ದ ಸಬ್ಸಿಡಿಯನ್ನು ಒಂದೇ ಬಾರಿಗೆ ಸ್ಥಗಿತಗೊಳಿಸಲಾಗಲಿಲ್ಲ. ಹೀಗೆ ಹಿಂತೆಗೆದರೆ ಜನರ ಪ್ರತಿರೋಧವನ್ನು ಎದುರಿಸಬೇಕಾದೀತು ಎಂಬ ಭಯ ಆಳುವ ಪಕ್ಷಗಳಿಗೆ. ಈ ಕಾರಣದಿಂದ ಮೊದಲಿಗೆ ಪೆಟ್ರೋಲಿಗೆ ನೀಡುತ್ತಿದ್ದ ಸಬ್ಸಿಡಿಯನ್ನು ಹಂತ ಹಂತವಾಗಿ ಕಡಿತಗೊಳಿಸುತ್ತಾ ಬಂತು. ಪೆಟ್ರೋಲ್ ಬೆಲೆಯನ್ನು 15 ದಿನಕ್ಕೊಮ್ಮೆ ಸ್ವಲ್ಪ ಸ್ವಲ್ಪವೇ ದರ ಹೆಚ್ಚಳ ಮಾಡುತ್ತಾ ಹೋಯಿತು. ಅಷ್ಟರ ಮಟ್ಟಿಗೆ ಸಬ್ಸಿಡಿ ಹಣ ಸರ್ಕಾರಕ್ಕೆ ಉಳಿತಾಯವಾಗುತ್ತಾ ಬಂತು. ಈ ರೀತಿಯ ದರ ಹೆಚ್ಚಳದಿಂದ ಪೆಟ್ರೋಲ್ ಗೆ ಸರ್ಕಾರ ಕೊಡುತ್ತಿದ್ದ ಸಬ್ಸಿಡಿ ಸಂಪೂರ್ಣವಾಗಿ ನಿಂತುಹೋಯಿತು.

ಪೆಟ್ರೋಲ್ ನಂತರ ಡೀಸೆಲ್ ನ ಸರದಿ. ಪ್ರತಿ ಲೀಟರ್ ಡೀಸೆಲ್ ಮೇಲೆ ಪ್ರತಿ ತಿಂಗಳು 50 ಪೈಸೆ ಏರಿಕೆ ಮಾಡುವ ಮೂಲಕ, ಅದಕ್ಕೆ ನೀಡುತ್ತಿದ್ದ ಸಬ್ಸಿಡಿ ಪ್ರಮಾಣವನ್ನು ಸರ್ಕಾರ ಕಡಿತಗೊಳಿಸುತ್ತಾ ಬಂತು. ಡೀಸೆಲ್ ಮೇಲಿನ ಸಬ್ಸಿಡಿಯನ್ನು ಸಂಪೂರ್ಣವಾಗಿ ಹಿಂಪಡೆಯುವ ಮುನ್ನ 2014ರ ಲೋಕಸಭಾ ಚುನಾವಣೆ ಬಂತು. ಆ ಚುನಾವಣೆಯಲ್ಲಿ ಯುಪಿಎ ಸರ್ಕಾರ ಸೋತು ಮೋದಿ ಸರ್ಕಾರ ಅಧಿಕಾರಕ್ಕೆ ಬಂತು. ಮೋದಿ ಸರ್ಕಾರವೂ ಮುಕ್ತ ಆರ್ಥಿಕ ನೀತಿಗಳನ್ನು ಮುಂದುವರಿಸಿತು. ಮೋದಿ ಸರ್ಕಾರ ಡೀಸೆಲ್ ಮೇಲಿನ ಸಬ್ಸಿಡಿ ಕಡಿತದ ಹಿಂದಿನ ಸರ್ಕಾರದ ನೀತಿಯನ್ನು ಮುಂದುವರಿಸಿತು. ಅಂದರೆ ಮೋದಿ ಆಡಳಿತದಲ್ಲೂ ಡೀಸೆಲ್ ದರವನ್ನು 15 ದಿನಗಳಿಗೊಮ್ಮೆ ಹೆಚ್ಚಳ ಮಾಡುವುದನ್ನು ಮುಂದುವರಿಸಿತು. ಒಂದೆರಡು ತಿಂಗಳಲ್ಲಿ ಡೀಸೆಲ್ ಸಬ್ಸಿಡಿ ಸಂಪೂರ್ಣವಾಗಿ ಇಲ್ಲದಂತಾಯಿತು. ಪಡಿತರದ ಮೂಲಕ ವಿತರಣೆ ಮಾಡುತ್ತಿದ್ದ ಸೀಮೆಎಣ್ಣೆಯನ್ನು ಸ್ವಲ್ಪ ಸಲ್ಪವೇ ಕಡಿಮೆ ಮಾಡುತ್ತಾ ಬಂತು. ಉಜ್ವಲ ಯೋಜನೆಯ ಪ್ರಯೋಜನ ಪಡೆದು ಜನಸಾಮಾನ್ಯರು ಅಡುಗೆ ಮಾಡಲು ಸೀಮೆಎಣ್ಣೆ ಬದಲು ಅನಿಲ ಬಳಕೆ ಮಾಡಲು ಮುಂದಾದಾಗ ಪಡಿತರದ ಮೂಲಕ ವಿತರಣೆ ಮಾಡುತ್ತಿದ್ದ ಸೀಮೆಎಣ್ಣೆಯನ್ನು ಸಂಪೂರ್ಣವಾಗಿ ನಿಲ್ಲಿಸಲಾಯ್ತು.

ಅಡುಗೆ ಅನಿಲದ ಮೇಲಿನ ಸಬ್ಸಿಡಿ:

ಯುಪಿಎ–2 ರ ಅವಧಿಯಲ್ಲಿ ಪೆಟ್ರೋಲಿಯಂ ಸಚಿವರಾಗಿದ್ದ ವೀರಪ್ಪ ಮೊಯ್ಲಿಯವರು ಅಡುಗೆ ಅನಿಲಕ್ಕೆ ನೀಡುತ್ತಿರುವ ಸಬ್ಸಿಡಿ ಹಿಂತೆಗೆದು ಕೊಳ್ಳುವ ಪ್ರಯತ್ನ ಮಾಡಿದರು. ಒಂದು ಕುಟುಂಬಕ್ಕೆ



ವರ್ಷಕ್ಕೆ 6 ಸಬ್ಸಿಡಿ ಸಹಿತ ಸಿಲಂಡರುಗಳನ್ನು ಮಾತ್ರ ನೀಡುವುದಾಗಿಯೂ, ಆರಕ್ಕಿಂತ ಹೆಚ್ಚು ಸಿಲಂಡರ್ ಗಳು ಬೇಕಾದಲ್ಲಿ ಮಾರುಕಟ್ಟೆ ದರದಲ್ಲಿ ಖರೀದಿಸಬೇಕೆಂದೂ ಆದೇಶ ಹೊರಡಿಸಿದರು. ಜನರ ಪ್ರತಿರೋಧದಿಂದಾಗಿ ಇದನ್ನು 9 ಸಿಲಂಡರ್ ಗಳಿಗೆ ನಿಗದಿಪಡಿಸಿದರು. ಮತ್ತೊಂದು ಪ್ರಯತ್ನವಾಗಿ ದೇಶದ 56 ಜಿಲ್ಲೆಗಳಲ್ಲಿ ಗ್ರಾಹಕರ ಖಾತೆಗೆ 'ನೇರ ನಗದು ಯೋಜನೆ' ಜಾರಿಗೆ ಮನಮೋಹನ್ ಸಿಂಗ್ ಸರ್ಕಾರ ಮುಂದಾಯಿತು. ಅದರಲ್ಲಿ ನಿರೀಕ್ಷಿಸಿದಷ್ಟು ಯಶಸ್ಸು ಕಾಣಲಿಲ್ಲ. ಬಹಳಷ್ಟು ಬಡ ಗ್ರಾಹಕರ ಬಳಿ ಬ್ಯಾಂಕ್ ಖಾತೆ ಇಲ್ಲದಿದ್ದುದು ಇದಕ್ಕೆ ಒಂದು ಕಾರಣ. ಅಷ್ಟರಲ್ಲಿ ಚುನಾವಣೆ ಸಮೀಪಿಸಿದ ಕಾರಣ ವರ್ಷಕ್ಕೆ 12 ಸಬ್ಸಿಡಿ ಸಹಿತ ಸಿಲಂಡರ್ ಪಡೆಯಲು ಅವಕಾಶ ಮಾಡಿಕೊಡಲಾಯಿತು.

'ಜನ್ ಧನ್ ಯೋಜನೆ'

ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಪ್ರಾರಂಭದಿಂದಲೇ ಡಬ್ಲ್ಯುಟಿಒ ಷರತ್ತುಗಳನ್ನು ಪೂರೈಸಲು ವಿವಿಧ ಬಗೆಯ ಕ್ರಮಗಳನ್ನು ಕೈಗೊಳ್ಳಲು ಮುಂದಾಯಿತು. ಸರ್ಕಾರದ ಯೋಜನೆಗಳು ಜನಪರವಾಗಿವೆ ಎಂದು ನಂಬಿಸುತ್ತಲೇ, ಡಬ್ಲ್ಯುಟಿಒ ಷರತ್ತುಗಳ ಜನವಿರೋಧಿ ನೀತಿಗಳನ್ನು ಜಾರಿಗೆ ತರಲು ಮುಂದಾದರು. ಅಡುಗೆ ಅನಿಲಕ್ಕೆ ನೀಡುತ್ತಿರುವ ಸಬ್ಸಿಡಿ ಹಿಂಪಡೆಯಲು ಯುಪಿಎ ಸರ್ಕಾರ ಜಾರಿಗೆ ತಂದ 'ನೇರ ನಗದು ಯೋಜನೆ' ಯಶಸ್ವಿಯಾಗದೇ ಇರುವುದಕ್ಕೆ ಕಾರಣಗಳನ್ನು ಹುಡುಕಿತು. ಬಹಳಷ್ಟು ಜನತೆ ಬ್ಯಾಂಕ್ ಖಾತೆ ಹೊಂದಿಲ್ಲದಿರುವುದೂ ಇದರ ವಿಫಲತೆಗೆ ಒಂದು ಪ್ರಮುಖ ಕಾರಣ ಎಂದು ತಿಳಿಯಿತು.

ಈ ಅಡೆತಡೆ ತೆಗೆಯಲು ಒಂದು ಉಪಾಯ ಮಾಡಿದರು. ಬಡವರೂ ಬ್ಯಾಂಕ್ ಖಾತೆ ತೆರೆಯುವಂತೆ ಮಾಡಲು 'ಜನ್ ಧನ್ ಯೋಜನೆ' ಜಾರಿಗೆ ತಂದರು. ಜನ್ ಧನ್ ಯೋಜನೆಯ ಮೂಲಕ ಯಾವುದೇ ಹಣ ಇಡದೆ ಬ್ಯಾಂಕ್ ಖಾತೆ ತೆರೆಯಬಹುದು ಎಂದು ಸರ್ಕಾರ ಘೋಷಣೆ ಮಾಡಿತು. ಇದನ್ನು ಮೋದಿ ಸರ್ಕಾರದ ಬಡಜನರ ಪರ ಕಾಳಜಿ ಎಂದು ಬಣ್ಣಿಸಿದರು. ಇಷ್ಟನ್ನೇ ಹೇಳಿದರೆ ಬಹಳಷ್ಟು ಜನರು ಬ್ಯಾಂಕ್ ಖಾತೆ ತೆರೆಯುವ ಶ್ರಮ ಪಡುತ್ತಿರಲಿಲ್ಲ. ಬ್ಯಾಂಕ್ ಖಾತೆ ತೆರೆಯುವವರಿಗೆ ಕೆಲವು ಪ್ರೋತ್ಸಾಹದ ಕೊಡುಗೆಗಳ ಪೊಳ್ಳು ಘೋಷಣೆಯನ್ನೂ ಮಾಡಿದರು. ಈ

ಪುಟ 10 ಕ್ಕೆ







ತ್ರಿಪುರಾ: ಬಿಜೆಪಿ ಮೈತ್ರಿಕೂಟಕ್ಕೆ ಸಿಕ್ಕಿರುವುದು ಸರಳ ಬಹುಮತ

2021ರ ಅಂತ್ಯದಲ್ಲಿ ನಡೆದ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಬಾರಿಸಿತ್ತು. ಅದು ಶೇ. 60ರಷ್ಟು ಮತಗಳನ್ನು ಪಡೆದಿತ್ತು. ಆದರೆ ವಿಧಾನಸಭೆ ಚುನಾವಣೆಯಲ್ಲಿ ಅದು ಶೇ.40ಕ್ಕೆ ಕುಸಿದಿದೆ. ಸ್ಥಳೀಯಾಡಳಿತದ ಚುನಾವಣೆಯಲ್ಲಿ ಅಕ್ರಮ, ಹಿಂಸಾಚಾರ ಎಗ್ಗಿಲ್ಲದೆ ನಡೆದಿದೆ ಎಂಬ ಆರೋಪ ಇದರಿಂದ ನಿಜವಾಗುತ್ತಿದೆ. ತೀಪ್ರಾ ಮೋಥಾ ಎಡಪಕ್ಷಗಳೊಂದಿಗೆ ನಿಂತಿದ್ದರೆ, ಬಿ.ಜೆ.ಪಿ ಆಡಳಿತವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ.

–ಎ. ಅನ್ವರ್ ಹುಸೇನ್–

ತ್ರಿಪುರಾದಲ್ಲಿ ಬಿ.ಜೆ.ಪಿ ತನ್ನ ಅಧಿಕಾರವನ್ನು ಉಳಿಸಿಕೊಂಡಿದೆ. ಆದರೆ, ಕ್ಷೇತ್ರ ಹಾಗೂ ಮತಗಳ ಸಂಖ್ಯೆಯಲ್ಲಿ ಅದು ಭಾರೀ ಕುಸಿತ ಕಂಡಿದೆ. ಮತಗಳ ವಿವರಗಳನ್ನು ವಿಶ್ಲೇಷಿಸುವಾಗ ಬುಡಕಟ್ಟು ಜನರ ಸಂಘಟನೆ "ತಿಪ್ರಾ ಮೋಥಾ" ವಿರೋಧ ಪಕ್ಷಗಳನ್ನು ಸೇರದೆ ಏಕಾಂಗಿಯಾಗಿ ಸ್ಪರ್ಧೆ ಮಾಡಿದ್ದು ಬಿಜೆಪಿಯ ಯಶಸ್ಸಿನ ಹಾದಿಯನ್ನು ಸುಗಮಗೊಳಿಸಿದೆ ಎಂಬುದು ಸ್ಪಷ್ಟವಾಗಿದೆ. ಬಿಜೆಪಿ ಅಜೇಯ ಶಕ್ತಿಯೇನಲ್ಲ. ಆದರೆ ಅದಕ್ಕೆ ವಿರೋಧ ಪಕ್ಷಗಳ ನಡುವೆ ಒಗ್ಗಟ್ಟು ಅತ್ಯಗತ್ಯ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಒತ್ತಾಯಿಸುತ್ತಲೇ ಬಂದಿದೆ. ಪಕ್ಷದ ಈ ನಿರ್ಧಾರ ಎಷ್ಟು ಸರಿ ಎಂಬುದನ್ನು ತ್ರಿಪುರಾ ಚುನಾವಣಾ ಫಲಿತಾಂಶ ಮತ್ತೊಮ್ಮೆ ಸಾಬೀತು ಮಾಡಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ನಾಶ ಮಾಡುವ ಯೋಜನೆ

2018ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆದ್ದಿತ್ತು. ಆಗ ಒಂದು ವಿಷಯ ಸ್ಪಷ್ಟವಾಗಿತ್ತು. ಕಮ್ಯುನಿಸ್ಟರು ಅಧಿಕಾರಕ್ಕೆ ಬಂದರೆ ತಮಗೆ ಅಪಾಯ ಕಟ್ಟಿಟ್ಟ ಬುತ್ತಿ ಎಂಬುದನ್ನು ಬಿಜೆಪಿ ಮತ್ತು ಆರ್ ಎಸ್ ಎಸ್ ಅರಿತುಕೊಂಡಿವೆ. ಈ ಐದು ವರ್ಷಗಳಲ್ಲಿ ಪಕ್ಷದ ಚಟುವಟಿಕೆಗಳಿಗೆ ಅಡ್ಡಿಪಡಿಸಲು ಮತ್ತು ಪಕ್ಷವನ್ನು ನಾಶಮಾಡಲು ಸಂಘಪರಿವಾರ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಿತು. ಅವರು ಸಿಪಿಎಂ ಮೇಲೆ ಭಾರೀ ದಾಳಿಗಳನ್ನು ನಡೆಸಿದರು. ಇದಕ್ಕೆ ಕೆಲವು ಉದಾಹರಣೆಗಳು ಇಲ್ಲಿವೆ:

ಈ ಐದು ವರ್ಷಗಳ ಅವಧಿಯಲ್ಲಿ 22 ಪಕ್ಷದ ಕಾರ್ಯಕರ್ತರ ಹತ್ಯೆ ಮಾಡಲಾಗಿದೆ, ಪಕ್ಷದ 3254 ಕಾರ್ಯಕರ್ತರ ಮೇಲೆ ಹಲ್ಲೆ ನಡೆದಿದೆ, ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ 866 ಕಚೇರಿಗಳ ಮೇಲೆ ದಾಳಿ ನಡೆಸಲಾಗಿದೆ. ಪಕ್ಷದ ರಾಜ್ಯ ಸಮಿತಿ ಕಚೇರಿಗೆ ಬೆಂಕಿ ಹಚ್ಚಲಾಗಿತ್ತು. ಪಕ್ಷದ 3363 ಕಾರ್ಯಕರ್ತರ ಮನೆಗಳು ಮತ್ತು 659 ಅಂಗಡಿಗಳನ್ನು ನಾಶ ಮಾಡಲಾಗಿದೆ. ಪಕ್ಷದ ಕಾರ್ಯಕರ್ತರ ಕುಟುಂಬಗಳ ಮೀನು ಕೊಳಗಳು/ರಬ್ಬರ್ ತೋಟಗಳಂತಹ ಜೀವನೋಪಾಯಗಳನ್ನು ನಾಶ ಮಾಡಿದ್ದಾರೆ! ಸಂತ್ರಸ್ತ ಜನರನ್ನು ಭೇಟಿಯಾಗಲು ತೆರಳಿದ್ದ ಮಾಜಿ ಸಿಎಂ ಕಾಮ್ರೇಡ್ ಮಾಣಿಕ್ ಸರ್ಕಾರ್ ಅವರ ಮೇಲೆ ಮಾರಣಾಂತಿಕವಾಗಿ ಹಲ್ಲೆ ನಡೆಸಲಾಗಿದೆ.

ಇಷ್ಟೆಲ್ಲಾ ದಾಳಿ ದಬ್ಬಾಳಿಕೆಗಳ ನಡುವೆಯೂ 302 ಅಂತರ ಸಮಿತಿಗಳಲ್ಲಿ, 24 ಜಿಲ್ಲಾ ಸಮಿತಿಗಳಲ್ಲಿ, 124 ಶಾಖೆಗಳು ತಮ್ಮ ಪ್ರದೇಶವನ್ನು ಹೊರತುಪಡಿಸಿ ಇತರ ಪ್ರದೇಶಗಳಲ್ಲಿ ಸಮ್ಮೇಳನಗಳನ್ನು ನಡೆಸುವ ಅಗತ್ಯವನ್ನು ಒಪ್ಪಿಕೊಂಡು ಸಮ್ಮೇಳನ ನಡೆಸಿವೆ. (ಇಂತಹ ದಬ್ಬಾಳಿಕೆಯ ಪರಿಸ್ಥಿತಿಯಲ್ಲೂ ಜಿಲ್ಲಾ ಸಮ್ಮೇಳನಗಳಲ್ಲಿ ಶೇ.100 ರಷ್ಟು ಪ್ರತಿನಿಧಿಗಳು ಭಾಗವಹಿಸಿದ್ದು ಗಮನಾರ್ಹ.)

ಹೀಗೆ ಅನೇಕ ಫ್ಯಾಸಿಸ್ಟ್ ದಾಳಿಗಳನ್ನು ಮಾಡಲಾಯಿತು. ಮಾಧ್ಯಮಗಳು ಕೂಡ ಈ ದಾಳಿಯಿಂದ ಪಾರಾಗಿಲ್ಲ. ಬಿಜೆಪಿ ಆಡಳಿತವನ್ನು ಟೀಕಿಸಿದ್ದಕ್ಕಾಗಿ 42 ಪತ್ರಕರ್ತರ ಮೇಲೆ ನೇರವಾಗಿ ದಾಳಿ ಮಾಡಲಾಯಿತು. ಹಲವಾರು ಮಾಧ್ಯಮಗಳ ಕಚೇರಿಗಳನ್ನು ಧ್ವಂಸಗೊಳಿಸಲಾಯಿತು. ಬಿಜೆಪಿ ಸರ್ಕಾರ ರಚನೆಯಾದ ನಂತರ 6 ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ನಡೆದವು. ಎಲ್ಲದರಲ್ಲೂ ಅಕ್ರಮಗಳಿದ್ದವು ಮಾತ್ರವಲ್ಲ, 50 ಕ್ಕೂ ಹೆಚ್ಚು ಎಡರಂಗದ ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ಸಲ್ಲಿಸಲು ಸಹ ಸಾಧ್ಯವಾಗಲಿಲ್ಲ. ಇತರ ವಿರೋಧ ಪಕ್ಷಗಳಲ್ಲೂ ಇದೇ ಪರಿಸ್ಥಿತಿ! ಹಲವು ಕಡೆಗಳಲ್ಲಿ ಮತಗಟ್ಟೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಮತಗಳು ಬಿಜೆಪಿ ಪಾಲಾಗಿವೆ. ಪುಂಡರು ಮತ ಹಾಕಿದರು.

ವಿಭಜಿಸುವ ತಂತ್ರಗಾರಿಕೆಗಳು

ಬಿಜೆಪಿ ತನ್ನ ಆಡಳಿತವನ್ನು ಉಳಿಸಿಕೊಳ್ಳಲು. ತ್ರಿಪುರಾದಲ್ಲಿ ಜನರ ನಡುವೆ ಎರಡು ವಿಭಾಗಗಳನ್ನು ರಚಿಸಲು ಪ್ರಯತ್ನಿಸಿದರು. ಒಂದು ಕಡೆ ಗುಡ್ಡಗಾಡು ಜನರು ಮತ್ತು ಇತರರ ನಡುವೆ ಸಂಘರ್ಷ ಸೃಷ್ಟಿಯಾಯಿತು. ಮತ್ತೊಂದೆಡೆ, ಹಿಂದೂಗಳನ್ನು ಮುಸ್ಲಿಮರ ವಿರುದ್ಧ ಎತ್ತಿಕಟ್ಟಲು ಪ್ರಯತ್ನಿಸಿದರು. ಬಿಜೆಪಿಯ ಮಿತ್ರ ಪಕ್ಷ ಐಪಿಎಫ್‌ಟಿ ಜನರ ನಡುವೆ ತನ್ನ ಪ್ರಭಾವವನ್ನು ಕಳೆದುಕೊಂಡಿದೆ. ಆದ್ದರಿಂದ ತ್ರಿಪುರಾ ರಾಜಮನೆತನದಿಂದ ರಚಿಸಲ್ಪಟ್ಟ "ತೀಪ್ರಾ ಮೋಥಾ" ಸಂಘಟನೆಯೊಂದಿಗೆ ಸೇರಲು ಪ್ರಯತ್ನಗಳನ್ನು ಮಾಡಲಾಯಿತು. ಸುಮಾರು 35 ಲಕ್ಷ ಜನ ವಾಸಿಸುವ ತ್ರಿಪುರಾವನ್ನು ಇಬ್ಭಾಗ ಮಾಡಲು ಈ ಸಂಘಟನೆ ಪ್ರಯತ್ನಿಸುತ್ತಿದ್ದು, ಗುಡ್ಡಗಾಡು ಜನರಿಗಾಗಿ ಪ್ರತ್ಯೇಕ ರಾಜ್ಯ ಎಂಬ ಘೋಷಣೆ ಕೂಗುತ್ತಿದೆ. ಈ ಮೂಲಕ ಗುಡ್ಡಗಾಡು ಜನರು ಹಾಗೂ ಇತರರ ನಡುವೆ ವೈರುಧ್ಯಗಳನ್ನು ಸೃಷ್ಟಿಸಿ ತಮ್ಮ ಲಾಭಕ್ಕೆ ಬಳಸಿಕೊಳ್ಳಲು ಬಿಜೆಪಿ ಯತ್ನಿಸುತ್ತಿದೆ. ಮತ್ತೊಂದೆಡೆ, ಸಂಘಪರಿವಾರದ ಸಂಘಟನೆಗಳು ಮುಸ್ಲಿಮರ ಮೇಲೆ ದಾಳಿ ಮಾಡುವ ಮೂಲಕ ಮುಸ್ಲಿಮೇತರರ ಬೆಂಬಲವನ್ನು ಬಿಜೆಪಿ ಕಡೆಗೆ ತಿರುಗಿಸಲು ಪ್ರಯತ್ನಿಸಿದವು. ಕೆಲವೆಡೆ ಮಸೀದಿ, ಮುಸ್ಲಿಮರ ಮನೆಗಳ ಮೇಲೆ ದಾಳಿ ನಡೆಸಲಾಗಿದೆ. ತ್ರಿಪುರಾದ ಇತಿಹಾಸದಲ್ಲಿ ಯಾವುದೇ ಧಾರ್ಮಿಕ ಗಲಭೆಗಳು ನಡೆದಿರಲಿಲ್ಲ. ಆದರೆ ಈ ಧಾರ್ಮಿಕ ವಿರೋಧಾಭಾಸಗಳು ಅಲ್ಪ ಲಾಭಕ್ಕಾಗಿ ತೀವ್ರವಾದವು. ಹಲವು ರೀತಿಯಲ್ಲಿ ಬಿ.ಜೆ.ಪಿ ಆಡಳಿತದ ದಬ್ಬಾಳಿಕೆಗಳು ಮತ್ತು ದುರುಪಯೋಗಗಳು ಜನರಲ್ಲಿ ಆಳವಾದ ಅಸಮಾಧಾನವನ್ನು ಸೃಷ್ಟಿಸಿದವು. ಬಿಜೆಪಿಯಲ್ಲೂ ಉಗ್ರ ಗುಂಪುಗಾರಿಕೆ ಹೆಚ್ಚುತ್ತಿದೆ. ಹಾಗಾಗಿಯೇ ಬಿಪ್ಲವ್ ದೀಪ್ ನೇತೃತ್ವದಲ್ಲಿ ಚುನಾವಣೆ ಗೆಲ್ಲುವುದು ಅಸಾಧ್ಯ ಎಂದು ಬಿಜೆಪಿ ಅಂದಾಜಿಸಿತು. ನಾಯಕತ್ವ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ ಮಾಣಿಕ್ ಸಹಾ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿತು.

ಪಕ್ಷಗಳು	ಪಡೆದ ಮತಗಳು	ಶೇಕಡಾವಾರು	ಗೆದ್ದ ಕ್ಷೇತ್ರಗಳು
ಬಿಜೆಪಿ ಮೈತ್ರಿ	10,16,888	40.23	33
ಸಿಪಿಐ(ಎಂ)+ಕಾಂಗ್ರೆಸ್ ಮೈತ್ರಿ	8,93,789	35.36	14
ತೀಪ್ರಾ ಮೋಥಾ	4,98,182	19.70	13

ಇದೇ ಸಂದರ್ಭದಲ್ಲಿ ಸಿಪಿಎಂ ಪಕ್ಷದ ವಿರುದ್ಧ ಮತ್ತೊಂದು ಅಪಪ್ರಚಾರ ನಡೆಸಲಾಯಿತು. ಸಿಪಿಎಂ ಪ್ರಮುಖ ವಿರೋಧ ಪಕ್ಷದ ಸ್ಥಾನಮಾನವನ್ನು ಕಳೆದುಕೊಂಡಿದೆ ಮತ್ತು ತೃಣಮೂಲ ಕಾಂಗ್ರೆಸ್ ಆ ಸ್ಥಾನವನ್ನು ಪಡೆದುಕೊಂಡಿದೆ ಎಂದು ಬಿಜೆಪಿ ಮತ್ತು ಕೆಲವು ಮಾಧ್ಯಮಗಳು ಬಿಂಬಿಸಲು ಪ್ರಯತ್ನಿಸಿದವು. ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸಿಪಿಎಂ ಶೇ. 19.47 ಮತಗಳನ್ನು ಪಡೆದಿದ್ದು, ತೃಣಮೂಲ ಶೇ. 16.77 ಮತಗಳನ್ನು ಪಡೆದಿದೆ. ಇದಾದ ಬಳಿಕ ಕಮ್ಯುನಿಸ್ಟ್ ಪಕ್ಷದ ವಿರುದ್ಧ ಹಿಂಸಾಚಾರ ನಡೆದಾಗ ನಾಮಪತ್ರ ಸಲ್ಲಿಸಲು ತೃಣಮೂಲ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಅಡ್ಡಿಯಾಗಲಿಲ್ಲ ಎಂಬ ಅಂಶವನ್ನು ಉದ್ದೇಶಪೂರ್ವಕವಾಗಿ ಮರೆಮಾಚಲಾಗಿದೆ. ಕಮ್ಯುನಿಸ್ಟ್ ಪಕ್ಷವು ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿಲ್ಲ ಎಂಬ ಭಾವನೆಯನ್ನು ಮೂಡಿಸುವುದು ಈ ಅಭಿಯಾನದ ಏಕೈಕ ಉದ್ದೇಶವಾಗಿದೆ! ಇಷ್ಟೆಲ್ಲ ಅಡೆತಡೆಗಳ ನಡುವೆಯೂ ಸಿಪಿಎಂ ಪಕ್ಷವು ನಿರಂತರವಾಗಿ ಜನರ ಸಮಸ್ಯೆಗಳ ಕುರಿತು ಪ್ರತಿಭಟನೆಗಳನ್ನು ನಡೆಸಿತು. ಸದಾ ಜನರ ಪರ ನಿಂತರು. ಜನರು ಮತ್ತು ತಮ್ಮ ನಡುವಿನ ಸಂಬಂಧವನ್ನು ಬಲಪಡಿಸಲು ಪಕ್ಷದ ಕಾರ್ಯಕರ್ತರು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡಿದರು. ಈ ಅವಧಿಯಲ್ಲಿ ಬಿಜೆಪಿ ವಿರುದ್ಧ ಯಾವುದೇ ವಿರೋಧ ಪಕ್ಷಗಳು ಮುಂದೆ ಬರಲು ಸಾಧ್ಯವಾಗಲಿಲ್ಲ ಎಂಬುದು ಗಮನಿಸಬೇಕಾದ ಸಂಗತಿ.

ಏಕತೆಯನ್ನು ತಿರಸ್ಕರಿಸಿದ ತೀಪ್ರಾ ಮೋಥಾ

ಈ ಹಿನ್ನೆಲೆಯಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು ಪ್ರಬಲ ಒಗ್ಗಟ್ಟಿನ ಅಗತ್ಯವಿದೆ ಎಂದು ಸಿಪಿಎಂ ಅಂದಾಜು ಮಾಡಿದೆ. ಅದರ ಆಧಾರದ ಮೇಲೆ ಕಾಂಗ್ರೆಸ್ ಜೊತೆ ಕ್ಷೇತ್ರ ಮೈತ್ರಿ ಮಾಡಿಕೊಳ್ಳಲಾಗಿದೆ. ತೀಪ್ರಾ ಮೋಥಾ ಕೂಡ ಈ ಮೈತ್ರಿಯನ್ನು ಸೇರಲು ಆಹ್ವಾನಿಸಲಾಯಿತು. ಆದರೆ ಅದು ಮೈತ್ರಿಯ ಕರೆಯನ್ನು ತಿರಸ್ಕರಿಸಿತು. ಹೀಗಾಗಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿತು. ಚುನಾವಣಾ ಫಲಿತಾಂಶ ಹೀಗಿತ್ತು: 2021ರ ಅಂತ್ಯದಲ್ಲಿ ನಡೆದ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಬಾರಿಸಿತ್ತು. ಅದು ಶೇ. 60ರಷ್ಟು ಮತಗಳನ್ನು ಪಡೆದಿತ್ತು. ಆದರೆ ವಿಧಾನಸಭೆ ಚುನಾವಣೆಯಲ್ಲಿ ಅದು ಶೇ.40ಕ್ಕೆ ಕುಸಿದಿದೆ. ಸ್ಥಳೀಯಾಡಳಿತದ ಚುನಾವಣೆಯಲ್ಲಿ ಅಕ್ರಮ, ಹಿಂಸಾಚಾರ ಎಗ್ಗಿಲ್ಲದೆ ನಡೆದಿದೆ ಎಂಬ ಆರೋಪ ಇದರಿಂದ ನಿಜವಾಗುತ್ತಿದೆ. ತೀಪ್ರಾ ಮೋಥಾ ಎಡಪಕ್ಷಗಳೊಂದಿಗೆ ನಿಂತಿದ್ದರೆ, ಬಿ.ಜೆ.ಪಿ ಆಡಳಿತವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ.

ತೀಪ್ರಾ ಮೋಥಾ ಅವರ ಮೂಲಭೂತ ಬೇಡಿಕೆಗಳು ಕಠಿಣವಾದವು. ತ್ರಿಪುರಾದ ಪರಂಬರ ಯಮ್ ಬುಡಕಟ್ಟು ಮತ್ತು ಬುಡಕಟ್ಟು ಅಲ್ಲದವರ ಏಕತೆ! ತ್ರಿಪುರಾದ ಜನಸಂಖ್ಯೆಯ ಮೂರನೇ ಒಂದು ಭಾಗ ಬುಡಕಟ್ಟು ಜನರಿದ್ದಾರೆ! ಆದರೆ ತೀಪ್ರಾ ಮೋಥಾ ಬುಡಕಟ್ಟು ಜನರ ಪ್ರತ್ಯೇಕ ರಾಜ್ಯಕ್ಕೆ ಆಗ್ರಹಿಸುತ್ತಿದ್ದಾರೆ. ಬಾಂಗ್ಲಾದೇಶದ ಕೆಲವು ಭಾಗಗಳನ್ನು ಆ ರಾಜ್ಯದಲ್ಲಿ ಸ್ವಾಧೀನಪಡಿಸಿಕೊಳ್ಳುವಂತೆಯೂ ಅದು ಕೇಳುತ್ತದೆ. ಬೇರೆ ದೇಶಕ್ಕೆ ಸೇರಿರುವ ಭಾಗಗಳನ್ನು ಹೇಗೆ ಪಡೆಯುವುದು? ಇಂತಹ ಪ್ರತ್ಯೇಕ ರಾಜ್ಯ ರಚನೆಯಾದರೆ ಬುಡಕಟ್ಟು ಜನಾಂಗದ ಯುವಕ–ಯುವತಿಯರೆಲ್ಲರಿಗೂ ತಕ್ಷಣವೇ ಸರ್ಕಾರಿ ನೌಕರಿ ದೊರೆಯುತ್ತದೆ ಮತ್ತು ರಾಜ್ಯವು ಭೂಲೋಕದ ಸ್ವರ್ಗವಾಗುತ್ತದೆ ಎಂದು ಅವರು ಸುಳ್ಳುಪ್ರಚಾರ ಮಾಡಿದರು. ಇದು ಎಷ್ಟು ಪ್ರಾಯೋಗಿಕ ಎಂಬುದು ದೊಡ್ಡ ಪ್ರಶ್ನಾರ್ಥಕ ಚಿಹ್ನೆ! ಆದಾಗ್ಯೂ, ಇದು ಬುಡಕಟ್ಟು ಜನರಲ್ಲಿ ಆಳವಾದ ಪ್ರಭಾವ ಬೀರಿದೆ ಎಂಬುದನ್ನು ಈ ಚುನಾವಣಾ ಪಲಿತಾಂಶಗಳು ತೋರಿಸುತ್ತವೆ. ಬಿಜೆಪಿ ಅಜೇಯ ಶಕ್ತಿಯೇನಲ್ಲ ಎಂಬುದನ್ನು ತ್ರಿಪುರಾ ಚುನಾವಣೆಯ ಫಲಿತಾಂಶ ಸ್ಪಷ್ಟವಾಗಿ ತೋರಿಸುತ್ತದೆ. ಆದರೆ, ಇದಕ್ಕೆ ವಿರೋಧ ಪಕ್ಷಗಳ ಪ್ರಬಲ ಒಗ್ಗಟ್ಟು ಬೇಕು. 2024 ರ ಚುನಾವಣೆಗಳು ಸಮೀಪಿಸುತ್ತಿರುವಾಗ ವಿರೋಧ ಪಕ್ಷಗಳ ಮುಂದೆ ಒಗ್ಗಟ್ಟಿನ ಈ ಕರ್ತವ್ಯವಿದೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಚುನಾವಣಾ ಆಯುಕ್ತರುಗಳ ನೇಮಕದ ಬಗ್ಗೆ ಸುಪ್ರೀಂ ಕೋರ್ಟ್‌ನ ಸ್ವಾಗತಾರ್ಹ ತೀರ್ಪು

ಭಾರತದ ರಾಷ್ಟ್ರಪತಿಗಳು ಚುನಾವಣಾ ಆಯುಕ್ತರನ್ನು ಪ್ರಧಾನಮಂತ್ರಿ, ಲೋಕಸಭೆಯ ವಿರೋಧ ಪಕ್ಷದ ನಾಯಕರು (ಅಥವಾ ಅತಿ ದೊಡ್ಡ ವಿರೋಧ ಪಕ್ಷದ ನಾಯಕರು) ಮತ್ತು ಭಾರತದ ಮುಖ್ಯ ನ್ಯಾಯಾಧೀಶರು ಇವರುಗಳನ್ನು ಒಳಗೊಂಡ ಸಮಿತಿಯ ಸಲಹೆಯ ಮೇರೆಗೆ ನೇಮಿಸಬೇಕು ಎಂದು ಸುಪ್ರೀಂ ಕೋರ್ಟ್ ಒಂದು ಬಹು ಪರಿಣಾಮ ಬೀರಲಿರುವ ತೀರ್ಪಿನಲ್ಲಿ ಆದೇಶಿಸಿದೆ. ಈ ಸಂಬಂಧ ಸಂಸತ್ತು ಕಾನೂನು ರೂಪಿಸುವವರೆಗೆ ಈ ಪದ್ಧತಿ ಜಾರಿಯಲ್ಲಿರುತ್ತದೆ ಎಂದು ಅದು ಹೇಳಿದೆ.

ಸಂವಿಧಾನದ 324 ನೇ ವಿಧಿಯ ಅಡಿಯಲ್ಲಿ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಯನ್ನು ನಡೆಸುವ ಅಧಿಕಾರವನ್ನು ಚುನಾವಣಾ ಆಯೋಗ ಮಾತ್ರವೇ ಹೊಂದಿದೆ. ಇದು ಅದರ ಸ್ವತಂತ್ರ ಅಧಿಕಾರವನ್ನು ಮತ್ತು ಕಾರ್ಯನಿರ್ವಹಣೆಯನ್ನು ಬಲಪಡಿಸುವ ದಿಕ್ಕಿನಲ್ಲಿ ಒಂದು ಮುಂದಣ ಹೆಜ್ಜೆಯಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಚುನಾವಣಾ ಆಯೋಗವು ಕಾರ್ಯಾಂಗದ ಎಲ್ಲಾ ಸ್ವರೂಪಗಳ ಅಧೀನತೆಯಿಂದ ದೂರವಿರಬೇಕು ಎಂದು ಕೂಡ ಸಂವಿಧಾನ ಪೀಠ ಹೇಳಿದೆ.

ಚುನಾವಣಾ ಆಯೋಗದ ನೇಮಕಾತಿಯು ಸಿಬಿಐ ನಿರ್ದೇಶಕ, ಲೋಕಪಾಲ್ ಇತ್ಯಾದಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಸಂಸತ್ತು ರೂಪಿಸಿರುವ ಶಾಸನಗಳಂತೆಯೇ ಪಾರದರ್ಶಕ ಮತ್ತು ಪ್ರಜಾಸತ್ತಾತ್ಮಕ ರೀತಿಯಲ್ಲಿ ಇರಬೇಕು ಎಂದು ಸಿಪಿಐ(ಎಂ) ಪ್ರತಿಪಾದಿಸುತ್ತ ಬಂದಿದೆ ಎಂಬುದನ್ನು ಈ ಸಂದರ್ಭದಲ್ಲಿ ಪೊಲಿಟ್‌ಬ್ಯುರೊ ನೆನಪಿಸಿದೆ.

ದಿಲ್ಲಿ ಉಪಮುಖ್ಯಮಂತ್ರಿ ಸಿಸೋಡಿಯ ಬಂಧನ: ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ಅಸ್ತ್ರವಾಗಿಸಿಕೊಳ್ಳುವ ಯೋಜನೆಯ ಭಾಗ

ಪ್ರಜಾಸತ್ತಾತ್ಮಕ ವಿಧಾನಗಳಿಂದ ಚುನಾವಣೆಗಳನ್ನು ಗೆಲ್ಲಲು ವಿಫಲವಾದ ಮೋದಿ ಆಡಳಿತವು ಪ್ರತಿಪಕ್ಷಗಳನ್ನು ಗುರಿಯಾಗಿಸಿಕೊಂಡು ಭಾರತದಲ್ಲಿ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸಲು ಕೇಂದ್ರೀಯ ಸಂಸ್ಥೆಗಳನ್ನು ಬಳಸುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ, ದೆಹಲಿಯ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರನ್ನು ಸಿಬಿಐ ಬಂಧಿಸಿರುವುದನ್ನು ಖಂಡಿಸುತ್ತ ಹೇಳಿದೆ. ಅವರ ಬಂಧನ ವಿರೋಧ ಪಕ್ಷದ ನಾಯಕರನ್ನು ಗುರಿಯಾಗಿಸಲು ಕೇಂದ್ರ ತನಿಖಾ ಸಂಸ್ಥೆಗಳನ್ನು ಅಸ್ತ್ರವಾಗಿಸಿಕೊಳ್ಳುವ ಮೋದಿ ಸರ್ಕಾರದ ಯೋಜನೆಯ ಭಾಗವಾಗಿದೆ. ಪ್ರತಿಪಕ್ಷಗಳು ಸರ್ಕಾರ ನಡೆಸುವ ಪ್ರತಿಯೊಂದು ರಾಜ್ಯದಲ್ಲೂ ಆ ಪಕ್ಷಗಳ ನಾಯಕರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗುತ್ತದೆ, ವಿರೋಧ ಪಕ್ಷಗಳು ನಡೆಸುತ್ತಿರುವ ಸರ್ಕಾರಗಳನ್ನು ಅಸ್ಥಿರಗೊಳಿಸಲು ಬಂಧನಗಳನ್ನು ಮಾಡಲಾಗುತ್ತಿದೆ ಎಂದು ಅದು ಹೇಳಿದೆ.

ಪ್ರತಿಪಕ್ಷ ನಾಯಕರ ಮೇಲಿನ ದಾಳಿಯು ಪ್ರಧಾನಿ, ಆಡಳಿತ ಪಕ್ಷ ಮತ್ತು ಅದಾನಿಯಂತಹ ಅದರ ಒಲವು ಪಡೆದಿರುವ ದೊಡ್ಡ ಉದ್ಯಮಿಗಳ ನಡುವಿನ ಸಂಬಂಧದ ಸ್ವರೂಪದ ಬಗ್ಗೆ ಹೆಚ್ಚುತ್ತಿರುವ ಪ್ರಶ್ನೆಗಳಿಂದ ಗಮನವನ್ನು ಬೇರೆಡೆಗೆ ತಿರುಗಿಸಲು ಸಹ ಆಗಿದೆ ಎಂದೂ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಅಡುಗೆ ಅನಿಲದ ಬೆಲೆ ಏರುತ್ತಲೇ ಇದೆಯೇಕೆ?........ ಪುಟ 8 ರಿಂದ

ಯೋಜನೆಯಲ್ಲಿ ಬ್ಯಾಂಕ್ ಖಾತೆ ತೆರೆದರೆ ಒಂದು ಲಕ್ಷದವರೆಗೆ ವಿಮಾ ಸೌಲಭ್ಯ, ಡೆಬಿಟ್ ಕಾರ್ಡ್, ಐದು ಸಾವಿರ ರೂ.ಗಳ ವರೆಗೆ ಓವರ್ ಡ್ರಾಫ್ಟ್ ಸೌಲಭ್ಯ ಎಂಬ ಘೋಷಣೆಯನ್ನು ಸರ್ಕಾರ ಮಾಡಿದರೆ, ಬಿಜೆಪಿ ಅನುಯಾಯಿಗಳು "ಮೋದಿ ಕಪ್ಪು ಹಣ ಹೊರತೆಗೆದು ಜನ್ ಧನ್ ಖಾತೆಗೆ ಲಕ್ಷ ಲಕ್ಷ ಹಣ ಹಾಕುತ್ತಾರೆ, ಮನೆ ಇಲ್ಲದವರಿಗೆ ಮನೆ ಕಟ್ಟಿಸಿಕೊಡುತ್ತಾರೆ?" ಎಂದೆಲ್ಲಾ ಪ್ರಚಾರ ಮಾಡಿ ಜನರನ್ನು ನಂಬಿಸಿದರು. ಕೋಟ್ಯಾಂತರ ಬಡವರು ಬ್ಯಾಂಕುಗಳ ಮುಂದೆ ಸಾಲುಗಟ್ಟಿ ನಿಂತು ಜನ್ ಧನ್ ಖಾತೆ ತೆರೆದರು.

'ನೇರ ನಗದು ಯೋಜನೆ'

ಮುಂದಿನ ಹಂತವಾಗಿ 'ಬ್ಯಾಂಕ್ ಖಾತೆಗೆ ಅನಿಲ ಸಂಪರ್ಕದ ಸಂಖ್ಯೆ ಜೋಡಣೆ' ಮಾಡುವಂತೆ ಕರೆ ನೀಡಿದರು. ಆ ನಂತರ ಗ್ರಾಹಕರ ಖಾತೆಗೆ ಹಣ ವರ್ಗಾಯಿಸುವ 'ನೇರ ನಗದು ಯೋಜನೆ'(DBT) ಜಾರಿಗೆ ತಂದು, ಗ್ರಾಹಕರು ಮಾರುಕಟ್ಟೆ ದರದಲ್ಲಿ ಸಿಲಿಂಡರ್ ಖರೀದಿಸಿ, ಸಬ್ಸಿಡಿ ಹಣವನ್ನು ನಿಮ್ಮ ಬ್ಯಾಂಕ್ ಖಾತೆಗೆ ನೇರವಾಗಿ ಹಾಕಲಾಗುತ್ತದೆ ಎಂದರು. ಇದು ಸಬ್ಸಿಡಿ ಸೋರಿಕೆಯನ್ನು ತಡೆಯುವ ಮೂಲಕ ನಿಜವಾದ ಫಲಾನುಭವಿಗಳಿಗೆ ತಲುಪಿಸುವ ಉದ್ದೇಶವಾಗಿದೆ ಎಂದರು. ಈ ಎಲ್ಲಾ ಪ್ರಕ್ರಿಯೆಯಲ್ಲಿ ಸಬ್ಸಿಡಿ ಅನಿಲದ ಕೋಟ್ಯಾಂತರ ಸಂಪರ್ಕ ಕಡಿತಗೊಂಡು ಅಷ್ಟರ ಮಟ್ಟಿಗೆ ಸರ್ಕಾರಕ್ಕೆ ಸಬ್ಸಿಡಿ ಹೊರೆ ಕಡಿಮೆಯಾಯಿತು.

'ಗಿವ್ ಇಟ್ ಅಪ್'

ಇದರ ಮುಂದುವರಿದ ಭಾಗವಾಗಿ ಪ್ರಧಾನಿ ಮೋದಿಯವರು "ಉಳ್ಳವರಿಗೇಕೆ ಸಬ್ಸಿಡಿ? ನೋಡಿ, ಹಳ್ಳಿಗಳಲ್ಲಿ ಬಡ ಮಹಿಳೆಯರು ಸೌದೆ ಒಲೆಯಲ್ಲಿ ಅಡುಗೆ ಮಾಡುತ್ತ ಹೊಗೆಯಲ್ಲಿ ಕಣ್ಣೀರು ಸುರಿಸುತ್ತಿದ್ದಾರೆ. ಅವರಿಗಾಗಿ ಸಬ್ಸಿಡಿ ಅನಿಲ ಬಿಟ್ಟುಕೊಡಿ" ಎನ್ನುತ್ತ 'ಗಿವ್ ಇಟ್ ಅಪ್' ಹೆಸರಿನಲ್ಲಿ ಸಬ್ಸಿಡಿ ಸಿಲಂಡರ್ ಹಿಂತಿರುಗಿಸುವಂತೆ ಮನವಿ ಮಾಡಿದರು. ಈ ಮನವಿಗೆ ಕೋಟಿಗೂ ಹೆಚ್ಚು ಕುಟುಂಬಗಳು ಸ್ಪಂಧಿಸಿ ತಮ್ಮ ಸಬ್ಸಿಡಿ ಸಿಲಿಂಡರ್ ಹಿಂತಿರುಗಿಸಿ, ಮಾರುಕಟ್ಟೆ ದರದಲ್ಲಿ ಅನಿಲ ಖರೀದಿಸಲು ಮುಂದಾದರು. ಇಂತಹ ಒಂದಷ್ಟು ಕುಟುಂಬಗಳಿಗೆ ಪ್ರಾರಂಭದಲ್ಲಿ ಮೋದಿಯವರೇ ಕೊಟ್ಟಿದ್ದಾರೆ ಎನ್ನಲಾದ ಧನ್ಯವಾದಗಳನ್ನು ಅರ್ಪಿಸುವ ಪತ್ರವೊಂದನ್ನು ಅನಿಲ ಸರಭರಾಜು ಕಂಪನಿಯವರು ಕೊಟ್ಟರು. ಮೋದಿಯವರ ಗಿವ್ ಇಟ್ ಅಪ್ ಕರೆಗೆ ಓಗೊಡದ ಸಿರಿವಂತ ನೌಕರರಿಗೆ ಅವರ ಸಂಸ್ಥೆಗಳ ಮಾಲೀಕರಿಂದ ಹೇಳಿಕೆ ಕೊಡಿಸುವ ಮೂಲಕ ಒತ್ತಡ ತಂದರು. ಉದಾಹರಣೆಗೆ, ಮೋದಿ ಕರೆಗೆ ಓಗೊಟ್ಟು ತಮ್ಮ ಸಬ್ಸಿಡಿಯನ್ನು ಬಿಟ್ಟುಕೊಡಬೇಕೆಂದು ಇನ್ಫೋಸಿಸ್ ಸಂಸ್ಥೆಯ ನಾರಾಯಣ ಮೂರ್ತಿಯವರೂ ತಮ್ಮ ಸಂಸ್ಥೆಯ ನೌಕರರಿಗೆ ಕರೆಕೊಟ್ಟರು.

ಉಜ್ವಲ ಯೋಜನೆ

ಪ್ರಧಾನಿ ಕರೆಗೆ ಓಗೊಟ್ಟು 'ಗಿವ್ ಇಟ್ ಅಪ್' ನಿಂದ ಸಬ್ಸಿಡಿ ಕಳೆದುಕೊಂಡ ಕುಟುಂಬಗಳನ್ನು ನಂಬಿಸಲು ಬಿಪಿಎಲ್ ಕುಟುಂಬದರಿಗೆ ಉಚಿತ ಅನಿಲ ಸಂಪರ್ಕ ನೀಡುವ 'ಪ್ರಧಾನ ಮಂತ್ರಿ ಉಜ್ವಲ ಯೋಜನೆ' ಯನ್ನು ರೂಪಿಸಿ ಜಾರಿಗೆ ತಂದರು. ಈ ಯೋಜನೆ ಮೂಲಕ 1,600 ರೂ ವೆಚ್ಚದ ಉಚಿತ ಸಿಲಿಂಡರ್ ಮತ್ತು ರೆಗ್ಯೂಲೇಟರ್ ಕೊಟ್ಟರು. ಕೆಲವು ರಾಜ್ಯ ಸರ್ಕಾರಗಳು ಉಚಿತ ಸ್ಟೌವ್ ಕೊಟ್ಟವು. (2022ರ ವರೆಗೆ 9 ಕೋಟಿ ಕುಟುಂಬಗಳು ಈ ಯೋಜನೆಯ ಲಾಭ ಪಡೆದಿದ್ದಾರೆ ಎಂದು ಸರ್ಕಾರದ ಅಂಕಿ ಅಂಶಗಳು ಹೇಳುತ್ತವೆ.)

10 ಲಕ್ಷ ಆದಾಯವಿರುವ ಕುಟುಂಬಗಳಿಗೆ ಸಬ್ಸಿಡಿ ಸ್ಥಗಿತ

ಇಷ್ಟಕ್ಕೇ ಇದು ನಿಲ್ಲಲಿಲ್ಲ. ಇದರ ಮುಂದುವರಿದ ಭಾಗವಾಗಿ ವಾರ್ಷಿಕ 10 ಲಕ್ಷ ಆದಾಯವಿರುವ ಕುಟುಂಬಕ್ಕೆ ಅಡುಗೆ ಅನಿಲಕ್ಕೆ ನೀಡುವ ಸಬ್ಸಿಡಿ ಕೊಡದಿರಲು ಕೇಂದ್ರ ಸರ್ಕಾರ ನಿರ್ಧರಿಸಿತು. ಸರ್ಕಾರಿ ನೌಕರರಿಗೆ ಸಬ್ಸಿಡಿ ಅನಿಲ ಪೂರೈಕೆ ನಿಲ್ಲಿಸಲಾಯ್ತು. ನಂತರ, ಅಡುಗೆ ಅನಿಲದ ದರವನ್ನು ನಿದಾನವಾಗಿ ಏರಿಕೆ ಮಾಡುತ್ತ, ಮತ್ತೊಂದೆಡೆ ಸಬ್ಸಿಡಿ ಹಣವನ್ನು ಕಡಿತ ಮಾಡುತ್ತಾ ಸಾಗಿತು. 200 ರಿಂದ 300 ರೂ. ವರೆಗೂ ಬರುತ್ತಿದ್ದ ಸಬ್ಸಿಡಿ ಕೆಲವೊಮ್ಮೆ 40 ರೂ. ಗಳಿಗೆ ಇಳಿಯಿತು. ಬಹಳಷ್ಟು ಫಲಾನುಭವಿಗಳಿಗೆ ಈ ಅಲ್ಪ ಪ್ರಮಾಣದ ಸಬ್ಸಿಡಿಯೂ ಬರುತ್ತಿರಲಿಲ್ಲ.

ಲಾಕ್ಡೌನ್ ಸಂದರ್ಭದಲ್ಲಿ ಸಂಪೂರ್ಣ ಸಬ್ಸಿಡಿ ಸ್ಥಗಿತ

ಕೊರೋನಾ ಸಾಂಕ್ರಾಮಿಕ ರೋಗ ಮತ್ತು ಲಾಕ್ ಡೌನ್ ನ ಸಂಕಷ್ಟದ ಸಮಯವನ್ನು ಸರ್ಕಾರ ತನ್ನ ಮುಕ್ತ ಆರ್ಥಿಕ ನೀತಿಗಳ ಜಾರಿ ಮಾಡಲು ದುರುಪಯೋಗ ಮಾಡಿಕೊಂಡಿತು. ಇಡೀ ದೇಶದ ಜನತೆ ತಮ್ಮ ತಮ್ಮ ಮನೆಗಳಿಂದ ಹೊರಬರಲಾಗದ, ಹೊರ ಬಂದು ಪ್ರತಿಭಟನೆ ವ್ಯಕ್ತಪಡಿಲಾಗದ ಲಾಕ್ ಡೌನ್ ಸಮಯದಲ್ಲೇ ಅಡುಗೆ ಅನಿಲಕ್ಕೆ ನೀಡುತ್ತಿದ್ದ ಅಲ್ಪ ಸ್ವಲ್ಪ ಸಬ್ಸಿಡಿಯನ್ನು ಸಂಪೂರ್ಣವಾಗಿ ಹಿಂತೆಗೆದುಕೊಂಡಿತು.

ಅನಿಲ ಸಂಸ್ಥೆಗಳೇ ದರ ನಿಗದಿ ಮಾಡುತ್ತವೆ. ಇದರಲ್ಲಿ ಸರ್ಕಾರದ ಪಾತ್ರ ಏನೂ ಇಲ್ಲ ಎಂದು ಮೋದಿ ಸರ್ಕಾರ ಬೆಲೆ ನಿಯಂತ್ರಣ ಮಾಡುವ ತನ್ನ ಜವಾಬ್ಧಾರಿಯಿಂದ ನುಣುಚಿಕೊಳ್ಳುತ್ತದೆ. ಆದರೂ ಯಾವುದಾದರೂ ಚುನಾವಣೆ ಸಮೀಪಿಸಿದಾಗ ಪೆಟ್ರೋಲಿಯಂ ಪದಾರ್ಥಗಳ ದರ ಹೆಚ್ಚಳ ಮಾಡುವುದನ್ನು ತಡೆ ಹಿಡಿಯಲಾಗುತ್ತದೆ. ಇತ್ತೀಚೆಗೆ ಅಡುಗೆ ಅನಿಲದ ಬೆಲೆ ಏರಿಕೆಯೂ ಮೂರು ಈಶಾನ್ಯ ರಾಜ್ಯಗಳ ವಿಧಾನಸಭಾ ಚುನಾವಣೆಯ ಮತದಾನ ಪ್ರಕ್ರಿಯೆ ಮುಗಿದ ಒಂದೆರಡು ದಿನಗಳಲ್ಲೇ ಘೋಷಣೆಯಾಯಿತು. ಇದರ ಅರ್ಥವೆಂದರೆ, ಬೆಲೆ ನಿಯಂತ್ರಣ ಆಳುವವರ ಕೈಯಲ್ಲೇ ಇದೆ ಅಥವಾ ಆಳುವವರ ಸೂಚನೆಯಂತೆ ತೈಲ ಕಂಪನಿಗಳು ನಡೆದುಕೊಳ್ಳುತ್ತವೆ.

ಕಚ್ಚಾ ತೈಲ ಬೆಲೆ ಕಡಿಮೆಯಾದರು ಬೆಲೆ ಇಳಿಸಲಿಲ್ಲ

ತೈಲ ಸಂಸ್ಥೆಗಳು ಅಂತರಾಷ್ಟ್ರೀಯ ಮಟ್ಟದ ತೈಲ ಬೆಲೆ ಏರಿಕೆಗೆ ಅನುಗುಣವಾಗಿ ಪೆಟ್ರೋಲಿಯಂ ಪದಾರ್ಥಗಳ ದರ ನಿಗದಿ ಮಾಡಲಾಗುತ್ತದೆ ಎಂದು ಹೇಳುತ್ತಾರಾದರೂ, ಇದರ ಪರಿಸ್ಥಿತಿಯೇ ಬೇರೆಯಾಗಿದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲ ಬೆಲೆ ಇಳಿಕೆಯಾದಾಗ ಅದಕ್ಕೆ ಅನುಗುಣವಾಗಿ ಭಾರತದಲ್ಲಿ ಬೆಲೆ ಇಳಿಕೆ ಮಾಡುವುದಿಲ್ಲ. 2014ರ ಪ್ರಾರಂಭದಲ್ಲಿ 120 ಅಮೆರಿಕನ್ ಡಾಲರ್ ಇದ್ದ ಬ್ಯಾರಲ್ ಕಚ್ಚಾ ತೈಲದ ಬೆಲೆ ಒಮ್ಮೆ 35 ಡಾಲರ್ ವರೆಗೂ ಕುಸಿದಿತ್ತು. ದರ ಇಳಿಸಿ ಇದರ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಲಿಲ್ಲ. ಬದಲಿಗೆ ಕೇಂದ್ರ ಸರ್ಕಾರ ಅಬಕಾರಿ ಸುಂಕ ಹೆಚ್ಚಳ ಮಾಡುವ ಮೂಲಕ ಇದರ ಲಾಭವನ್ನು ತಾನೇ ಕಬಳಿಸತೊಡಗಿತು. ಸರ್ಕಾರದ ಮುಂದಿನ ಗುರಿ ಸಾರ್ವಜನಿಕ ಒಡೆತನದಲ್ಲಿ ಇರುವ ತೈಲ ಕಂಪನಿಗಳನ್ನು ಖಾಸಗಿ ಬಂಡವಾಳಗಾರರಿಗೆ ಮಾರಾಟ ಮಾಡುವುದು.


ಜನತೆ ಬೆಲೆ ಹೆಚ್ಚಳದಿಂದ ತಪ್ಪಿಸಿಕೊಳ್ಳಲು ಇರುವ ದಾರಿಯೆಂದರೆ, ಅದು ಒಕ್ಕೂಟ ಸರ್ಕಾರದ ಮುಕ್ತ ಆರ್ಥಿಕ ನೀತಿಗಳ ವಿರುದ್ಧ ಧ್ವನಿ ಎತ್ತಿ ಹೋರಾಡುವುದು. ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ನೀತಿಗಳ ವಿರುದ್ದ ನಡೆಯುವ ಚಳುವಳಿಗಳ ಜೊತೆ ಕೈಜೋಡಿಸುವುದು. ಇಂತಹ ಜನವಿರೋಧಿ, ರಾಷ್ಟ್ರವಿರೋಧಿ ನೀತಿಗಳನ್ನು ವಿರೋಧಿಸುವ ರಾಜಕೀಯ ಪಕ್ಷಗಳಿಗೆ ಮಾತ್ರ ಮತ ಹಾಕುತ್ತೇವೆ ಎಂದು ಪಣ ತೊಡುವುದು.

ಮುಖೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ನ KG-D6 ಫೀಲ್ಡ್ (ಕೃಷ್ಣ–ಗೋದಾವರಿ ಬೇಸಿನ್) ನಲ್ಲಿ ಅನಿಲ ಹೊರತೆಗೆಯಲು ಸರ್ಕಾರ ಅನುಮತಿ ಕೊಟ್ಟಿದೆ. ಅದು ಹೊರತೆಗೆಯುವ ಅನಿಲವನ್ನು ಸಾರ್ವಜನಿಕ ಸಂಸ್ಥೆಯಾದ ಒ.ಎನ್.ಜಿ.ಸಿ. ಖರೀದಿ ಮಾಡುತ್ತದೆ. ಹೀಗೆ ಖರೀದಿಸುವ ಅನಿಲದ ದರವನ್ನು, ಒಂದು ಮಿಲಿಯನ್ ಬ್ರಿಟೀಷ್ ಥರ್ಮಲ್ ಯುನಿಟ್ ಗೆ 4.2 ಅಮೇರಿಕನ್ ಡಾಲರ್ ಲೆಕ್ಕದಲ್ಲಿ ಅಂದು ಒ.ಎನ್.ಜಿ.ಸಿ. ಖರೀದಿಸುತ್ತಿತ್ತು.

ಮುಖೇಸ್ ಅಂಬಾನಿ ಸಂಸ್ಥೆ ಸರ್ಕಾರದ ಜೊತೆ ಮಾಡಿಕೊಂಡ ಒಪ್ಪಂದಂತೆ ಅನಿಲ ಉತ್ಪಾದನೆ ಮಾಡುವ ಬದಲು ಉತ್ಪಾದನೆಯನ್ನು ಕಡಿತ ಗೊಳಿಸಿತು. ಈ ಮೂಲಕ ಸರ್ಕಾರದ ಜೊತೆ ಮಾಡಿಕೊಂಡ ಒಪ್ಪಂದವನ್ನು ಸಂಸ್ಥೆ ಉಲ್ಲಂಘಿಸಿದೆ ಎಂದು ಸಿಎಜಿ 2011 ರ ತನ್ನ ವರದಿಯಲ್ಲಿ ಹೇಳಿತ್ತು. ಹೀಗಾಗಿ ಅಂದಿನ ಪೆಟ್ರೋಲಿಯಂ ಮಂತ್ರಿ ಜೈಪಾಲ್ ರೆಡ್ಡಿಯವರು, ಮುಖೇಶ್ ಅಂಬಾನಿ ಕಂಪನಿಯಿಂದ 7000 ಕೋಟಿ ದಂಡ ವಸೂಲಿಗೆ ಆದೇಶಿಸಿದ್ದರು. ಇದೇ ಸಮಯದಲ್ಲಿ ಅನಿಲ ಬೆಲೆಯನ್ನು ಒಂದು ಮಿಲಿಯನ್ ಬ್ರಿಟೀಷ್ ಥರ್ಮಲ್ ಯುನಿಟ್ ಗೆ 4.2 ರಿಂದ 8.4 ಅಮೆರಿಕನ್ ಡಾಲರಿಗೆ ಏರಿಕೆ ಮಾಡಬೇಕೆಂದು ಮನಮೋಹನ್ ಸಿಂಗ್ ನೇತೃತ್ವದ ಯುಪಿಎ–2ರ ಸರ್ಕಾರಕ್ಕೆ ಮುಖೇಶ್ ಅಂಬಾನಿ ಒತ್ತಾಯಿಸುತ್ತಾರೆ. ಪೆಟ್ರೋಲಿಯಂ ಖಾತೆಯ ಸಚಿವರಾಗಿದ್ದ ಜೈಪಾಲ್ ರೆಡ್ಡಿ ಮುಖೇಶ್ ಅಂಬಾನಿಯ ಈ ಒತ್ತಡಕ್ಕೆ ಮಣಿಯಲಿಲ್ಲ.

ಮನಮೋಹನ್ ಸಿಂಗ್ ಸರ್ಕಾರ, ಅಕ್ಟೋಬರ್ 28, 2012 ರಂದು ಜೈಪಾಲ್ ರೆಡ್ಡಿಯವರಿಂದ ಪೆಟ್ರೋಲಿಯಂ ಸಚಿವ ಸ್ಥಾನವನ್ನು ಕಸಿದುಕೊಂಡು, ಸೈನ್ಸ್ ಅಂಡ್ ಟೆಕ್ನಾಲಜಿ ಸಚಿವ ಸ್ಥಾನ ನೀಡಲಾಯಿತು. ವೀರಪ್ಪ ಮೊಯ್ಲಿಯವರಿಗೆ ಆ ಖಾತೆಯನ್ನು ಕೊಡಲಾಯಿತು. ನಮ್ಮ ಪ್ರಭುತ್ವದ ಆಡಳಿತದ ಮೇಲೆ ದೊಡ್ಡ ಬಂಡವಾಳಗಾರರು ಎಷ್ಟು ಹಿಡಿತ ಹೊಂದಿದ್ದಾರೆ ಮತ್ತು ಕಾರ್ಪೋರೇಟ್ ಕುಳಗಳಿಗೆ ಅನುಕೂಲಕರವಾದ ನೀತಿಗಳನ್ನು ಜಾರಿಗೆ ತರಲು ಒಪ್ಪದ ಸಚಿವರ ಗತಿ ಏನಾಗಬಹುದು ಎಂಬುದಕ್ಕೆ ಈ ಘಟನೆಯೇ ಸಾಕ್ಷಿ. (ಇಂದು ಈ ದರ ಮಾರ್ಚ್ 31, 2023 ರವರೆಗೆ ಸರ್ಕಾರ ನಿಗದಿಪಡಿಸಿದಂತೆ, ಪ್ರತಿ ಎಂಎಂಬಿಟಿಯುಗೆ 12.46 ಯು.ಎಸ್.ಡಿ. ಇದೆ.

ಮಾರ್ಕ್ಸ್‌ವಾದಿ ದೃಷ್ಟಿಕೋನದಲ್ಲಿ ಮತಧರ್ಮ ಮತ್ತು ಧಾರ್ಮಿಕತೆ



ಕಮ್ಯೂನಿಸ್ಟ್ ಪ್ರಣಾಳಿಕೆಯನ್ನು ಪ್ರಕಟಿಸಿದ ಫೆಬ್ರವರಿ 21 ಅನ್ನು ಪ್ರಪಂಚದಾದ್ಯಂತ ‘ಕೆಂಪು ಪುಸ್ತಕ ದಿನ’ (Red Books day) ವನ್ನಾಗಿ ಆಚರಿಸಲಾಗುತ್ತದೆ. ಇದರ ಅಂಗವಾಗಿ ರಾಜ್ಯದಲ್ಲಿಯೂ ಫೆಬ್ರವರಿ 21 ರಿಂದ ಮಾರ್ಚ್ 14ರ ವರೆಗೆ ‘ಕೆಂಪು ಪುಸ್ತಕ ದಿನ ಅಭಿಯಾನ’ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಈ ಒಂದು ಪುಟ್ಟ ಲೇಖನ.

ಇತಿಹಾಸದ ದಿನಗಳಲ್ಲಿ ಮಾರ್ಕ್ಸ್–ಎಂಗೆಲ್ಸ್ ಮತ್ತು ಇತರ ಮಾರ್ಕ್ಸ್‌ವಾದಿ ಚಿಂತಕರು ಮಂಡಿಸಿದ ಮತಧರ್ಮದ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಅಧ್ಯಯನಗಳನ್ನು ಬೇರೆ ಯಾವುದೇ ತತ್ವಶಾಸ್ತ್ರವು ಪ್ರಸ್ತುತಪಡಿಸಿಲ್ಲ ಎಂದು ಹೇಳುವುದು ಅತಿಶಯೋಕ್ತಿಯಾಗುವುದಿಲ್ಲ. ಇವು ಕೇವಲ ವೈಚಾರಿಕ ಅಧ್ಯಯನಗಳಲ್ಲ, ಅನುಸರಣೆಗೆ ಮಾರ್ಗದರ್ಶಿ. ಈ ಪರಿಕಲ್ಪನೆಗಳು ಸಮಾಜವಾದಿ ದೇಶಗಳಲ್ಲಿ ಮತ್ತು ಸಮಾಜವಾದಕ್ಕಾಗಿ ಹೋರಾಡುತ್ತಿರುವ ದೇಶಗಳಲ್ಲಿ ಪ್ರಾಯೋಗಿಕ ಮಾರ್ಗದರ್ಶಿಯಾಗಿ ಕಾರ್ಯ ನಿರ್ವಹಿಸುತ್ತವೆ.

ಮಾನವ ಮತಧರ್ಮವನ್ನು ಸೃಷ್ಟಿಸಿದ!

ಮತಧರ್ಮದ ಬಗ್ಗೆ ಮಾರ್ಕ್ಸ್ ತನ್ನ ಬಹಳ ಆಳವಾದ ಮತ್ತು ಗಹನವಾದ ವಿಚಾರಗಳನ್ನು ಪ್ರಸ್ತುತಪಡಿಸುತ್ತಾರೆ “ಮತಧರ್ಮವು ಮನುಷ್ಯನನ್ನು ಸೃಷ್ಟಿಸುವುದಿಲ್ಲ. ಮನುಷ್ಯ ಮತಧರ್ಮವನ್ನು ಸೃಷ್ಟಿಸಿದ್ದಾನೆ" ಇದನ್ನು ಮಾರ್ಕ್ಸ್ ಕಮ್ಯೂನಿಸ್ಟ್ ಪ್ರಣಾಳಿಕೆಯನ್ನು ಬರೆಯುವ 5 ವರ್ಷಗಳ ಮೊದಲು ಅಂದರೆ, 1843 ರಲ್ಲೇ ಬರೆದಿದ್ದಾರೆ! ಮಾರ್ಕ್ಸ್ ಇದನ್ನು ಮತ್ತಷ್ಟು ವಿವರಿಸಿದ್ದು ಹೀಗೆ “ಬೇರೆ ರೀತಿಯಲ್ಲಿ ಹೇಳುವುದಾದರೆ, ಧರ್ಮವು ಇನ್ನೂ ತನ್ನನ್ನು ತಾನು ಕಂಡುಕೊಳ್ಳದ ಅಥವಾ ಧರ್ಮವು ಈಗಾಗಲೇ ತನ್ನನ್ನು ತಾನು ಕಳೆದುಕೊಂಡ ಮನುಷ್ಯನ ಆತ್ಮ ಪ್ರಜ್ಞೆ ಮತ್ತು ಸ್ವಾಭಿಮಾನವಾಗಿದೆ”.

“ಈ ಪ್ರಭುತ್ವ ಮತ್ತು ಸಮಾಜವೇ ಮತಧರ್ಮವನ್ನು ಹುಟ್ಟುಹಾಕುತ್ತದೆ. ಆದರೆ ಮತಧರ್ಮ ಇದಕ್ಕೆ ವಿರುದ್ಧವಾದ ಭಾವನೆಯಾಗಿದೆ. ಏಕೆಂದರೆ ಈ ಸಮಾಜ ತಲೆಕೆಳಗಾಗಿದೆ” ಧರ್ಮವು ಮಾನವನ ಬದುಕಿನೊಂದಿಗೆ ಎಷ್ಟರ ಮಟ್ಟಿಗೆ ಹೆಣೆದುಕೊಂಡಿದೆ ಎಂಬುದನ್ನು ಮಾರ್ಕ್ಸ್ ಈ ಕೆಳಗಿನ ಮಾತುಗಳಲ್ಲಿ ವಿವರಿಸುತ್ತಾರೆ.

‘ಪ್ರಪಂಚದ ಸಾಮಾನ್ಯ ಸಿದ್ಧಾಂತ’, ‘ವಿಶ್ವಕೋಶದ ಸಾರಾಂಶ’, ‘ಸ್ಥಳೀಯ ರೂಪದಲ್ಲಿ ತಾರ್ಕಿಕ ಪರಿಕಲ್ಪನೆಗಳು’, ‘ತಪ್ಪಿಸಿಕೊಳ್ಳಲಾಗದ ಶ್ರೇಷ್ಠತೆಯ ಆಧ್ಯಾತ್ಮಿಕ ಯಜಮಾನಿಕೆ’, ‘ಪ್ರಪಂಚದ ಸ್ಫೂರ್ತಿ’ ‘ನೈತಿಕ ಸಂಹಿತೆಯ ತತ್ವಗಳು’, ‘ಪ್ರಪಂಚದ ಗೌರವದ ಪರಿಪೂರ್ಣತೆ’, ಮತ್ತು ‘ನ್ಯಾಯ ಮತ್ತು ಸೌಕರ್ಯದ ಸರ್ವವ್ಯಾಪಿ ವೇದಿಕೆ’.

ಮಾನವನ ಬದುಕಿನೊಂದಿಗೆ ಬೆಸೆದುಕೊಂಡಿರುವ ಮತಧರ್ಮವು ಸಮಾಜದ ಮೇಲೆ ಎಂತಹ ಆಳವಾದ ಪ್ರಭಾವವನ್ನು ಸೃಷ್ಟಿಸಿದೆ ಎಂಬುದನ್ನು ಯಾರಾದರೂ ಈ ಮಟ್ಟಿಗೆ ವಿವರಿಸಬಹುದೇ? ಮಾರ್ಕ್ಸ್ ರವರಿಂದ ಮಾತ್ರ ಅದನ್ನು ಮಾಡಲು ಸಾಧ್ಯವಾಯಿತು!


ಮತಧರ್ಮದ ಆಶ್ರಯದಲ್ಲಿ ಮನುಷ್ಯನು ವ್ಯಕ್ತಪಡಿಸುವ ದುಖಃ ಚಲನಶಾಸ್ತ್ರ ಆಧಾರಿತ ಎರಡು ವಿರೋಧಾಭಾಸಗಳನ್ನು ಹೊಂದಿದೆ ಎಂದು ಮಾರ್ಕ್ಸ್ ಹೇಳುತ್ತಾರೆ. ಆ ದುಃಖ ನಿಜವಾದ ದುಃಖದ ಅಭಿವ್ಯಕ್ತಿಯಾಗಿದೆ! ಅದೇ ಸಮಯದಲ್ಲಿ ಆ ದುರಂತದ ವಿರುದ್ಧ ಪ್ರತಿಕ್ರಿಯೆಯೂ ಸಹ!

ಮಾನವ ಮತಧರ್ಮದಲ್ಲಿ ಆಶ್ರಯ ಪಡೆಯುವುದು ಕೆಲವು ವಿಚಾರವಾದಿಗಳು ಹೇಳುವಂತೆ ಕೀಳರಿಮೆ ಅಥವಾ ಹಾಸ್ಯಾಸ್ಪದ ಕೃತ್ಯವಲ್ಲ! ಬದಲಿಗೆ, ಮನುಷ್ಯ ಯಾವ ರೀತಿಯ ದುಃಖವನ್ನು ವ್ಯಕ್ತಪಡಿಸುತ್ತಾನೆ ಮತ್ತು ಅದಕ್ಕೆ ಪ್ರತಿಕ್ರಿಯೆಯ ಮಾದರಿ ಏನು ಎಂಬುದನ್ನು ನೋಡುವುದು ಅವಶ್ಯಕ. ಈ ಮಾತುಗಳ ನಂತರ ಮಾರ್ಕ್ಸ್ ತನ್ನ ಪ್ರಸಿದ್ಧ ಸಾಲುಗಳನ್ನು ಹೇಳುತ್ತಾನೆ: “ಮತಧರ್ಮವು ದಮನಿತ ಜೀವಿಯ ನಿಟ್ಟುಸಿರು. ಹೃದಯಹೀನ ಜಗತ್ತಿನ ಹೃದಯ. ಆತ್ಮವಿಲ್ಲದ ಪರಿಸರದ ಆತ್ಮ. (ಆದ್ದರಿಂದ) ಇದು ಜನರ ಅಫೀಮು”.

ಮತಧರ್ಮ ಅಫೀಮು ಏಕೆ?

‘ಮತಧರ್ಮವು ಜನರ ಅಫೀಮು’ ಎಂಬ ಮಾತುಗಳನ್ನು ಇಟ್ಟುಕೊಂಡು ಕಮ್ಯೂನಿಸ್ಟರ ವಿರುದ್ಧ ಎರಡು ರೀತಿಯ ಟೀಕೆಗಳನ್ನು ಮಾಡಲಾಗುತ್ತದೆ. ಒಂದು ಟೀಕೆ ಆಧ್ಯಾತ್ಮಿಕವಾದಿಗಳದು. ಕಾರ್ಲ್ ಮಾರ್ಕ್ಸ್ ಮತಧರ್ಮವನ್ನು ಅಫೀಮಿಗೆ ಹೋಲಿಸಿ ಅವಹೇಳನ ಮಾಡಿದ್ದಾರೆ ಎಂದು ಅವರು ಹೇಳುತ್ತಾರೆ. ಈ ಪಠ್ಯದ ಹಿಂದಿನ ಹಲವಾರು ಅಂಶಗಳ ವೈಶಿಷ್ಟ್ಯಗಳು ಮಾರ್ಕ್ಸ್ ಮತಧರ್ಮವನ್ನು ಅವಹೇಳನ ಮಾಡಿಲ್ಲ ಎಂದು ಸ್ಪಷ್ಟಪಡಿಸುತ್ತದೆ. ಮತಧರ್ಮವು ಮಾನವನ ಬದುಕಿನ ಮೇಲೆ ಆಳವಾದ ಪ್ರಭಾವ ಬೀರಿದೆ ಎಂಬುದನ್ನು ಮಾರ್ಕ್ಸ‌ನಷ್ಟು ಸ್ಪಷ್ಟವಾಗಿ ಯಾವುದೇ ಆಧ್ಯಾತ್ಮಿಕವಾದಿ ತೋರಿಸಿಲ್ಲ. ಮತ್ತು ಮಾರ್ಕ್ಸ್ ಕಾಲದಲ್ಲಿ ಜರ್ಮನಿಯಂತಹ ದೇಶಗಳಲ್ಲಿ ಅಫೀಮು ಔಷಧವಾಗಿ ನಿಷೇಧಿಸಲ್ಪಟ್ಟಿರಲಿಲ್ಲ. ಅದು ನೋವು ನಿವಾರಕವಾಗಿ ಬಳಸಲ್ಪಡುತ್ತಿತ್ತು. ಹಾಗಾಗಿ ಮಾರ್ಕ್ಸ್ ಮತಧರ್ಮವನ್ನು ಅವಹೇಳನ ಮಾಡಿದರು ಎಂಬ ಅಪಪ್ರಚಾರಕ್ಕೆ ಆಧಾರವಿಲ್ಲ.

ಇನ್ನೊಂದು ಟೀಕೆ ವಿಚಾರವಾದಿಗಳದ್ದು! ಮತಧರ್ಮವು ಅಫೀಮು ಎಂದು ಮಾರ್ಕ್ಸ್ ಸ್ಪಷ್ಟವಾಗಿ ಹೇಳಿದರು. ಆದರೆ ಇಂದಿನ ಕಮ್ಯೂನಿಸ್ಟರು ಮತಧರ್ಮದ ಬಗೆಗಿನ ಮಾರ್ಕ್ಸ್ ಮೌಲ್ಯಮಾಪನವನ್ನು ದುರ್ಬಲಗೊಳಿಸಿದ್ದಾರೆ ಎಂದು ಅವರು ಆರೋಪಿಸುತ್ತಾರೆ. ಕೇವಲ ಪ್ರಚಾರದಿಂದ ಮತಧರ್ಮ ಅಥವಾ ದೇವರನ್ನು ಪ್ರಪಂಚದಿಂದ ತೊಲಗಿಸಬಹುದು ಎನ್ನುತ್ತಾರೆ ಈ ವಿಚಾರವಾದಿಗಳು. ಕಮ್ಯೂನಿಸ್ಟರು ಧಾರ್ಮಿಕ ವಿರೋಧಿ ಪ್ರಚಾರದ ಮಹತ್ವವನ್ನು ಕಡಿಮೆ ಅಂದಾಜು ಮಾಡಲಿಲ್ಲ. ಅಮೇರಿಕನ್ ವಿದ್ವಾಂಸ ಇಂಗರ್ಸಾಲ್ ಅವರು ತಮ್ಮ ಇಡೀ ಜೀವನವನ್ನು ವೈಚಾರಿಕತೆಯ ಕಾರಣಕ್ಕಾಗಿ ಮುಡಿಪಾಗಿಟ್ಟರು. ಪೆರಿಯಾರ್ ಅವರ ಹುರುಪಿನ ಪ್ರಚಾರವನ್ನು ಯಾರಾದರೂ ಕಡಿಮೆ ಅಂದಾಜು ಮಾಡಬಹುದೆ? ಕೇರಳದಲ್ಲಿ ಹುಟ್ಟಿ ಶ್ರೀಲಂಕಾದಲ್ಲಿ ನೆಲೆಸಿರುವ ಅಬ್ರಹಾಂ ಕೋವೂರ್ ಅವರು ಅನೇಕ ಆಧುನಿಕ ವೈಜ್ಞಾನಿಕ ವಿಧಾನಗಳಲ್ಲಿ ಮತಧರ್ಮದ ವಿರುದ್ಧ



ಪ್ರಚಾರ ಮಾಡಿದ್ದರು. ಅವರಂತೆ ಸಾಯಿಬಾಬಾರನ್ನು ಯಾರೂ ಬಯಲು ಮಾಡಲು ಸಾಧ್ಯವಿಲ್ಲ. ಶೂನ್ಯದಿಂದ ವಿಭೂತಿಯನ್ನು ಸೃಷ್ಟಿಸುವಂತೆ, ಕುಂಬಳಕಾಯಿಯನ್ನು ಸೃಷ್ಟಿಸುವಂತೆ ಅವರು ಸಾಯಿಬಾಬಾಗೆ ಸವಾಲು ಹಾಕುತ್ತಾರೆ. ಕರ್ನಾಟಕದ ಹಲವು ವಿಚಾರವಾದಿಗಳೂ ಸಾಯಿಬಾಬಾಗೆ ಇಂತದೇ ಸವಾಲುಗಳನ್ನು ಹಾಕಿದ್ದಾರೆ. ಏಕೆಂದರೆ ವಿಭೂತಿಯನ್ನು ಜಿಪ್ಪಿನಲ್ಲಿ ತೋಳುಗಳ ಕೆಳಗೆ ಮರೆಮಾಡಬಹುದು. ಕುಂಬಳಕಾಯಿಯನ್ನು ಮರೆಮಾಡುವುದು ಅಸಾಧ್ಯ. ಆದರೆ, ಈ ಮಹಾನ್ ವ್ಯಕ್ತಿಗಳ ಪ್ರಚಾರದ ನಂತರವೂ ಧಾರ್ಮಿಕ ಪಾಲ್ಗೊಳ್ಳುವಿಕೆ ಕಡಿಮೆಯಾಗಲಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ ಇಂದಿನ ಪರಿಸ್ಥಿತಿ ಹೆಚ್ಚಿದೆ!



ಮಾರ್ಕ್ಸ್ ಮತಧರ್ಮವನ್ನು ಅಫೀಮಿಗೆ ಏಕೆ ಹೋಲಿಸುತ್ತಾರೆ?

ಅಫೀಮು ಕುಡಿಯುವವನು ತನ್ನ ದುಃಖಗಳಿಂದ ತಾತ್ಕಾಲಿಕವಾಗಿ ಮುಕ್ತನಾಗುತ್ತಾನೆ ಮತ್ತು ಆತ ಆ ಸಮಯದಲ್ಲಿ ಸ್ವರ್ಗದಲ್ಲಿ ಅಡ್ಡಾಡುತ್ತಾನೆ. ಆದರೆ ಒಮ್ಮೆ ವ್ಯಸನ ನಿವಾರಣೆಯಾದ ನಂತರ ಅವನು ಈ ಪ್ರಪಂಚದ ದುಃಖಗಳನ್ನು ಮತ್ತೆ ಎದುರಿಸಬೇಕಾಗುತ್ತದೆ. ಇಂತಹ ಬಂಡವಾಳಶಾಹಿ ಸಮಾಜದಲ್ಲಿ ಬದುಕಿನ ಕಷ್ಟಗಳನ್ನು ಅನುಭವಿಸುವವನ ಎದುರು ಎರಡು ದಾರಿಗಳಿವೆ. ಈ ಸಂಕಷ್ಟಗಳಿಗೆ ಕಾರಣವಾಗಿರುವ ವರ್ಗ ಆಧಾರಿತ ಸಮಾಜವನ್ನು ಬದಲಾಯಿಸಲು ಹೋರಾಟಕ್ಕೆ ಮುಂದಾಗಬೇಕು. ಅಥವಾ ತಮ್ಮ ದುಃಖಗಳನ್ನು ಮರೆಯಲು ಮತಧರ್ಮವನ್ನು ಆಶ್ರಯಿಸಬೇಕು. ಒಮ್ಮೆ ಅವನು ಮತಧರ್ಮದ ಆಶ್ರಯವನ್ನು ತೊರೆದು ಮತ್ತೆ ವರ್ಗ ಸಮಾಜದ ವಾಸ್ತವವನ್ನು ಎದುರಿಸಬೇಕಾಗುತ್ತದೆ. ಮತಧರ್ಮ ಅವನಿಗೆ ಕೊಡುವ ಸಮಾಧಾನ ತಾತ್ಕಾಲಿಕ. ಅದು ಶಾಶ್ವತ ಪರಿಹಾರವಲ್ಲ. ಆದುದರಿಂದಲೇ ಮತಧರ್ಮವು ಮನುಷ್ಯನ ಅಫೀಮು ಎನ್ನುತ್ತಾರೆ ಮಾರ್ಕ್ಸ್. “ಜನರ ನಿಜವಾದ ಸಂತೋಷಕ್ಕಾಗಿ, ನಾವು ಭ್ರಮೆಯ ಮತಧರ್ಮದ ಸಂತೋಷವನ್ನು ತೊಡೆದುಹಾಕಬೇಕು” ಎಂದು ಮಾರ್ಕ್ಸ್ ಈ ಕೆಳಗಿನ ಮಾತುಗಳೊಂದಿಗೆ ಮತಧರ್ಮವು ಹೇಗೆ ಮನುಷ್ಯನ ಆತ್ಮ ವಿಶ್ವಾಸವನ್ನು ನಾಶಮಾಡುತ್ತದೆ ಎಂದು ಸುಂದರವಾಗಿ ಹೇಳುತ್ತಾರೆ: “ಮನುಷ್ಯ ತನ್ನ ಸುತ್ತ ಸುತ್ತುವವರೆಗೂ ಧರ್ಮವು ಭ್ರಮೆಯ ಸೂರ್ಯವಾಗಿದೆ.”

ಮತಧರ್ಮ ಮತ್ತು ಅದರ ಬಾಹ್ಯ ಅಂಶಗಳು

ಮಾರ್ಕ್ಸ್ ಬಹಳ ಮುಖ್ಯವಾದ ಅಂಶವನ್ನು ಪ್ರಸ್ತುತಪಡಿಸುತ್ತಾರೆ. ನಾವು ಮತಧರ್ಮದ ಮುಸುಕನ್ನು ತೆಗೆದುಹಾಕುವಲ್ಲಿ ಯಶಸ್ವಿಯಾದರೆ “ಸ್ವರ್ಗದ ವಿಮರ್ಶೆ ಭೂಮಿಯ ವಿಮರ್ಶೆಯಾಗುತ್ತದೆ; ಮತಧರ್ಮದ ವಿಮರ್ಶೆಯು ಹಕ್ಕುಗಳ ವಿಮರ್ಶೆಯಾಗುತ್ತದೆ; ಧರ್ಮಶಾಸ್ತ್ರದ ವಿಮರ್ಶೆಯು ರಾಜಕೀಯದ ವಿಮರ್ಶೆಯಾಗುತ್ತದೆ. ನಾವು ಮತಧರ್ಮದ ಭ್ರಮೆಯನ್ನು ತೊಡೆದುಹಾಕಬೇಕಾದರೆ, ಆ ಭ್ರಮೆಯನ್ನು ಸೃಷ್ಟಿಸುವ ಬಾಹ್ಯ ಪರಿಸ್ಥಿತಿಗಳನ್ನು ನಾವು ತೊಡೆದುಹಾಕಬೇಕು” ಎಂದು ಮಾರ್ಕ್ಸ್ ಗಂಭೀರವಾಗಿ ಉಲ್ಲೇಖಿಸುತ್ತಾರೆ. “ಮನುಷ್ಯನನ್ನು ಧರ್ಮಕ್ಕೆ ಬಂಧಿಸುವ ಸರಪಳಿಯು ಅವನನ್ನು ಆರ್ಥಿಕ ಶೋಷಣೆಗೆ ಬಂಧಿಸುವ ಸರಪಳಿಯ ಪ್ರತಿಬಿಂಬವಾಗಿದೆ” ಎಂದು ಲೆನಿನ್ ಹೇಳುತ್ತಾರೆ. ಮೇಲಿನ ಜಗತ್ತಿನಲ್ಲಿ ಸ್ವರ್ಗದ ಕುರಿತು ಖಿನ್ನತೆಗೆ ಒಳಗಾದ ವರ್ಗಗಳ ಒಮ್ಮತಕ್ಕಿಂತ ಹೆಚ್ಚಾಗಿ ದುಡಿಯುವ ವರ್ಗದ ಒಮ್ಮತವೇ ಭೂಮಿಯ ಮೇಲೆ ಸ್ವರ್ಗವನ್ನು ಸೃಷ್ಟಿಸುತ್ತದೆ ಎಂದು ಅವರು ಹೇಳುತ್ತಾರೆ. ಅದಕ್ಕಾಗಿಯೇ ಕಮ್ಯೂನಿಸ್ಟ್ ಪಕ್ಷವನ್ನು ಸೇರಲು ನಾಸ್ತಿಕ/ಆಸ್ತಿಕ ದೃಷ್ಟಿಕೋನವನ್ನು ಹೊಂದಿರುವುದು ಅನಿವಾರ್ಯವಲ್ಲ ಎಂದು ಲೆನಿನ್ ಪ್ರತಿಪಾದಿಸಿದರು.

ಆಗತಾನೇ ಬೆಳೆಯುತ್ತಿದ್ದ ಬಂಡವಾಳಶಾಹಿ ಸಮಾಜಕ್ಕೆ ಸರಿಹೊಂದುವಂತೆ ಕ್ರಿಶ್ಚಿಯನ್ ಮತಧರ್ಮದ ಪ್ರೊಟೆಸ್ಟಂಟ್ ಪಂಥವು ಹೇಗೆ ವಿಕಸನಗೊಂಡಿತು ಎಂಬುದನ್ನು ಲೆನಿನ್ ವಿವರಿಸುತ್ತಾರೆ. ಪ್ರತಿಯೊಂದು ಮತಧರ್ಮ ಅಥವಾ ಉಪ–ಧರ್ಮದ ಹೊರಹೊಮ್ಮುವಿಕೆಗೆ ಆಧ್ಯಾತ್ಮಿಕತೆಗೆ ಸಂಬಂಧಿಸಿದ ನಿರ್ದಿಷ್ಟ ಸಾಮಾಜಿಕ/ಆರ್ಥಿಕ/ರಾಜಕೀಯ ಕಾರಣಗಳಿವೆ ಎಂಬುದು ಮಾರ್ಕ್ಸ್‌ವಾದದ ಮೂಲಭೂತ ನಿಲುವು. ವೈದಿಕ ಮತಧರ್ಮವನ್ನು ಹಿಂದಕ್ಕೆ ತಳ್ಳಿದ ಜೈನ/ಬೌದ್ಧ ಧರ್ಮದ ಉದಯಕ್ಕೆ ಮತ್ತು ಈ ಮತಧರ್ಮಗಳನ್ನು ಹಿಂದಕ್ಕೆ ತಳ್ಳಿದ ಶೈವ ಮತ್ತು ವೈಷ್ಣವ ಧರ್ಮಗಳ ಪುನರುತ್ಥಾನಕ್ಕೆ ಇಂತಹ ಅಂಶಗಳು ಅನ್ವಯಿಸುತ್ತವೆ. ಕೇವಲ ಆಧ್ಯಾತ್ಮಿಕತೆ ಎಂದಿಗೂ ಮತಧರ್ಮದ ಆಧಾರವಾಗಿರಲಿಲ್ಲ. ಮತಧರ್ಮಗಳು ಶೋಷಣೆಯ ಸಾಧನಗಳಾಗಿವೆ.

ಫೆಡ್ರಿಕ್ ಏಂಗೆಲ್ಸ್ ಅವರ “ಆರಂಭಿಕ ಕ್ರಿಶ್ಚಿಯನ್ ಧರ್ಮದ ಇತಿಹಾಸ” ಎಂಬ ಪುಸ್ತಕದಲ್ಲಿ, ಆರಂಭಿಕ ಕ್ರಿಶ್ಚಿಯನ್ ಮತಧರ್ಮದ ಇತಿಹಾಸವು ಆರಂಭಿಕ ಕಾರ್ಮಿಕ ವರ್ಗದ ಇತಿಹಾಸದಂತೆಯೇ ಇದೆ ಎಂದು ಏಂಗೆಲ್ಸ್ ಹೇಳುತ್ತಾರೆ. ಇವೆರಡೂ ದುಡಿಮೆಯ ಪರವಾಗಿ ಇದ್ದವುಗಳೇ; ಇವೆರೆಡೂ ಪ್ರಭುತ್ವದ ದಮನಕ್ಕೆ ಒಳಗಾಗಿದ್ದವು; ಇವೆರಡೂ ಜನರ ಕಷ್ಟಗಳನ್ನು ಪರಿಹರಿಸಲು

ಪುಟ 14 ಕ್ಕೆ

ಮನರೇಗ: ಹಂಚಿಕೆ ಕಡಿತ, ತಂತ್ರಜ್ಞಾನದ ಹೇರಿಕೆ, ಕೂಲಿ ಪಾವತಿ ವಿಳಂಬ..

ಇದು ಅಮೃತ ಕಾಲ!

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಗ್ರಾಮೀಣ ಬಡವರ ಬದುಕಿಗೆ ಎಷ್ಟು ಅಗತ್ಯ ಎಂದು ಕೊವಿಡ್ ಕಾಲದಲ್ಲಿ ಸ್ಪಷ್ಟವಾಗಿ ಕಂಡು ಬಂದರೂ ಈ ಯೋಜನೆಯನ್ನು ಮುಗಿಸಿ ಬಿಡಲು ಸರಕಾರ ಕಟಿಬದ್ಧವಾಗಿರುವಂತೆ ಕಾಣುತ್ತದೆ. ಈ ಬಾರಿಯ ಬಜೆಟಿನಲ್ಲಿ ಈ ಬಾಬ್ತು ಹಣನೀಡಿಕೆಯನ್ನು 33% ದಷ್ಟು ತೀವ್ರವಾಗಿ ಕಡಿತ ಮಾಡಿದ್ದಷ್ಟೇ ಅಲ್ಲ, ನಂತರ ಫೆಬ್ರುವರಿ 1ರಿಂದ ಮನರೇಗ ಕೆಲಸಗಾರರಿಗೆ ಕೂಲಿ ಪಾವತಿಯನ್ನು ಎಬಿಪಿಎಸ್ ಮೂಲಕ ಮಾತ್ರವೇ ಮಾಡಲಾಗುವುದು ಎಂದು ವಿಧಿಸಿರುವುದು ಗ್ರಾಮೀಣ ಬಡವರ ಬಗ್ಗೆ ಸರಕಾರದ ನಿರ್ದಯ ನಿಲುವನ್ನು ತೋರಿಸುತ್ತದೆ ಎಂದು ಈ ಕುರಿತು ಅಧ್ಯಯನ ಮಾಡುತ್ತಿರುವವರು ಹೇಳುತ್ತಿದ್ದಾರೆ.

ಪ್ರಧಾನ ಮಂತ್ರಿಗಳು ಆರಂಭದಿಂದಲೇ ಈ ಯೋಜನೆಯ ವಿರುದ್ಧ ಕಿಡಿಕಾರುತ್ತ ಬಂದಿದ್ದರೂ ಇದುವರೆಗೂ, 9ವರ್ಷಗಳ ನಂತರವೂ ಎನ್‌ಡಿಎ ಸರಕಾರ ಇದನ್ನು ರದ್ದು ಮಾಡುವ ಕ್ರಮಕ್ಕೆ ಇಳಿದಿಲ್ಲ, ಬಹುಶಃ ಇಳಿಯಲಾಗಿಲ್ಲ. ಆದರೆ ಕೂಲಿ ಪಾವತಿಯಲ್ಲಿ ವಿಳಂಬ, ತಾಂತ್ರಿಕ ಹೇರಿಕೆಗಳು ಮತ್ತು ಅಗತ್ಯ ಹಣವನ್ನು ಮಂಜೂರು ಮಾಡದೆ ಅದು ಶೋಚನೀಯ ಸ್ಥಿತಿಯಲ್ಲಿಯೇ ಇರುವಂತೆ ಮಾಡಲಾಗಿದೆ ಎಂದು ಅಧ್ಯಯನಗಳು ಹೊರಗೆಡಹಿವೆ.

ಅತ್ಯಂತ ಕಡಿಮೆ ಹಂಚಿಕೆ

ಇತ್ತೀಚೆಗೆ ಕೇಂದ್ರ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು ಬಜೆಟ್ ಹಂಚಿಕೆಯ ಕಡಿತದ ಟೀಕೆಗೆ ಉತ್ತರಿಸುತ್ತ ತಮ್ಮ ಸರಕಾರ ಯುಪಿಎ ಸರಕಾರಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಈ ಯೋಜನೆಗೆ ಹಣ ನೀಡಿದೆ, ಬೇಡಿಕೆ ಬಂದಂತೆ ಹಣ ಒದಗಿಸಲಾಗುವುದು ಎಂದಿದ್ದಾರೆ. ಆದರೆ ಅಂಕಿ–ಅಂಶಗಳು ತದ್ವಿರುದ್ಧ ಸಂಗತಿಯನ್ನೇ ತೋರಿಸುತ್ತವೆ. ಪ್ರಸಕ್ತ ಬಜೆಟಿನಲ್ಲಿ ಈ ಯೋಜನೆಗೆ ನೀಡಿರುವುದು 1.3% ದಷ್ಟು ಮಾತ್ರವೇ, ಇದು ಇದುವರೆಗಿನ ಅತೀ ಕಡಿಮೆ ಪ್ರಮಾಣದ ನೀಡಿಕೆ ಎನ್ನುತ್ತಾರೆ ಈ ಯೋಜನೆಯ ದತ್ತಾಂಶಗಳನ್ನು ಸಂಗ್ರಹಿಸಿರುವ ಜಾಸ್ಮಿನ್ ನಿಹಲಾನಿ (ದಿ ಹಿಂದು, ಫೆ.27).

2008–09 ರಲ್ಲಿ ಯುಪಿಎ–1 ಸರಕಾರ ಎಡಪಕ್ಷಗಳ ಆಗ್ರಹದಿಂದ ತಂದ ಈ ಯೋಜನೆಗೆ ಬಜೆಟಿನ 3.5% ಹಣವನ್ನು ನೀಡಿತ್ತು. ನಂತರ ಎಡಪಕ್ಷಗಳ ಬೆಂಬಲವನ್ನು ಅವಲಂಬಿಸಿರದ ಯುಪಿಎ–2 ಸರಕಾರದಲ್ಲಿ ಇದರಲ್ಲಿ ಇಳಿಕೆಯಾಗುತ್ತ 2% ತಲುಪಿತ್ತು. ಎನ್‌ಡಿಎ–1 ಸರಕಾರ ಈ ಯೋಜನೆಯನ್ನು ಹೀಗಳೆಯುತ್ತಿದ್ದರೂ, ಹಣ ನೀಡಿಕೆಯ ಪ್ರಮಾಣವನ್ನು ಇನ್ನಷ್ಟು ಕಡಿತ ಮಾಡದೇ ಕ್ರಮೇಣ ಹೆಚ್ಚಿಸುತ್ತಲೇ ಬಂದಿದ್ದು, ಕೊವಿಡ್ ಕಾಲದಲ್ಲಿ, ಬಹಶಃ ಅನಿವಾರ್ಯವಾಗಿಯೇ 3.2%ದ ವರೆಗೆ ಬಂದಿತ್ತು. ಆದರೆ ಆಮೇಲೆ ತೀವ್ರವಾಗಿ ಇಳಿಸಿ ಈಗ 1.3%ಕ್ಕೆ, ಅತ್ಯಂತ ಕಡಿಮೆ ಮಟ್ಟಕ್ಕೆ ಇಳಿಸಿದೆ.

56% ಬಡವರನ್ನು ಅನರ್ಹಗೊಳಿಸುವ ಎಬಿಪಿಎಸ್ ಹೇರಿಕೆ

ಈಗ ಮನರೇಗ ಕೆಲಸಗಾರರು ಜಾಬ್ ಕಾರ್ಡುಗಳನ್ನು ಮತ್ತು ಬ್ಯಾಂಕ್ ಖಾತೆಗಳನ್ನು ತಮ್ಮ ಆಧಾರ್‌ನೊಂದಿಗೆ ಜೋಡಿಸದಿದ್ದರೆ ಅವರು ಮನರೇಗ ಕೆಲಸಮಾಡಲು ಬಿಡಲಾಗುತ್ತಿಲ್ಲ. ಕೆಲಸಕ್ಕೆ ಅತ್ಯಂತ ಹೆಚ್ಚು ಬೇಡಿಕೆಯಿರುವ ಸಮಯದಲ್ಲಿ ಇದನ್ನು ವಿಧಿಸಿರುವುದು ಗಂಭೀರ ದುಷ್ಪರಿಣಾಮಗಳನ್ನು ಬೀರುತ್ತದೆ ಎಂದು ಹೇಳಲಾಗಿದೆ. ಏಕೆಂದರೆ, ಮೇಲೆ ಹೇಳಿದ ದತಾಂಶಗಳ ಪ್ರಕಾರ, ಫೆಬ್ರುವರಿ 20ರ ವೇಳೆಗೂ ಒಟ್ಟು ಕೆಲಸಗಾರರಲ್ಲಿ 44% ಮಾತ್ರ ಎಬಿಪಿಎಸ್ ಗೆ ಅರ್ಹರಾಗಿದಾರೆ. ಇದರಿಂದ 14 ರಾಜ್ಯಗಳಲ್ಲಿ 50%ಕ್ಕೂ ಹೆಚ್ಚು ಕೆಲಸಗಾರರು ಕೆಲಸ ಪಡೆಯಲು ಅನರ್ಹರಾಗುತ್ತಾರೆ. ತಲಾ 2 ಕೋಟಿಗಿಂತ ಹೆಚ್ಚು ಕೆಲಸಗಾರರು ನೋಂದಾಯಿಸಿಕೊಳ್ಳುವ ರಾಜಸ್ತಾನ, ಉತ್ತರಪ್ರದೇಶ, ಬಿಹಾರ ಮತ್ತು ಮಹಾರಾಷ್ಟ್ರದಲ್ಲಿ ಇದು 60%ವನ್ನೂ ದಾಟುತ್ತದೆ. ಕರ್ನಾಟಕದಕ್ಕೂ ಇದು 60%ದ ಸಮೀಪ ಬರುತ್ತದೆ.

ಕೂಲಿ ಪಾವತಿಯಲ್ಲಿ ವಿಳಂಬ

ಇದು ಈ ಯೋಜನೆಯನ್ನು ಆರಂಭದಿಂದಲೂ ಬಾಧಿಸುತ್ತಿರುವ ಸಮಸ್ಯೆ. ಈ ಗ್ರಾಮೀಣ ಬಡವರು ಕೆಲಸ ಮಾಡಿದ ಮೇಲೂ ಅದಕ್ಕೆ ಕೂಲಿಗಾಗಿ ಕಾಯುವ ಪರಿಸ್ಥಿತಿಯನ್ನು ಸರಿಪಡಿಸಲು ಸರಕಾರಗಳು ಗಂಭೀರ ಪ್ರಯತ್ನಗಳನ್ನು ನಡೆಸಿಲ್ಲ.

ಈ ಕೂಲಿ ಪಾವತಿ ವಿಳಂಬ ಎರಡು ಕಾರಣಗಳಿಂದಾಗಿ ಆಗುತ್ತಿದೆ. ಮೊದಲನೆಯದಾಗಿ, ರಾಜ್ಯಗಳಲ್ಲಿ ಪಾವತಿ ಮಾಡಬೇಕಾದ ಮೊತ್ತದ ಲೆಕ್ಕಾಚಾರದಲ್ಲಿ ವಿಳಂಬ ಮತ್ತು ಎರಡನೆಯದಾಗಿ, ಹೀಗೆ ರಾಜ್ಯಗಳು ತಯಾರಿಸಿದ ಹಣ ವರ್ಗಾವಣೆ ಕೋರಿಕೆಗಳನ್ನು ಪರಿಶೀಲಿಸಿ ಕೆಲಸಗಾರರ ಖಾತೆಗೆ ವರ್ಗಾಯಿಸುವಲ್ಲಿ ಕೇಂದ್ರ ಸರಕಾರದ ವಿಳಂಬ. ಹೀಗೆ ವಿವಿಧ ರಾಜ್ಯಗಳಲ್ಲಿ 200 ಕೋಟಿ ರೂ.ಗಳಿಂದ 1000 ಕೋಟಿ ರೂ.ಗಳ ವರೆಗೆ ಕೂಲಿ ಪಾವತಿ ಬಾಕಿಯಿದೆ ಎಂದು ಸರಕಾರದ ದಾಖಲೆಗಳಿಂದ ಸಂಗ್ರಹಿಸಿದ ಮಾಹಿತಿಗಳು ತೋರಿಸುತ್ತವೆ.

ಡಿಸೆಂಬರ್ 14 ರಂದು ಲೋಕಸಭೆಗೆ ನೀಡಿದ ಮಾಹಿತಿಗಳ ಪ್ರಕಾರ ದೇಶಾದ್ಯಂತ ಮನರೇಗ ಕೆಲಸಗಾರರು ಒಟ್ಟು 4447.72 ಕೋಟಿ ರೂ.ಗಳಷ್ಟು ಕೂಲಿಪಾವತಿಗೆ ಕಾಯುತ್ತಿದ್ದಾರೆ. ಮನರೇಗ ಕಾಮಗಾರಿಗಳಿಗೆ ಬೇಕಾದ ವಸ್ತುಗಳಿಗೆ ಪಾವತಿ ಮಾಡದೆ ಬಾಕಿಯಿರುವ ಮೊತ್ತ ನವಂಬರ್ 30ರ ವೇಳೆಗೆ 3207.43 ಕೋಟಿ. ಇದು ಬಹುಪಾಲು ಕೇಂದ್ರ ಸರಕಾರದಿಂದ ಈ ಯೋಜನೆಗೆ ನಿಧಿ ಬಿಡುಗಡೆಯಲ್ಲಿ ಆಗುವ ವಿಳಂಬದಿಂದಾಗಿ ಎಂದು ಹೇಳಲಾಗಿದೆ.

ಗ್ರಾಮೀಣ ಬಡವರ ಮೇಲೆ ಅಘೋಷಿತ ಯುದ್ಧ–ಬೃಂದಾ ಕಾರಟ್



ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಮೇಲೆ ಇಂತಹ ದಾಳಿಯ ವಿರುದ್ಧ ದಿಲ್ಲಿಯ ಜಂತರ್‌ಮಂತರ್‌ನಲ್ಲಿ ಅದರಲ್ಲಿ ಕೆಲಸ ಮಾಡುವವರು 100ದಿನಗಳ ಧರಣಿ ಸತ್ಯಾಗ್ರಹ ನಡೆಸುತ್ತಿದ್ದಾರೆ. ಅವರಿಗೆ ಸೌಹಾರ್ದ ವ್ಯಕ್ತಪಡಿಸುತ್ತ, ಇದು ಗ್ರಾಮೀಣ ಬಡವರ ಕಾನೂನು ಮತ್ತು ಸಂವಿಧಾನಿಕ ಹಕ್ಕುಗಳ ಮೇಲೆ ಮೋದಿ ಸರಕಾರ ನಡೆಸುತ್ತಿರುವ ಅಘೋಷಿತ ಯುದ್ಧ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ತೀವ್ರವಾಗಿ ಟೀಕಿಸಿದ್ದಾರೆ.

ದಶಕಗಳ ಹೋರಾಟಗಳ ಮೂಲಕ ರೂಪುಗೊಂಡಿರುವ ಹೆಚ್ಚಿನ ಕಾನೂನುಗಳನ್ನು ಕಳಚಿ ಹಾಕುವುದು ಈ ಸರಕಾರದ ಅಜೆಂಡಾದಲ್ಲಿರುವ ಪ್ರಮುಖ ನಡೆ. **ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಕಾನೂನಿನ ಆದೇಶ ಇರುವುದರಿಂದಾಗಿ ಅದನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಲು ಈ ಸರಕಾರಕ್ಕೆ ಇದುವರೆಗೆ ಸಾಧ್ಯವಾಗಿಲ್ಲ ಅಷ್ಟೇ** ಎಂದಿರುವ ಬೃಂದಾ ಕಾರಟ್ ಈ ಯೋಜನೆಯ ಅನುಷ್ಠಾನದಲ್ಲಿ ಇರುವ ಮೂರು ಆತಂಕಗಳೆಂದರೆ–ಇತ್ತೀಚಿನ 33% ಬಜೆಟ್ ಕಡಿತ, ಕೆಲಸ ಕೇಳುತ್ತಿರುವವರನ್ನು ದೂರ ತಳ್ಳುವ ಪ್ರಯತ್ನ ಮತ್ತು ಶೋಚನೀಯ ಕೂಲಿ ಎಂದು ಹೇಳಿದರು.

ಬೇಡಿಕೆ ಬಂದಂತೆ ಹಣವನ್ನು ಈ ಯೋಜನೆಗೆ ಒದಗಿಸಲಾಗುವುದು ಎಂಬ ಸರಕಾರದ ಕಥನ ಶುದ್ಧ ಸುಳ್ಳು ಎಂದ ಅವರು ಸರಾಸರಿ ರಾಷ್ಟ್ರೀಯ ಕೂಲಿಯನ್ನು ಪರಿಷ್ಕರಿಸುವ ಅಗತ್ಯವೂ ಇದೆ ಎಂದು ಹೇಳಿದರು.

"ಪ್ರಧಾನಿ ಮೋದಿಯವರನ್ನು ಒಮ್ಮೆ ನಂಬಿ ಮತ್ತು ಯೆಡ್ಯೂರಪ್ಪನವರನ್ನು ಒಮ್ಮೆ ನಂಬಿ.. ನಾವು ಕರ್ನಾಟಕವನ್ನು ಭ್ರಷ್ಟಾಚಾರ–ಮುಕ್ತ ಮಾಡುವ ಮತ್ತು ದಕ್ಷಿಣ ಭಾರತದಲ್ಲಿ ನಂಬರ್ ಒನ್ ರಾಜ್ಯವಾಗಿ ಮಾಡುವ ಸರಕಾರವನ್ನು ಕೊಡುತ್ತೇವೆ" ಎಂದು ಈಗ ರಾಜ್ಯಕ್ಕೆ ಮತ್ತೆ–ಮತ್ತೆ ಭೇಟಿ ಕೊಡುತ್ತಿರುವ ಕೇಂದ್ರ ಗೃಹಮಂತ್ರಿಗಳು ಹೇಳಿ ದಿಲ್ಲಿಗೆ ಹಿಂತಿರುಗುತ್ತಿದ್ದಂತೆ ಅವರ ಪಕ್ಷದ ಚನ್ನಗಿರಿ ಶಾಸಕರ ಪುತ್ರನ ಮನೆಗೆ ಲೋಕಾಯುಕ್ತ ದಾಳಿ ನಡೆದಿದೆ. ಇದುವರೆಗೆ 7.72 ಕೋಟಿ ರೂ. ನಗದು, ಇದರಲ್ಲಿ 1.62 ಕೋಟಿ ರೂ. ಶಾಸಕರ ಕಚೇರಿಯಿಂದ ವಶಪಡಿಸಿಕೊಂಡಿದ್ದಾರೆ ಎಂದು ವರದಿಯಾಗಿದೆ. ಅಗತ್ಯ ಬಿದ್ದರೆ ಶಾಸಕರನ್ನೂ ವಿಚಾರಣೆಗೆ ಒಳಪಡಿಸಲಾಗುವದು ಎಂದು ಲೋಕಾಯುಕ್ತರು ಹೇಳಿರುವುದಾಗಿ ವರದಿಯಾಗಿದೆ.

ಈಗಾಗಲೇ 40% ಭ್ರಷ್ಟಾಚಾರ ಜನಜನಿತವಾಗಿರುವಾಗ ಇದೊಂದು ಅಪವಾದವಷ್ಟೇ ಎಂಬ 'ಸ್ಪಷ್ಟೀಕರಣ' ಬರುತ್ತದೋ ಕಾದು ನೋಡಬೇಕು!

ಭ್ರಷ್ಟಾಚಾರ ಮುಕ್ತವಾಗಿರುತ್ತದೆ!



ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಸೌತ್ ಫಸ್ಟ್

ಜಿಡಿಪಿ ದರದಲ್ಲಿ, ತಯಾರಿಕಾ ವಲಯದಲ್ಲಿ ನಿಧಾನಗತಿ; ಉದ್ಯೋಗಹೀನತೆಯಲ್ಲಿ ಹೆಚ್ಚಳ

2022–23 ಹಣಕಾಸಿನ ವರ್ಷದ ಮೂರನೇ ತ್ರೈಮಾಸಿಕದಲ್ಲಿ ಅಂದರೆ ಅಕ್ಟೋಬರ್–ಡಿಸೆಂಬರ್ ಅವಧಿಯಲ್ಲಿ ಭಾರತದ ಅರ್ಥವ್ಯವಸ್ಥೆ 4.4% ದರದಲ್ಲಿ ಏರಿದೆ ಎಂದು ಫೆಬ್ರುವರಿ 28ರಂದು ಪ್ರಕಟಿಸಿರುವ ಅಧಿಕೃತ ಅಂಕಿ–ಅಂಶಗಳು ಹೇಳುತ್ತಿವೆ. ಅಂದರೆ ಮೊದಲ ತ್ರೈಮಾಸಿಕದಲ್ಲಿ 13.2% ಇದ್ದದ್ದು 2ನೇ ತ್ರೈಮಾಸಿಕದಲ್ಲಿ 6.3% ಕ್ಕೆ ಇಳಿದು, ಈಗ 4.44%ಕ್ಕೆ ಇಳಿದಿರುವುದು ಒಟ್ಟಾರೆಯಾಗಿ, ನಮ್ಮ ಅರ್ಥವ್ಯವಸ್ಥೆಯ ಬೆಳವಣಿಗೆ ಗಮನಾರ್ಹವಾಗಿ ನಿಧಾನಗೊಂಡಿದೆ ಎಂಬುದನ್ನು ತೋರಿಸುತ್ತದೆ. ಹಿಂದಿನ ವರ್ಷದ 3ನೇ ತ್ರೈಮಾಸಿಕದಲ್ಲಿ ಬೆಳವಣಿಗೆ ದರ 5.2% ಇತ್ತು.

ತಯಾರಿಕಾ ವಲಯವೂ ಸತತ ಎರಡನೇ ತ್ರೈಮಾಸಿಕದಲ್ಲೂ ಇಳಿಕೆ ತೋರಿಸಿದೆ; 2ನೇ ತ್ರೈಮಾಸಿಕದಲ್ಲಿ ಇದು (–)3.6% ಇತ್ತು, 3ನೇ ತ್ರೈಮಾಸಿಕದಲ್ಲಿ (–)1.1% .

ಇದು ಪ್ರಕಟವಾದ ಮರುದಿನವೇ ಫೆಬ್ರುವರಿ ತಿಂಗಳ ತಯಾರಿಕಾ ವಲಯದ ಬೆಳವಣಿಗೆ ಸೂಚ್ಯಂಕವಾದ ಪಿಎಂಐ ಫೆಬ್ರುವರಿ ತಿಂಗಳಲ್ಲಿ ಈ ವಲಯದ ಬೆಳವಣಿಗೆ ಕಳೆದ ನಾಲ್ಕು ತಿಂಗಳಲ್ಲೇ ಅತ್ಯಂತ ನಿಧಾನಗತಿಗಿಳಿದಿದೆ ಎಂದು ಹೇಳುತ್ತಿದೆ. ಅಂದರೆ ತಯಾರಿಕಾ ವಲಯದಲ್ಲಿನ ಆತಂಕ ಮುಂದುವರೆಯುತ್ತಿದೆ.

ತಯಾರಿಕಾ ವಲಯವೇ ಉದ್ಯೋಗ ನಿರ್ಮಾಣದ ಪ್ರಮುಖ ವಲಯವಾದ್ದರಿಂದ ಸಹಜವಾಗಿಯೇ ಉದ್ಯೋಗಹೀನತೆಯ ದರ ಫೆಬ್ರುವರಿಯಲ್ಲಿ 7.45% ಕ್ಕೇರಿದೆ ಎಂದು ಸಿಎಂಐಇ ಹೇಳಿದೆ.

3ನೇ ತ್ರೈಮಾಸಿಕದ ಜಿಡಿಪಿ ಏರಿಕೆ ದರ ನಿರೀಕ್ಷೆಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ನಿಧಾನಗೊಂಡಂತೆ ಕಾಣಲು 2021–22ರ ಜಿಡಿಪಿ ದರವನ್ನು ಈ ಹಿಂದೆ ಪ್ರಕಟಿಸಿದ್ದ 8.7% ಬದಲು ಈಗ 9.1% ಎಂದು ಪರಿಷ್ಕರಿಸಿರುವುದು ಕಾರಣ ಎಂದು ಸರಕಾರದ ವಕ್ತಾರರು ಸಮಜಾಯಿಷಿ ಕೊಡುತ್ತಿದ್ದಾರೆ. ಆದರೂ ಹೆಚ್ಚಿನ ಹಣದುಬ್ಬರ ಮತ್ತು ಕ್ಷೀಣಿಸುತ್ತಿರುವ ಬೇಡಿಕೆಯ ಪ್ರಮಾಣವೂ ತಮ್ಮ ಕೊಡುಗೆ ನೀಡಿವೆ ಎಂದು ಹೆಚ್ಚಿನ ವಿಶ್ಲೇಷಕರು ಹೇಳುತ್ತಿದ್ದಾರೆ.

ಈ ಹಣಕಾಸಿನ ವರ್ಷದ ಒಟ್ಟಾರೆ ಜಿಡಿಪಿ ಬೆಳವಣಿಗೆ ದರ ಹಿಂದೆ ಅಂದಾಜು ಮಾಡಿದ 7% ಕ್ಕಿಂತ ಕಡಿಮೆ ಇರುತ್ತದೆ ಎಂದು ಭಯಪಡಲು ಕಾರಣಗಳೇನೂ ಇಲ್ಲ ಎಂದು ಸರಕಾರದ ವಕ್ತಾರರು ಹೇಳುತ್ತಿದ್ದಾರೆ. ಆದರೆ ಈ ಬಗ್ಗೆಯೂ ಸಂದೇಹಗಳು ಇಲ್ಲದಿಲ್ಲ.

ರಿಜರ್ವ್ ಬ್ಯಾಂಕ್ ಈ ಮೊದಲೇ ಅದು 6.8% ಇರುತ್ತದೆ ಎಂದು ಅಂದಾಜು ಮಾಡಿತ್ತು. ಮತ್ತು ಐಎಂಎಫ್ ಅಂದಾಜು ಕೂಡ 6.8%. ವಿಶ್ವ ಬ್ಯಾಂಕ್ 6.9% ಎಂದು ಅಂದಾಜು ಮಾಡಿದೆ.

ಹೂಡಿಕೆ ಮತ್ತು ಜಿಡಿಪಿ ಅನುಪಾತವೂ 2ನೇ ತ್ರೈಮಾಸಿಕದಲ್ಲಿ 34 ಇದ್ದದ್ದು 3ನೇ ತ್ರೈಮಾಸಿಕದಲ್ಲಿ 32ಕ್ಕೆ ಇಳಿದಿರುವುದು ಕೂಡ ಬಹಳ ಆತಂಕದ ವಿಷಯ, ಈ ಹಿನ್ನೆಲೆಯಲ್ಲಿ ಆಂತರಿಕ ಬೇಡಿಕೆಯ ಪ್ರಮಾಣ ಹೆಚ್ಚುವುದು ಬಹಳ ಅಗತ್ಯವಾಗಿದೆ ಎಂದು ಎಂದು ತಜ್ಞರು ಹೇಳುತ್ತಿದ್ದಾರೆ.

ಆದರೆ ಸರಕಾರ ತದ್ವಿರುದ್ಧವಾದುದನ್ನೇ ಮಾಡುತ್ತಿರುವಂತಿದೆ. ಮಾರ್ಚ್ 1 ರಿಂದ ಗೃಹ ಬಳಕೆ ಮತ್ತು ವಾಣಿಜ್ಯ ಎಲ್‌ಪಿಜಿ ದರಗಳಲ್ಲಿ ಮತ್ತೆ ಏರಿಕೆ ಮಾಡಿರುವುದು ಹಣದುಬ್ಬರವನ್ನು ಮತ್ತಷ್ಟು ಏರಿಸುತ್ತದೆ ಮತ್ತು ಜನಗಳ ಖರೀದಿ ಶಕ್ತಿಯನ್ನು ಮತ್ತಷ್ಟು ಇಳಿಸುತ್ತದೆಯಾದ್ದರಿಂದ ಆಂತರಿಕೆ ಬೇಡಿಕೆಯ ಪ್ರಮಾಣವನ್ನು ಹೆಚ್ಚಿಸುವ ಬದಲು ಮತ್ತಷ್ಟು ಕಡಿಮೆ ಇಳಿಸುವ ಸಂಭವವೇ ಹೆಚ್ಚಿರುವಂತೆ ಕಾಣುತ್ತದೆ. ಎಲ್‌ಪಿಜಿ ದರ ಏರಿಕೆಯ ಪರಿಣಾಮಗಳು ಆಗಲೇ ಕಾಣ ಬರಲಾರಂಭಿಸಿವೆ.

ಜಿಡಿಪಿ ಬೆಳವಣಿಗೆ ದರ ನಿಧಾನಗೊಂಡಿರುವುದು, ಅದರಲ್ಲೂ ಉದ್ಯೋಗ ಒದಗಿಸುವ ತಯಾರಿಕಾ ವಲಯ ಬೆಳವಣಿಗೆ ತೋರಿಸುವ ಬದಲು ಇನ್ನೂ ಸಂಕುಚನಗೊಂಡೇ ಇರುವುದು ಆರ್ಥಿಕ ಚೇತರಿಕೆ ಚೆನ್ನಾಗಿದೆ ಎಂಬ ಮೋದಿ ಪ್ರಚಾರದ ಟೊಳ್ಳನ್ನು ಬಯಲಿಗೆಳೆಯುತ್ತಿದೆ ಎಂದಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ರಾಷ್ಟ್ರೀಯ ಆಸ್ತಿಗಳ ಲೂಟಿಯನ್ನು ನಿಲ್ಲಿಸಿ, ನಿಮ್ಮ ಬಂಟರ ಲಾಭಗಳನ್ನು ಹೆಚ್ಚಿಸುವುದನ್ನು ನಿಲ್ಲಿಸಿ ಜನಗಳ ಖರೀದಿ ಶಕ್ತಿಯನ್ನು ಹೆಚ್ಚಿಸಿ, ಉದ್ಯೋಗ ನಿರ್ಮಿಸುವ ಮತ್ತು ಆಂತರಿಕ ಬೇಡಿಕೆಯನ್ನು ಹೆಚ್ಚಿಸುವ ಸಾರ್ವಜನಿಕ ಕಾಮಗಾರಿಗಳಲ್ಲಿ ಹೂಡಿಕೆ ಮಾಡಿ ಎಂದು ಆಗ್ರಹಿಸಿದ್ದಾರೆ.

2014ರಲ್ಲಿ ಮೋದಿ ಪ್ರಧಾನಿಯಾಗಿ ಆಯ್ಕೆಯಾದಾಗ ಅದಾನಿಯ ಖಾಸಗಿ ವಿಮಾನದಲ್ಲಿ ದೆಹಲಿಗೆ ತೆರಳಿದ್ದರು. ಒಂದು ದಶಕಕ್ಕೂ ಕಡಿಮೆ ಅವಧಿಯಲ್ಲಿ, ಅದಾನಿ ಸಂಪತ್ತು 7 ಶತಕೋಟಿ ಡಾಲರಿನಿಂದ 120 ಶತಕೋಟಿ ಡಾಲರಿಗೆ ನೆಗೆಯಿತು, ಆತನನ್ನು ವಿಶ್ವದ ಮೂರನೇ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿ ಮಾಡಿತು. ಆದರೆ ಭಾರತದ ಆರ್ಥಿಕ ಬೆಳವಣಿಗೆಯ ಹಿಂದೆ ಅದಾನಿ ಸಮೂಹದ ಯಶಸ್ಸು ಇದೆ ಎಂಬ ಭ್ರಮೆ ಜನವರಿ 24 ರಂದು ಹರಿಯಿತು. ಮೋದಿ ಮೌನವಾಗಿದ್ದಾರೆ. ಇದರಿಂದ ಅವರ ಜನಪ್ರಿಯತೆಗೆ ಕುಂದಾದಂತೆ ಕಂಡುಬರದಿದ್ದರೂ, ಇದು ಅವರ ಆರ್ಥಿಕತತ್ವಶಾಸ್ತ್ರದ ಒಂದು ಪ್ರಮುಖ ವಿಚಾರವನ್ನು ಹುಸಿಗೊಳಿಸಿದೆ. ಕೆಲವೇ ಅಧಿಕಾರ-ಪೋಷಿತ ಉದ್ಯಮಿ ಸಮೂಹಗಳ ಮುಂದೆ ಅನಂತ ಹಣಕಾಸು ಪ್ರಯೋಜನಗಳು ಮತ್ತು ನಿಯಂತ್ರಕ ರಿಯಾಯ್ತಿಗಳನ್ನು ಧಾರಾಳವಾಗಿ ಸುರಿಯುವುದು, ಒಂದು ವಿಶ್ವಾಸಾರ್ಹ ಅಭಿವೃದ್ಧಿ ತಂತ್ರವಲ್ಲ ಎಂದು ಕಂಡುಕೊಂಡಂತಾಗಿದೆ.



ಮೋದಿ ಭಾರತದಲ್ಲಿ ಅದಾನಿ ಏಳು-ಬೀಳು ಬಂಟತನದ ಕೇಡುಗಳ ಎಚ್ಚರಿಕೆಯ ಕತೆ

ಪ್ರೊ. ಜಯತಿ ಘೋಷ್





ಕಳೆದ ಎರಡು ದಶಕಗಳಲ್ಲಿ, ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಭಾರತೀಯ ಬಹುಕೋಟ್ಯಾಧಿಪತಿ ಗೌತಮ್ ಅದಾನಿ ಹೊಂದಿರುವ ನಿಕಟ ಸಂಬಂಧಗಳು ಈ ಗುಜರಾತಿ ಉದ್ಯಮಿ ಏಷ್ಯಾದ ಅತ್ಯಂತ ಶ್ರೀಮಂತ ವ್ಯಕ್ತಿಯಾಗಲು ಸಹಾಯ ಮಾಡಿವೆ. ಆತನ ಉಲ್ಕಾವೇಗದ ಉತ್ಕರ್ಷ, ಕೆಲವು ರೀತಿಗಳಲ್ಲಿ ಆತನ ರಾಜಕೀಯ ಗುರುವಿನ ಉತ್ಕರ್ಷವನ್ನೂ ಮರೆಮಾಚಿದ್ದು, ಆತನನ್ನು ಭಾರತದ ಬೆಳವಣಿಗೆಯ ಕತೆಯ ಪ್ರತೀಕವಾಗಿ ಮಾಡಿ ಬಿಟ್ಟಿತು. ಆದರೆ ಈಗ ವಂಚನೆ ಮತ್ತು ಶೇರು ಮಾರುಕಟ್ಟೆಯಲ್ಲಿ ಕೈಚಳಕ ನಡೆಸಿರುವ ಆರೋಪಗಳು ಆತನ ಹೆಸರು ಹೊತ್ತ ಉದ್ಯಮ ಸಾಮ್ರಾಜ್ಯ ಮಂಡಿಯೂರುವಂತೆ ಮಾಡಿವೆ. ಆತನ ಉದ್ಯಮ ಸಮೂಹ ಕೆಲವೇ ದಿನಗಳಲ್ಲಿ 110 ಶತಕೋಟಿ ಡಾಲರಿನಷ್ಟು ಮಾರುಕಟ್ಟೆ ಮೌಲ್ಯದಲ್ಲಿ ಕಳೆದುಕೊಂಡಿದ್ದು, ಅದಾನಿ ಈಗ ಮೋದಿ ಭಾರತದಲ್ಲಿ ಬಂಟತನದ ಕೇಡುಗಳನ್ನು ಕುರಿತು ಎಚ್ಚರಿಕೆ ಕೊಡುವ ಕತೆಯಾಗಿ ಬಿಟ್ಟಿದ್ದಾರೆ.

ಅದಾನಿ ಮತ್ತು ಮೋದಿ ನಡುವಿನ ಪಾಲುದಾರಿಕೆಯು 2002 ರಷ್ಟು ಹಿಂದಿನದು, ಆಗ ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದ ಮೋದಿ ಆ ರಾಜ್ಯದಲ್ಲಿ ಸಾವಿರಕ್ಕೂ ಹೆಚ್ಚು ಜನರನ್ನು ಕೊಂದ ಮುಸ್ಲಿಂ-ವಿರೋಧಿ ಜನಜಂಗುಳಿಗಳನ್ನು ತಡೆಯಲು ವಿಫಲರಾದರೆಂದು ಭಾರೀ ಟೀಕೆಗಳನ್ನು ಎದುರಿಸುತ್ತಿದ್ದರು. ಆ ಹತ್ಯಾಕಾಂಡದ ನಂತರ, ಮೋದಿಯನ್ನು ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೆ ಪ್ರವೇಶಿಸದಂತೆ ನಿರ್ಬಂಧಿಸಲಾಯಿತು ಮತ್ತು ಭಾರತದ ದೊಡ್ಡ ಉದ್ಯಮಿಗಳು ಬಹುಪಾಲು ಅವರ ಕೈಬಿಟ್ಟಿದ್ದರು. ಆಗ ಮೋದಿ ಮತ್ತು ಅವರ ಭಾರತೀಯ ಜನತಾ ಪಕ್ಷವನ್ನು (ಬಿಜೆಪಿ) ಬೆಂಬಲಿಸುವುದನ್ನು ಮುಂದುವರಿಸಿದ ಅದಾನಿ ತನ್ನ ನಿಷ್ಠೆಗೆ ಉತ್ತಮ ಪ್ರತಿಫಲವನ್ನೇ ಪಡೆದರು. ಮುಂದಿನ ದಶಕದಲ್ಲಿ ಅದಾನಿ ಸಮೂಹವು ಉಸಿರುಗಟ್ಟಿಸುವ ವೇಗದಲ್ಲಿ ಬೆಳೆಯಿತು, ರಾಜ್ಯ ಸರ್ಕಾರದ ಅನೇಕ ಗುತ್ತಿಗೆಗಳನ್ನು ಗಳಿಸಿಕೊಂಡಿತು. ಆಹಾರ, ಆಮದು ಮತ್ತು ರಫ್ತು, ಕಲ್ಲಿದ್ದಲು ವ್ಯಾಪಾರ ಮತ್ತು ಗಣಿಗಾರಿಕೆ, ವಿದ್ಯುತ್, ತೈಲ ಮತ್ತು ಅನಿಲ ಪರಿಶೋಧನೆ ಮತ್ತು ಮೂಲಸೌಕರ್ಯ ಕ್ಷೇತ್ರಗಳಿಗೆ ವಿಸ್ತರಿಸಿತು.

ಕ್ರಮೇಣ ಮುಂದಿನ ವರ್ಷಗಳಲ್ಲಿ, ಅವರ ನಡುವಿನ ಸಂಬಂಧವು ಹೆಚ್ಚೆಚ್ಚು ಸಹಜೀವನದ ರೂಪ ಪಡೆಯಿತು. 2014ರಲ್ಲಿ ಮೋದಿ ಪ್ರಧಾನಿಯಾಗಿ ಆಯ್ಕೆಯಾದಾಗ ಅದಾನಿಯ ಖಾಸಗಿ ವಿಮಾನದಲ್ಲಿ ದೆಹಲಿಗೆ ತೆರಳಿದ್ದರು. ಮೋದಿಯೊಂದಿಗಿನ ಅದಾನಿ ಸಾಮೀಪ್ಯವು ಅವರ ಕಂಪನಿಗಳಿಗೆ ಲಾಭದಾಯಕ ಸರ್ಕಾರಿ ಗುತ್ತಿಗೆಗಳನ್ನು ಮತ್ತು ಸಾರ್ವಜನಿಕ ಮತ್ತು ಖಾಸಗಿ ವಲಯದ ಸಾಲಗಳನ್ನು ದೇಶೀಯ ಮತ್ತು ವಿದೇಶಿ ಉದ್ಯಮ ಯತ್ನಗಳಿಗೆ ಗೆಲ್ಲಲು ಸಹಾಯ ಮಾಡಿತು. ಇಂತಹ ಪ್ರಯತ್ನಗಳಲ್ಲಿ ಕೆಲವು ಅತ್ಯಂತ ವಿವಾದಾತ್ಮಕವಾದವುಗಳೂ ಇದ್ದವು. ಸರ್ಕಾರವು ಮತ್ತೆ ಮತ್ತೆ, ಅದಾನಿ ವ್ಯವಹಾರಗಳಿಗೆ ಲಾಭವಾಗುವ ರೀತಿಯಲ್ಲಿ ನಿಯಮಾವಳಿಗಳನ್ನು ಸಡಿಲಗೊಳಿಸಿತು ಅಥವಾ ನಿಯಮಗಳನ್ನು ತಿದ್ದುಪಡಿ ಮಾಡಿತು. ಉದಾಹರಣೆಗೆ, 2017 ರಲ್ಲಿ, ಸರ್ಕಾರವು ಗೊಡ್ಡಾದಲ್ಲಿನ ಅದಾನಿಯ ವಿದ್ಯುತ್ ಸ್ಥಾವರವನ್ನು ನಿಯಮಗಳನ್ನು ತಿರುಚಿ ವಿಶೇಷ ಆರ್ಥಿಕ ವಲಯವೆಂದು ಹೆಸರಿಸಿ, ಆ ಸಮೂಹಕ್ಕೆ 5 ಶತಕೋಟಿ ರೂ.ಗಳ(6ಕೋಟಿ ಡಾಲರ್) ಬಕ್ಷೀಷನ್ನು ಕೊಟ್ಟಿತು. 2019 ರಲ್ಲಿ, ಮೋದಿ ಸರ್ಕಾರವು ಅದಾನಿಗೆ ಹೊಸದಾಗಿ ಆರು ಖಾಸಗೀಕರಣಗೊಂಡ ವಿಮಾನ ನಿಲ್ದಾಣಗಳನ್ನು ನಿರ್ವಹಿಸುವ ಹಕ್ಕನ್ನು ಈ ವಲಯದಲ್ಲಿ ಅದಾನಿ ಕಂಪನಿಗೆ ಏನೇನೂ ಅನುಭವವಿಲ್ಲದಿದ್ದರೂ, ಹಸ್ತಾಂತರಿಸಿತು.

ಮೋದಿ ಯೋಜನೆಯ ಪ್ರಚಾರ ಪುರುಷ

ಅದಾನಿ ಸಮೂಹದ ಕ್ಷಿಪ್ರ ಬೆಳವಣಿಗೆ, ಜೊತೆಗೆ ಅದರ ಶೇರು ಬೆಲೆಗಳಲ್ಲಿ ಅದ್ಭುತ ಏರಿಕೆ ಅನುವು ಮಾಡಿಕೊಟ್ಟ ಮಹತ್ವಾಕಾಂಕ್ಷೆಯ ಸಾಲ-ಚಾಲಿತ ಹೂಡಿಕೆ ಕಾರ್ಯಕ್ರಮವು ಕಂಪನಿಯನ್ನು ಸರ್ಕಾರದ ಬಂಡವಾಳ-ಹೂಡಿಕೆಗೆ ಒತ್ತು, ದತ್ತಾಂಶ-ಉದ್ಯಮ ವಿಸ್ತರಣೆ ಮತ್ತು 'ನಿವ್ವಳ-ಶೂನ್ಯ ಪರಿವರ್ತನೆ'ಯ ಯೋಜನೆಗಳ ಪ್ರಚಾರ ಪುರುಷನಾಗಿ ಮಾಡಿತು. ಒಂದು ದಶಕಕ್ಕೂ ಕಡಿಮೆ ಅವಧಿಯಲ್ಲಿ, ಅದಾನಿ ಸಂಪತ್ತು 7 ಶತಕೋಟಿ ಡಾಲರಿನಿಂದ 120 ಶತಕೋಟಿ ಡಾಲರಿಗೆ ನೆಗೆಯಿತು, ಆತನನ್ನು ವಿಶ್ವದ ಮೂರನೇ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿ ಮಾಡಿತು (ಜನವರಿ ಅಂತ್ಯದಲ್ಲಿ ಆತನ ಸಮೂಹದ ಷೇರುಗಳು ಕುಸಿಯಲು ಪ್ರಾರಂಭಿಸುವವರೆಗೆ, ನಿವ್ವಳ ಮೌಲ್ಯವನ್ನು ಅರ್ಧದಷ್ಟು ಕುಗ್ಗಿಸುವವರೆಗೆ).

ಆತನ ಆರ್ಥಿಕ ಶಕ್ತಿಯು ಬೆಳೆಯುತ್ತಿದ್ದಂತೆ, ತನ್ನ ವ್ಯವಹಾರಗಳ ಮತ್ತು ಮೋದಿಯವರ ವಿರುದ್ಧ ಟೀಕೆಗಳನ್ನು ಹತ್ತಿಕ್ಕುವ ಪ್ರಯತ್ನಗಳಲ್ಲಿ ಅದಾನಿ ಹೆಚ್ಚೆಚ್ಚು ಆಕ್ರಾಮಕತೆ ತೋರಿದರು, ಅದಾನಿ ಸಮೂಹ ಅಧಿಕಾರಸ್ಥರಿಂದ ಪಡೆಯುತ್ತಿದ್ದ ಆದ್ಯತೆಯ ನಡೆಗಳ ಬಗ್ಗೆ ವರದಿ ಮಾಡಿದ ಪತ್ರಕರ್ತರು ಮತ್ತು ಮಾಧ್ಯಮಗಳ ವಿರುದ್ಧ ಅನೇಕ ಮೊಕದ್ದಮೆಗಳನ್ನು ಹೂಡಿದರು. ಕಳೆದ ವರ್ಷದ ಕೊನೆಯಲ್ಲಿ, ಅದಾನಿ ಅದುವರೆಗೆ ಪ್ರಸಾರ ಮಾಧ್ಯಮದಲ್ಲಿ ಮೋದಿಯ ಟೀಕಾಕಾರರಿಗೆ ಉಳಿದಿದ್ದ ಕೆಲವೇ ವೇದಿಕೆಗಳಲ್ಲಿ ಒಂದಾಗಿದ್ದ ಎನ್‌ಡಿಟಿವಿಯ ವೈಷಮ್ಯಭರಿತ ಸ್ವಾಧೀನವನ್ನು ಪ್ರಾರಂಭಿಸಿದರು.

ಆ ಕ್ಷಣದಲ್ಲಿ, ಅದಾನಿ ಯಾವುದೇ ತಪ್ಪು ಮಾಡಲಾರರು ಎಂದು ಅನಿಸುವಂತಾಗಿತ್ತು. ಆತನ ಸಾಮ್ರಾಜ್ಯದ ಸಾಲ-ಪ್ರೇರಿತ ಬೆಳವಣಿಗೆ ಮತ್ತು ಅವಾಸ್ತವಿಕ ಶೇರು ಮೌಲ್ಯಮಾಪನದ ಬಗ್ಗೆ, ಆತನ ಆರ್ಥಿಕ, ರಾಜಕೀಯ ಮತ್ತು ಮಾಧ್ಯಮ ಶಕ್ತಿಯ ಬಗ್ಗೆ ಏನೇ ಆತಂಕಗಳಿದ್ದರೂ- ಭಾರತದ ಆರ್ಥಿಕ ಬೆಳವಣಿಗೆಯ ಹಿಂದೆ ಅದಾನಿ ಸಮೂಹದ ಯಶಸ್ಸು ಇದೆ ಎಂಬ ವ್ಯಾಪಕ ಗ್ರಹಿಕೆ ಆತನನ್ನು ಯಾರೂ ತಡೆಯಲಾರರು ಎಂಬ ಭಾವನೆಯನ್ನು ಮೂಡಿಸಿತ್ತು.


ಭ್ರಮೆ ಹರಿಯಿತು

ಆ ಭ್ರಮೆ ಜನವರಿ 24 ರಂದು ನುಚ್ಚುನೂರಾಯಿತು. ಅಲ್ಪಾವಧಿ ಶೇರುಮಾರಾಟ ವ್ಯವಹಾರದಲ್ಲಿರುವ ಸಂಸ್ಥೆಯಾದ ಹಿಂಡೆನ್ ಬರ್ಗ್ ರಿಸರ್ಚ್ ಈ ಸಮೂಹ "ಕಾರ್ಪೊರೇಟ್ ಇತಿಹಾಸದಲ್ಲಿ ಅತಿ ದೊಡ್ಡ ವಂಚನೆಯಲ್ಲಿ ತೊಡಗಿದೆ" ಎಂದು ಆರೋಪಿಸುವ ವಿಧ್ವಂಸಕಾರಿ ವರದಿಯನ್ನು ಅಂದು ಪ್ರಕಟಿಸಿತು. ಹಿಂಡೆನ್‌ಬರ್ಗ್ ತನ್ನ ಎರಡು ವರ್ಷಗಳ ತನಿಖೆಯ ನಂತರ, ಅದಾನಿ ಸಮೂಹವು "ದಶಕಗಳ ಕಾಲ ಲಜ್ಜೆಗೆಟ್ಟ ಶೇರು ಕೈಚಳಕ ಮತ್ತು ಲೆಕ್ಕಪತ್ರ ವಂಚನೆ ಯೋಜನೆಯಲ್ಲಿ ತೊಡಗಿಕೊಂಡಿದೆ" ಎಂದು ಆರೋಪಿಸಿತು. 38 ಮಾರಿಷಸ್ ಮೂಲದ ಶೆಲ್ ಕಂಪನಿಗಳನ್ನು ಸೂಚಿಸಿ, ಅವನ್ನು ಶೇರು ಬೆಲೆಗಳನ್ನು ಕೃತ್ತಿಮವಾಗಿ ಏರಿಸಲು ಮತ್ತು ಹಣವನ್ನು ಸಾರ್ವಜನಿಕವಾಗಿ ಶೇರು ಮಾರುಕಟ್ಟೆಗಳಲ್ಲಿ ಪಟ್ಟಿಮಾಡಲಾದ ಅದಾನಿ ಸಮೂಹದ ಕಂಪನಿಗಳಿಂದ ಬೇರೆಡೆಗೆ ಸಾಗಿಸಲು ಬಳಸಲಾಗಿದೆ ಎಂದು ಅದು ಆರೋಪಿಸಿದೆ.

ಅದಾನಿ ಸಮೂಹ ಭಾರತೀಯ ರಾಷ್ಟ್ರೀಯವಾದೀ ಭಾವನೆಯ ಮೊರೆ ಹೋಗಿ, ಹಿಂಡೆನ್‌ಬರ್ಗ್ ವರದಿ ಭಾರತದ ಸ್ವಾತಂತ್ರ್ಯ, ಸಂಸ್ಥೆಗಳು ಮತ್ತು ಬೆಳವಣಿಗೆಯ ಕಥಾನಕದ ಮೇಲೆ "ಉದ್ದೇಶ ಪೂರ್ವಕವಾದ ದಾಳಿ" ಎಂದು ಆರೋಪಿಸಿದರೂ, ಶೇರು ಮಾರುಕಟ್ಟೆಯ ಪ್ರತಿಕ್ರಿಯೆ ಕ್ಷಿಪ್ರವಾಗಿತ್ತು, ಮತ್ತು ಮಾರಕವಾಗಿತ್ತು. ಫೆಬ್ರವರಿ ಆರಂಭದಲ್ಲಿ, ಮೂಡೀಸ್(ಶ್ರೇಯಾಂಕ ಸಂಸ್ಥೆ) ಹಲವಾರು ಅದಾನಿ ಸಮೂಹದ ಕಂಪನಿಗಳ ಶ್ರೇಯಾಂಕಗಳನ್ನು ಕೆಳಗಿಳಿಸಿತು ಮತ್ತು ಇನ್ನೊಂದು ಸಂಸ್ಥೆ ಎಂಎಸ್‌ಸಿಐ ಅದಾನಿ ಸಮೂಹದ ನಾಲ್ಕರ ತೂಕ ಪ್ರಮಾಣವನ್ನು ಕಡಿತಗೊಳಿಸಿತು, ಇವು ಈ ಸಮೂಹದ ತೊಂದರೆಗಳನ್ನು ಇನ್ನಷ್ಟು ಹೆಚ್ಚಿಸಿದವು. ಅದಾನಿ ಸಮೂಹ ಹಲವಾರು ವಿಶ್ವಾಸ-ಕುದುರಿಸುವ ಕ್ರಮಗಳನ್ನು ಪ್ರಕಟಿಸಿದರೂ, 110 ಕೋಟಿ ಡಾಲರುಗಳ ಬ್ಯಾಂಕ್ ಸಾಲಗಳನ್ನು ಅವಧಿಗೆ ಮುಂಚಿತವಾಗಿಯೇ ಮರುಪಾವತಿಸಿದ ನಂತರವೂ, ತನ್ನ ಆದಾಯದ ಬೆಳವಣಿಗೆಯ ಗುರಿಗಳನ್ನು ಅರ್ಧಕ್ಕಿಳಿಸಿದರೂ ಮತ್ತು ಯೋಜಿತ ಬಂಡವಾಳ ವೆಚ್ಚಗಳನ್ನು ತಡೆಹಿಡಿದರೂ ಪತನ ಮುಂದುವರೆಯಿತು.

ಮೋದಿ ಮೌನ-ಹಾದಿ ಬದಲಾಗುವುದೇ?

ಆದರೆ ಸ್ವತಃ ಮೋದಿ, ದೇಶದ ವಿರೋಧ ಪಕ್ಷಗಳು ಅವರ ಮೇಲೆ ಬಂಟತನವನ್ನು ಪೋಷಿಸುವ ಆರೋಪ ಮಾಡುತ್ತಿದ್ದಾಗಲೂ, ಮೌನವಾಗಿದ್ದಾರೆ. ಭಾರತದ "ಬಲವಾದ" ನಿಯಂತ್ರಕ ಸಂಸ್ಥೆಗಳು ಪುಟ 15 ಕ್ಕೆ







ವ್ಯಂಗ್ಯಚಿತ್ರ ಕೃಪೆ: ಮಂಜುಲ್, ನ್ಯೂಸ್ ಲಾಂಡ್ರಿ

19.20.21 ಸಮಕಾಲೀನ ವಾಸ್ತವಗಳ ಹೃದಯಸ್ಪರ್ಶಿ ಅನಾವರಣ.....

ಪುಟ 16 ರಿಂದ

ಹೋರಾಟಗಳನ್ನು ರೂಪಿಸುತ್ತಲೇ ಬಂದಿದ್ದಾರೆ. ಅನೇಕ ಸನ್ನಿವೇಶಗಳಲ್ಲಿ ಇಂತಹ ಪ್ರಜಾಸತ್ತಾತ್ಮಕ ಹೋರಾಟಗಳೇ ಅಧಿಕಾರದಲ್ಲಿರುವ ಪಕ್ಷಗಳಿಗೆ ಸವಾಲಾಗಿ ಪರಿಣಮಿಸುತ್ತವೆ. ಕರಾಳ ಶಾಸನಗಳ ಬಳಕೆ ಮತ್ತು ದುರ್ಬಳಕೆ ಎರಡನ್ನೂ ಸಹ ಇದೇ ಸ್ತರದಲ್ಲಿ ನಿಂತು ನೋಡಬೇಕಾಗುತ್ತದೆ.

ಇಂತಹುದೇ ಸನ್ನಿವೇಶಗಳನ್ನು ಸಮಕಾಲೀನ ಭಾರತದ ಕಳೆದ ಐದಾರು ದಶಕಗಳಿಂದಲೂ ಎದುರಿಸುತ್ತಲೇ ಇದೆ. ತುರ್ತುಪರಿಸ್ಥಿತಿ ಸಂದರ್ಭದ ಸ್ನೇಹಲತಾ ರೆಡ್ಡಿ ಪ್ರಕರಣದಿಂದ ಇತ್ತೀಚಿನ ಸಿದ್ದಿಕ್ ಕಪ್ಪನ್ ಪ್ರಸಂಗದವರೆಗೂ ಕಂಡಿದ್ದೇವೆ. ಹೋರಾಟಗಾರರನ್ನು ನಿಯಂತ್ರಿಸಲು, ನಿರ್ಬಂಧಿಸಲು ಮತ್ತು ಅನೇಕ ಸಂದರ್ಭಗಳಲ್ಲಿ ಪ್ರಬಲ ಹೋರಾಟಗಳನ್ನು ಹತ್ತಿಕ್ಕಲು ಆಳುವ ಪಕ್ಷಗಳಿಗೆ ನೆರವಾಗಲೆಂದೇ ಕೆಲವು ಕರಾಳ ಕಾಯ್ದೆಗಳನ್ನೂ ಸಹ ಅನುಸರಿಸಲಾಗುತ್ತಿದೆ. ಈ ಕಾಯ್ದೆಯ ದುರ್ಬಳಕೆಯಿಂದ ಅಮಾಯಕ ಪ್ರಜೆಗಳ ಮೇಲೆ ಉಂಟಾಗಬಹುದಾದ ಭೀಕರ ಪರಿಣಾಮವನ್ನು ಮತ್ತು ವ್ಯಕ್ತಿಗತವಾಗಿ ಇಂತಹ ಕಾಯ್ದೆಗಳಡಿ ದೀರ್ಘಾವಧಿ ಶಿಕ್ಷೆಗೊಳಗಾಗಿ ನಿರಪರಾಧಿಗಾಗಿ ಹೊರಬರುವ ವ್ಯಕ್ತಿಗಳು ಅನುಭವಿಸುವ ಮಾನಸಿಕ ಯಾತನೆಯನ್ನು ದಾಖಲಿಸಬೇಕಾದ್ದು ವರ್ತಮಾನ ಸಮಾಜದ ಕರ್ತವ್ಯ.

ಯುವ ನಿರ್ದೇಶಕ ಮನ್ಸೋರೆ ತಮ್ಮ 19.20.21 ಎಂಬ ವಿನೂತನ ಶೀರ್ಷಿಕೆಯ ಒಂದು ಚಲನಚಿತ್ರವನ್ನು ಕನ್ನಡಿಗರ ಮುಂದಿರಿಸಿರುವುದು ಈ ಜವಾಬ್ದಾರಿಯನ್ನು ನಿಭಾಯಿಸುವ ಒಂದು ಮಾದರಿಯಾಗಿ ಕಾಣುತ್ತದೆ. ಜೈ ಭೀಮ್ ಚಿತ್ರದಲ್ಲಿ ಇರುಳರ್ ಆದಿವಾಸಿ ಸಮುದಾಯಗಳ ತಲ್ಲಣಗಳನ್ನು ಮತ್ತು ತುಮುಲಗಳನ್ನು ಪರಿಣಾಮಕಾರಿಯಾಗಿ ಬಿಂಬಿಸಿರುವಂತೆಯೇ, ಮನ್ಸೋರೆ ತಮ್ಮ ಈ ಚಿತ್ರದಲ್ಲಿ ಕರ್ನಾಟಕದ ಪಶ್ಚಿಮ ಘಟ್ಟಗಳಲ್ಲಿರುವ ಮಲೆಕುಡಿಯ ಆದಿವಾಸಿ ಸಮುದಾಯಗಳ ತಲ್ಲಣಗಳನ್ನು, ಆತಂಕಗಳನ್ನು ಮತ್ತು ಅವರ ಜೀವನ-ಜೀವನೋಪಾಯದ ಸಂಕೀರ್ಣತೆಗಳನ್ನು ಪರಿಣಾಮಕಾರಿಯಾಗಿ ಬಿಂಬಿಸಿದ್ದಾರೆ. ಒಂಬತ್ತು ವರ್ಷಗಳ ಸುದೀರ್ಘ ನ್ಯಾಯಾಂಗ ಹೋರಾಟದ ನಂತರ 2021ರಲ್ಲಿ ಆರೋಪಮುಕ್ತರಾಗಿ ನಿರಾಳ ಬದುಕಿಗೆ ತೆರೆದುಕೊಂಡ ವಿಠಲ್ ಮಲೆಕುಡಿಯ ಮತ್ತು ಅತನ ತಂದೆಯ ಜೀವನದಲ್ಲಿ ನಡೆದ ನೈಜ ಘಟನೆಗಳನ್ನೇ ಮನ್ಸೋರೆ ತಮ್ಮ ಚಿತ್ರದಲ್ಲಿ ಬಿಂಬಿಸಿದ್ದು, ಭಾರತದ ಕಟ್ಟಕಡೆಯ ವ್ಯಕ್ತಿಗೂ ಈ ದೇಶದ ಸಂವಿಧಾನ ನೀಡುವ ಭರವಸೆಯನ್ನು ದೃಢೀಕರಿಸುವಂತೆ ಇಡೀ ಚಿತ್ರವನ್ನು ನಿರ್ದೇಶಿಸಿದ್ದಾರೆ.

ಸುರಕ್ಷಿತ-ಸುಶಿಕ್ಷಿತ-ಹಿತವಲಯದ ಬಾಹ್ಯ ಜಗತ್ತಿನ ಕಣ್ಣೋಟದಿಂದ ಸದಾ ದೂರವೇ ಇರುವ ಆದಿವಾಸಿಗಳ ಬದುಕನ್ನು ಚಲನಚಿತ್ರಗಳ ಮೂಲಕ ಬಿಂಬಿಸುವಾಗ ಸಾಮಾನ್ಯವಾಗಿ ರಂಜನೀಯತೆ ಮತ್ತು ಕುತೂಹಲಗಳನ್ನು ಹುಟ್ಟಿಸುವಂತೆಯೇ ಚಿತ್ರೀಕರಿಸಲಾಗುತ್ತದೆ. ಕಮರ್ಷಿಯಲ್ ಎನ್ನಬಹುದಾದ ಚಿತ್ರಗಳಲ್ಲಿ ಅದಿವಾಸಿಗಳ ಬದುಕು ಮತ್ತು ಸಾಮಾಜಿಕ ತಲ್ಲಣಗಳನ್ನು ದಾಖಲಿಸಿರುವ ನಿದರ್ಶನಗಳು ನಮ್ಮ ಮುಂದೆ ಇಲ್ಲ ಎನ್ನುವುದೂ ವಾಸ್ತವ. ಈ ಸಮುದಾಯಗಳು ತಮ್ಮ ಅರಣ್ಯ ಕೇಂದ್ರಿತ ಬದುಕಿನಿಂದ ಉಚ್ಚಾಟಿಸಲ್ಪಟ್ಟಾಗ, ಅಭಿವೃದ್ಧಿಯ ಹೆಸರಿನಲ್ಲಿ ಈ ಜನಗಳ ಮೂಲ ನೆಲೆಗಳನ್ನೇ ಪಲ್ಲಟಗೊಳಿಸುವ ಆಡಳಿತ ವ್ಯವಸ್ಥೆಯ ನಿರ್ಧಾರಗಳು ಎದುರಾದಾಗ, ತಮ್ಮ ನಿತ್ಯ ಬದುಕಿನ ಭಾಗವಾದ ಅರಣ್ಯ ಉತ್ಪನ್ನಗಳೇ ಇವರಿಗೆ ನಿಲುಕದಂತಹ ವಾತಾವರಣ ಸೃಷ್ಟಿಯಾದಾಗ, ಆದಿವಾಸಿಗಳ ಕೌಟುಂಬಿಕ ಬದುಕಿನಲ್ಲಿ ಉಂಟಾಗುವ ತುಮುಲ-ತಲ್ಲಣ-ಆತಂಕಗಳು ಬಾಹ್ಯ ಜಗತ್ತಿಗೆ ಇಂದಿಗೂ ಸ್ಪಷ್ಟವಾಗಿ ಅರ್ಥವಾಗಿಲ್ಲ. ಮನ್ಸೋರೆ ಅವರ 19.20.21 ಚಿತ್ರವು ಇದನ್ನು ಅರ್ಥಮಾಡಿಸುವಲ್ಲಿ ಯಶಸ್ವಿಯಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ವಿಠಲ್ ಮಲೆಕುಡಿಯ ಪ್ರಕರಣವೇ ಈ ಚಿತ್ರದ ಜೀವಾಳವಾಗಿದ್ದರೂ, ನಿರ್ದೇಶಕ ಮನ್ಸೋರೆ ತಮ್ಮ ಇಡೀ ಕಥಾವಸ್ತುವನ್ನು ಕೇಂದ್ರೀಕರಿಸಿರುವುದು ಭಾರತದ ಸಂವಿಧಾನ ಪ್ರಜೆಗಳಿಗೆ ನೀಡಿರುವ ವಾಕ್ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಬದುಕುವ ಹಕ್ಕು ಮತ್ತು ಸಾಂವಿಧಾನಿಕ ರಕ್ಷಣೆಯ ಮೇಲೆ. ಭಾರತದ ಪ್ರತಿಯೊಬ್ಬ ಪ್ರಜೆಗೂ ತನ್ನ ವಿರುದ್ಧ ಅಥವಾ ತನ್ನ ಸಮುದಾಯದ ವಿರುದ್ಧ ನಡೆಯುತ್ತಿರುವ ಶೋಷಣೆಯನ್ನು ಪ್ರತಿಭಟಿಸುವ ಹಕ್ಕು ಇರುವಂತೆಯೇ, ತನ್ನ ಬದುಕು ರೂಪಿಸಿಕೊಳ್ಳಲು ಅಗತ್ಯವಾದ ವಾತಾವರಣವನ್ನು ಅಪೇಕ್ಷಿಸುವ ಹಕ್ಕು ಸಹ ಇದ್ದೇ ಇರುತ್ತದೆ. ಹೋರಾಟ, ಆಂದೋಲನ, ಚಳುವಳಿ, ಪ್ರತಿಭಟನೆ ಮುಂತಾದ ಪ್ರತಿರೋಧದ ಅಸ್ತ್ರಗಳನ್ನು ಈ ದೇಶದ ಸಂವಿಧಾನವು ಸಮಸ್ತ ಪ್ರಜೆಗಳಿಗೂ ಪರಿಚ್ಛೇದ 19.20.21ರ ಮೂಲಕ ನೀಡಿದೆ. ಹಾಗೆಯೇ ಈ ಪರಿಚ್ಛೇದಗಳನ್ನು ಗೌರವಿಸುತ್ತಲೇ ಆಡಳಿತ ವ್ಯವಸ್ಥೆ ಮತ್ತು ಆಳುವ ಚುನಾಯಿತ ಸರ್ಕಾರಗಳು ಸಮಸ್ತ ಪ್ರಜೆಗಳ ಸಾಂವಿಧಾನಿಕ ಹಕ್ಕುಗಳನ್ನು ಕಾಪಾಡಬೇಕಾದ ಜವಾಬ್ದಾರಿಯನ್ನೂ ಹೊತ್ತಿರುತ್ತವೆ.

ಮನ್ಸೋರೆ ಅವರ 19.20.21 ಇದನ್ನೇ ಪ್ರತಿಪಾದಿಸುವ ಒಂದು ಉತ್ತಮ ಚಿತ್ರ ಎನ್ನಬಹುದು. ಕೆಲವು ನುರಿತ ಕಲಾವಿದರೊಂದಿಗೆ ಯುವ ಪೀಳಿಗೆಯ ಕಲಾವಿದರನ್ನೂ ಬಳಸಿಕೊಂಡು, ಬಿಗಿಯಾದ ನಿರೂಪಣೆ, ಮನಮುಟ್ಟುವ ಸಂಭಾಷಣೆ, ಹೃದಯಸ್ಪರ್ಶಿ ದೃಶ್ಯಗಳು ಮತ್ತು ವಿಹಂಗಮ ಛಾಯಾಗ್ರಹಣದ ಮೂಲಕ ಮನ್ಸೋರೆ ತಮ್ಮ ಚಿತ್ರದಲ್ಲಿ ಒಂದು ಗಂಭೀರ ವಿಚಾರವನ್ನು ಪ್ರೇಕ್ಷಕರ ಮುಂದಿರಿಸುತ್ತಾರೆ. ಮನರಂಜನೆಗೆ ಹೆಚ್ಚಿನ ಒತ್ತು ನೀಡದೆ, ಇವತ್ತಿನ ಕಮರ್ಷಿಯಲ್ ಚಿತ್ರಜಗತ್ತಿನಲ್ಲಿ ಅನಿವಾರ್ಯವೇನೋ ಎನ್ನಿಸುವ ಅನಗತ್ಯ ಹಾಸ್ಯ, ಹಾಡು, ಕುಣಿತ, ಹೊಡೆದಾಟ ಮುಂತಾದ ರಂಜನೀಯ ಅಂಶಗಳಿಗೆ ಒಲಿಯದೆ, ಮನ್ಸೋರೆ ಕರ್ನಾಟಕ ಕಂಡ ಒಂದು ನೈಜ ಘಟನೆಯನ್ನು ಯಥಾವತ್ತಾಗಿ ಪ್ರೇಕ್ಷಕರ ಮುಂದಿರಿಸುತ್ತಾರೆ. ಚಿತ್ರದಲ್ಲಿನ ಸಂಭಾಷಣೆಗಳು ಕಥಾವಸ್ತುವಿಗೆ ವಿಮುಖವಾಗದೆ, ಮೂಲ ಕಥೆಯ ಕೇಂದ್ರಬಿಂದುವಾಗಿರುವ ಸಾಂವಿಧಾನಿಕ ಆಶಯಗಳು ಮತ್ತು ಮೌಲ್ಯಗಳನ್ನು ಮನದಟ್ಟು ಮಾಡುವಂತಿರುವುದು ಮೆಚ್ಚತಕ್ಕ ಅಂಶ.

19.20.21 ಚಿತ್ರದ ಶೀರ್ಷಿಕೆಯೇ ಹೇಳುವಂತೆ, ಭಾರತದ ಸಮಸ್ತ ಜನತೆಯ ಹಸನಾದ ಬದುಕಿಗೆ ಸಂವಿಧಾನವೇ ಮೂಲ. ಎಲ್ಲ ನಟರ ಅತ್ಯುತ್ತಮ ನಟನೆ, ನಿಸರ್ಗ ತಾಣಗಳ ವಿಹಂಗಮ ಚಿತ್ರೀಕರಣ, ಬಿಗಿಯಾದ ಗಂಭೀರ ಸಂಭಾಷಣೆ, ಎಲ್ಲಿಯೂ ಸಡಿಲವಾಗದ ನಿರ್ದೇಶನ ಮತ್ತು ಚಿತ್ರದ ಮೂಲ ಕಥಾವಸ್ತುವಿನ ಉದ್ದೇಶವನ್ನು ಪರಿಣಾಮಕಾರಿಯಾಗಿ ಪರದೆಯ ಮೇಲೆ ಸಾದರಪಡಿಸುವ ರೀತಿ ಇವೆಲ್ಲವೂ ಮನ್ಸೋರೆ ಅವರಲ್ಲಿನ ಸೃಜನಾತ್ಮಕ ಕಲೆ ಮತ್ತು ಬದ್ಧತೆಗೆ ಸಾಕ್ಷಿಯಾಗಿದೆ. ಸಂವಿಧಾನದ ರಕ್ಷಣೆಯಲ್ಲಿ ಮತ್ತು ಜನಸಾಮಾನ್ಯರ ಸಾಂವಿಧಾನಿಕ ಹಕ್ಕುಗಳ ರಕ್ಷಣೆಯಲ್ಲಿ ನ್ಯಾಯಾಂಗದ ಪಾತ್ರ ಎಷ್ಟು ಮಹತ್ವದ್ದು ಎನ್ನುವುದನ್ನು ನಿರೂಪಿಸುವ ನಿಟ್ಟಿನಲ್ಲಿ ಮನ್ಸೋರೆ ಯಶಸ್ವಿಯಾಗಿದ್ದಾರೆ. ಹಾಗೆಯೇ ಮಲೆಕುಡಿಯ ಆದಿವಾಸಿ ಸಮುದಾಯದ ಬದುಕಿನ ತಲ್ಲಣಗಳನ್ನು ಮನಮುಟ್ಟುವಂತೆ ಬಿಂಬಿಸುವುದರಲ್ಲೂ ಯಶಸ್ವಿಯಾಗಿದ್ದಾರೆ. ಆಡಳಿತ ವ್ಯವಸ್ಥೆಯಲ್ಲಿ ಉಲ್ಲಂಘಿಸಲಾಗುವ ಸಾಂವಿಧಾನಿಕ ಆಶಯಗಳನ್ನು ಮತ್ತು ಮೌಲ್ಯಗಳನ್ನು ರಕ್ಷಿಸಲು ನ್ಯಾಯಾಂಗವೊಂದೇ ಅಂತಿಮ ಮಾರ್ಗ ಎಂಬ ಸಂದೇಶವನ್ನೂ ಈ ಚಿತ್ರ ಪರಿಣಾಮಕಾರಿಯಾಗಿ ಹೊತ್ತುತರುತ್ತದೆ.

ಇಡೀ ನಾಗರಿಕ ಜಗತ್ತನ್ನು ಬಾಧಿಸುವ ಮಾನವ ಹಕ್ಕುಗಳ ಸಮಸ್ಯೆ ಮತ್ತು ಈ ಹಕ್ಕುಗಳ ರಕ್ಷಣೆಗಾಗಿ ವ್ಯವಸ್ಥೆಯ ಆಂತರ್ಯದಲ್ಲೇ ಇರುವ ಪರಿಹಾರೋಪಾಯ ಮಾರ್ಗಗಳನ್ನು ಮನ್ಸೋರೆ ಮಲೆಕುಡಿಯ ಆದಿವಾಸಿ ಸಮುದಾಯದ ಒಂದು ಸುದೀರ್ಘ ಕಾನೂನು ಸಂಘರ್ಷದ ಕಥಾ ಹಂತರದ ಮೂಲಕ ಬಿಂಬಿಸುತ್ತಾರೆ. ಮುಖ್ಯ ಪಾತ್ರಧಾರಿಯ ಸುದೀರ್ಘ ಬವಣೆಗೆ ಕಾರಣೀಭೂತರಾದ ನಿವೃತ್ತ ಪೊಲೀಸ್ ಅಧಿಕಾರಿಯ ಪಶ್ಚಾತ್ತಾಪದ ಭಾವ ಮತ್ತು ಆತನ ಮೊಮ್ಮಗಳಿಗೆ ವಕೀಲರು ಸಂವಿಧಾನದ ಗ್ರಂಥವನ್ನು ಉಡುಗೊರೆಯಾಗಿ ನೀಡುವ ಚಿತ್ರದ ಕೊನೆಯ ದೃಶ್ಯ ಸಹಜವಾಗಿಯೇ ಹೃದಯಸ್ಪರ್ಶಿ ಎನಿಸುತ್ತದೆ.

19.20.21 ಕನ್ನಡ ಚಿತ್ರರಂಗಕ್ಕೆ ಮನ್ಸೋರೆ ಅವರಿಂದ ನೀಡಲ್ಪಟ್ಟಿರುವ ಅಮೂಲ್ಯ ಕೊಡುಗೆ. ಜನಸಾಮಾನ್ಯರ, ತಳಮಟ್ಟದ ಜನಸಮುದಾಯಗಳ ಸಾಮಾಜಿಕ-ಸಾಂಸ್ಕೃತಿಕ ತಲ್ಲಣಗಳನ್ನು ಬಾಹ್ಯ ಜಗತ್ತಿಗೆ ಪರಿಚಯಿಸುವ ಇಂತಹ ಪ್ರಯತ್ನಗಳನ್ನು ಸ್ವಾಗತಿಸುತ್ತಲೇ ಮನ್ಸೋರೆ ಅವರಿಂದ ಇಂತಹ ಪ್ರಯತ್ನಗಳು ನಿರಂತರವಾಗಿ ಸಾಗುತ್ತಿರಲಿ ಎಂದು ಆಶಿಸಬಹುದು. ■

ನಮ್ಮವನೇ ಆದ ಶಿವ, ನಮ್ಮೊಳಗಿನ ಶಿವ 'ಶೂದ್ರಶಿವ'

ಪುಟ 16 ರಿಂದ

ಸಮುದಾಯಗಳ ಅವಕಾಶಗಳನ್ನು ಕಿತ್ತುಕೊಂಡು ಮತ್ತೆ ಶತಮಾನ ಹಿಂದಿನ ಕಗ್ಗತ್ತಲ ಪರಿಸ್ಥಿತಿಗೆ ತಳ್ಳುವ ಹವಣಿಕೆ ನಡೆದಿದೆ. ಇಂತಹ ಹೊತ್ತಿನಲ್ಲಿ ಹೊಸ ತಲೆಮಾರಿಗೆ ನಾರಾಯಣ ಗುರುಗಳ ಸಮಾಜ ಸುಧಾರಣಾ ಚಳುವಳಿಯ ಇತಿಹಾಸವನ್ನು ತಿಳಿಸಿಕೊಡುತ್ತಾ ಅವರಲ್ಲಿ ಸಮಾನತೆ ಮತ್ತು ಸಹಬಾಳ್ವೆಯ ಅನಿವಾರ್ಯತೆಯ ಅರಿವು ತುರ್ತಾಗಿ ಮೂಡಿಸಬೇಕಾಗಿದೆ.

ಎರಡನೆಯದಾಗಿ ನಾರಾಯಣ ಗುರುಗಳು ಮತ್ತು ಅವರ ವಿಚಾರಧಾರೆಗಳನ್ನು ಯಾವ ಅಳುಕೂ ಇಲ್ಲದೆ ಕಡೆಗಣಿಸುವ ಮತ್ತು ಅವಮಾನಿಸುವ, ಆದರೆ ಓಟಿಗಾಗಿ ಮಾತ್ರ ಬಳಸಿಕೊಳ್ಳುವ ಚಿಲ್ಲರೆ ರಾಜಕಾರಣವೂ ಎಗ್ಗಿಲ್ಲದೆ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿಯೂ ಶೂದ್ರಶಿವ ಅವರಿಗೆ ಒಂದು ಎಚ್ಚರಿಕೆಯ ಸಂದೇಶವಾಗಬೇಕು.

ಅಪಾರ ಶ್ರಮ ಮತ್ತು ಪ್ರತಿಭೆ ಬೇಡುವ ಶೂದ್ರಶಿವ ನಾಟಕದ ನಿರ್ಮಾಣದಲ್ಲಿ ದುಡಿದ ಪ್ರತಿಯೊಬ್ಬರೂ ಅಭಿನಂದನೆಗೆ ಅರ್ಹರು. ನಾಟಕ ನೂರಾರು ಪ್ರದರ್ಶನ ಕಾಣುವಂತಾಗಲಿ, ತನ್ನ ಉದ್ದೇಶ ಈಡೇರಿಸುವಂತಾಗಲಿ ಎಂದು ಆಶಿಸೋಣ. ■

ಮಾರ್ಕ್ಸ್‌ವಾದಿ ದೃಷ್ಟಿಕೋನದಲ್ಲಿ ಮತಧರ್ಮ ಮತ್ತು ಧಾರ್ಮಿಕತೆ.......

ಪುಟ 11 ರಿಂದ

ಪ್ರಯತ್ನಿಸಿದರು. ಆದರೆ ಒಂದೇ ವ್ಯತ್ಯಾಸವೆಂದರೆ ಕ್ರಿಶ್ಚಿಯನ್ ಮತಧರ್ಮವು ಮರಣಾನಂತರದ ಜೀವನಕ್ಕೆ ಪರಿಹಾರ ಇದೆ ಎನ್ನುತ್ತದೆ. ಆದರೆ ಸಮಾಜವಾದವೇ ಈ ಜಗತ್ತಿಗೆ ಪರಿಹಾರ. ಸೇಂಟ್ ಕ್ಲೆಮೆಂಟ್ ಹೇಳುತ್ತಾರೆ "ಈ ಪ್ರಪಂಚದ ಎಲ್ಲಾ ವಸ್ತುಗಳು ಎಲ್ಲಾ ಜನರಿಗೆ ಸೇರಿರಬೇಕು." ಆದರೆ 12ನೇ ಪೋಪ್ ಪಯಸ್ ಅವರು "ಹಲವು ವರ್ಗಗಳ ಅಸ್ತಿತ್ವವೇ ಸೃಷ್ಟಿಕರ್ತನ ಯೋಜನೆಯಾಗಿದ್ದು, ಶ್ರೀಮಂತನು ತನ್ನ ಮನೆಯಲ್ಲಿರಬೇಕು, ಬಡವನೇ ಅವನ ದ್ವಾರಪಾಲಕನಂತಿರಬೇಕು ಎಂಬುದು ಸೃಷ್ಟಿಕರ್ತನ ಸಂಕಲ್ಪವಾಗಿದೆ" ಎಂದು ಹೇಳಿದರು. ಈ ಎರಡು ಸಂಘರ್ಷದ ದೃಷ್ಟಿಕೋನಗಳು ಆರಂಭದಲ್ಲಿ ಸಾಮಾನ್ಯ ಜನರ ಧ್ವನಿಯಾಗಿದ್ದ ಕ್ರಿಶ್ಚಿಯನ್ ಮತಧರ್ಮವು ಹೇಗೆ ಆಳುವ ವರ್ಗಗಳ ಸಾಧನವಾಯಿತು ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಬೈಜಾಂಟೈನ್ ಸಾಮ್ರಾಜ್ಯದ ದಬ್ಬಾಳಿಕೆಯಿಂದ/ ಪರ್ಷಿಯನ್ ರಾಜರ ಲೂಟಿಯಿಂದ/ ಕ್ರೈಸ್ತ ಧರ್ಮದ ಮೂಢನಂಬಿಕೆಗಳಿಂದ ನರಳುತ್ತಿದ್ದ ಜನರ ಪರವಾಗಿ ಇಸ್ಲಾಂ ನಿಂತಿತು. ಬಡವರು ಮತ್ತು ದೀನದಲಿತರನ್ನು ಇಸ್ಲಾಮಿಕ್ ಸಾಮ್ರಾಜ್ಯಕ್ಕೆ ಸ್ವಾಗತಿಸಲಾಯಿತು. ಆದರೆ 12 ನೇ ಶತಮಾನದಲ್ಲಿ ಇಸ್ಲಾಂ ವಿರುದ್ಧ ದಿಕ್ಕಿನಲ್ಲಿ ಪ್ರಯಾಣಿಸಿ ಆಳುವ ವರ್ಗಗಳ ದಬ್ಬಾಳಿಕೆಯ ಸಾಧನವಾಯಿತು. ಬೌದ್ಧ ಮತ್ತು ಜೈನ ಧರ್ಮಗಳು ವೈದಿಕ ವರ್ಣಾಶ್ರಮ ಪರಿಕಲ್ಪನೆಗಳ ವಿರುದ್ಧ ಧ್ವನಿಯೆತ್ತಿದವು.

ಅವರು "ಜೀವವನ್ನು ಹತ್ಯೆ ಮಾಡುವುದನ್ನು" ಪ್ರತಿಪಾದಿಸಿದರು. "ಹತ್ಯೆ" ಬಗೆಗಿನ ಇಂತಹ ಪರಿಕಲ್ಪನೆಯು ಜನರನ್ನು ರಕ್ಷಿಸಿತು. ಏಕೆಂದರೆ ಅಂದು ಅವರ ದನಗಳನ್ನು ಯಜ್ಞದಲ್ಲಿ ಬಲಿಕೊಡಲು ತೆಗೆದುಕೊಂಡು ಹೋಗಲಾಗುತ್ತಿತ್ತು. ವರ್ಣಾಶ್ರಮ ಪದ್ಧತಿಯಿಂದ ಕಷ್ಟಗಳಿಗೆ ಸಿಲುಕಿ ನರಳುತ್ತಿರುವವರು ಮತ್ತು ಯಜ್ಞಗಳಿಂದ ವಂಚಿತರಾದವರು ಬೌದ್ಧ ಮತ್ತು ಜೈನ ಮತಧರ್ಮಗಳನ್ನು ಬೆಂಬಲಿಸಿದರು. ಆದರೆ "ಹತ್ಯೆ" ಬಗೆಗಿನ ಇವರ ಪರಿಕಲ್ಪನೆಯನ್ನು ಅತಿರೇಕಕ್ಕೆ ಕೊಂಡೊಯ್ದ ಜೈನರು ಮಣ್ಣು ಉಳುಮೆ ಮಾಡುವಾಗ ಜೀವಗಳು ಸಾಯುತ್ತಿವೆ ಎಂದು ಕೃಷಿಗೆ ಕಡಿವಾಣ ಹಾಕಿದರು. ಇದು ಸಹಜವಾಗಿಯೇ ರೈತರಲ್ಲಿ ಅಸಮಾಧಾನ ಮೂಡಿಸಿತು. ಇಂತಹ ಸನ್ನಿವೇಶವನ್ನು ಶೈವರು ಮತ್ತು ವೈಷ್ಣವರು ಬಳಸಿಕೊಂಡರು. ಈ ಎಲ್ಲಾ ಮತಧರ್ಮಗಳು ಒಂದು ಹಂತದಲ್ಲಿ ದಬ್ಬಾಳಿಕೆಯ ಸಾಧನಗಳಾಗಿ ಬಳಸಲ್ಪಟ್ಟಿವೆ.

ಹಿಂದುತ್ವದ ರಾಜಕೀಯ ಅಜೆಂಡಾವನ್ನು ಸೋಲಿಸೋಣ

ಇಂದು ಆರ್.ಎಸ್.ಎಸ್ ತನ್ನ ಹಿಂದುತ್ವದ ಯೋಜನೆಯನ್ನು ಅತ್ಯಂತ ವೇಗವಾಗಿ ಮುನ್ನಡೆಸುತ್ತಿದೆ. ಎಲ್ಲ ರೀತಿಯ ಮತೀಯವಾದದ ವಿರುದ್ಧ ಜನರನ್ನು ಸಂಘಟಿಸುವ ಮಹತ್ತರ ಕರ್ತವ್ಯ ಕಮ್ಯೂನಿಸ್ಟರ ಮೇಲಿದೆ. ಮಾನವ ಜೀವನದಲ್ಲಿ ಮತಧರ್ಮವು ಅನೇಕ ರೀತಿಯಲ್ಲಿ ಹೆಣೆದುಕೊಂಡಿದೆ. ಬಹುಸಂಖ್ಯಾತ ಧರ್ಮಕ್ಕೆ ಸೇರಿದ ದೊಡ್ಡ ವಿಭಾಗವು ಆರ್.ಎಸ್.ಎಸ್. ವಿಷಕಾರಿ ಪ್ರಚಾರದೊಂದಿಗೆ ಸೇರಿಕೊಂಡಾಗ, ಪಂಥೀಯತೆಗೆ ಬಲಿಯಾಗುತ್ತದೆ. ಧಾರ್ಮಿಕ ಅಭಿಮಾನವು ಧಾರ್ಮಿಕ ಪ್ರೋತ್ಸಾಹವಾಗಿ ಬದಲಾಗುತ್ತದೆ.

ಅಂದು ಶೈವ ಮತ್ತು ವೈಷ್ಣವ ಮತಧರ್ಮಗಳು ಜೈನ ಮತ್ತು ಬೌದ್ಧ ಮತಧರ್ಮಗಳನ್ನು ಶತ್ರುಗಳಾಗಿ ಬಿಂಬಿಸಿದವು. ಇಂದು ಮುಸ್ಲಿಮರು ಮತ್ತು ಕ್ರೈಸ್ತರನ್ನು ಶತ್ರುಗಳಾಗಿ ಬಿಂಬಿಸಲಾಗಿದೆ. ಆರ್.ಎಸ್.ಎಸ್ ಸ್ಥಾಪನೆ ಮತ್ತು ಹಿಂದುತ್ವ ಅಸಾಧ್ಯ ಶಕ್ತಿಗಳಲ್ಲ ಎಂಬುದನ್ನು ಇತ್ತೀಚಿನ ಘಟನೆಗಳು ಸ್ಪಷ್ಟಪಡಿಸುತ್ತವೆ.

ಆರ್.ಎಸ್.ಎಸ್.ನ ವಿಷಕಾರಿ ಪ್ರಚಾರ ಮತ್ತು ಹಿಂಸೆಯನ್ನು ಸೋಲಿಸಲು ಎಲ್ಲಾ ಸೈದ್ಧಾಂತಿಕ/ ರಾಜಕೀಯ/ ಸಾಂಸ್ಕೃತಿಕ ವೇದಿಕೆಗಳಲ್ಲಿ ಕಾರ್ಯನಿರ್ವಹಿಸುವ ಅವಶ್ಯಕತೆ ನಮ್ಮ ಮುಂದಿದೆ. ಇದಕ್ಕಾಗಿ, ಮಾರ್ಕ್ಸ್‌ವಾದಿ ಮೂಲಗಳ ಅಧ್ಯಯನ ಮತ್ತು ಅಭ್ಯಾಸಗಳು ನಮಗೆ ಮಾರ್ಗದರ್ಶಿಯಾಗುತ್ತವೆ.

(ತೀಕದೀರ್ ತಮಿಳು ದಿನಪತ್ರಿಕೆಯಲ್ಲಿ ಪ್ರಕಟಗೊಂಡ ಎ. ಅನ್ವರ್ ಹುಸೇನ್ ರವರ ಲೇಖನದ ಭಾವಾನುವಾದ ಸಿ. ಸಿದ್ದಯ್ಯ ಅವರಿಂದ)

ಫೆ.18–25ರ ವಾರದಲ್ಲಿ (ಮ್ಯೂನಿಕ್ ನಲ್ಲಿ ಯು.ಎಸ್–ಯುರೋ ಕೂಟದ ಜಂಟಿ ಭದ್ರತಾ ಸಮ್ಮೇಳನದಿಂದ ಉಕ್ರೇನ್ ಯುದ್ಧದ ವಾರ್ಷಿಕದ ವರೆಗೆ) ಯುರೋಪ್–ಯು.ಎಸ್ ಗಳಲ್ಲಿ ಭಾರೀ ಯುದ್ಧ–ವಿರೋಧಿ ಪ್ರದರ್ಶನಗಳು ನಡೆದಿವೆ. ಫೆ.18–25ರ ಯುರೋಪಿನ ಪ್ರದರ್ಶನಗಳು ಇತ್ತೀಚಿನ ವರ್ಷಗಳಲ್ಲಿ ನಡೆದ ವ್ಯಾಪಕ ಮತ್ತು ಭಾರೀ ಯುದ್ಧ–ವಿರೋಧಿ ಪ್ರದರ್ಶನಗಳಿವು ಎನ್ನಲಾಗಿದೆ. ಇವುಗಳಲ್ಲಿ 20ಕ್ಕೂ ಹೆಚ್ಚು ನಗರಗಳಲ್ಲಿ ಅತ್ಯಂತ ದೊಡ್ಡ ಪ್ರದರ್ಶನಗಳು ಜರ್ಮನಿಯಲ್ಲಿ ನಡೆದಿವೆ. ಬರ್ಲಿನ್ ನಲ್ಲಿ ನಡೆದ ಪ್ರದರ್ಶನದಲ್ಲಿ 50 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಇನ್ನೊಂದು ಕಾರಣಕ್ಕಾಗಿ ಕೂಡಾ ಜರ್ಮನಿ ಮತ್ತು ಬರ್ಲಿನ್ ಪ್ರದರ್ಶನಗಳು ಗಮನಾರ್ಹವಾಗಿದ್ದವು. ಇದನ್ನು ಸಂಘಟಿಸಲು ಮುತುವರ್ಜಿ ವಹಿಸಿದ್ದ ಇಬ್ಬರು ಮಹಿಳೆಯರು. ಎರಡು ವಾರಗಳ ಹಿಂದೆ "ಶಾಂತಿಗಾಗಿ ಪ್ರಣಾಳಿಕೆ"ಯನ್ನು ಅನುಮೋದನೆಯ ಸಹಿಗಾಗಿ ಸಾರ್ವಜನಿಕವಾಗಿ ಬಿಡುಗಡೆ ಮಾಡಿದ್ದರು. ಅದು ಎರಡೇ ವಾರದಲ್ಲಿ 6.5 ಲಕ್ಷ ಸಹಿ ಬೆಂಬಲ ಪಡೆದಿದೆ. ರ್‍ಯಾಲಿಯ ನಂತರ ಅದಕ್ಕೆ ಬೆಂಬಲ ಇನ್ನಷ್ಟು ಏರುತ್ತಿದ್ದು, ಅದು 10 ಲಕ್ಷಕ್ಕೆ ಸದ್ಯದಲ್ಲೇ ಮುಟ್ಟಿ, ಒಂದು ಪ್ರಬಲ ಜನಾಂದೋಲನವಾಗಹುದು ಎಂಬ ನಿರೀಕ್ಷೆಯಿದೆ.

ಯುರೋಪಿನಲ್ಲಿ ಭಾರೀ 'ಯುದ್ಧ ವಿರೋಧಿ' ಪ್ರದರ್ಶನಗಳು

ಜಗದ ಸುತ್ತ

ವಸಂತರಾಜ ಎನ್.ಕೆ.

ಉಕ್ರೇನ್ ಸಂಘರ್ಷ ವರ್ಷಕ್ಕೆ ಹತ್ತಿರವಾಗಿ ಅದನ್ನು ದಾಟುತ್ತಿದ್ದಂತೆ, ಯುದ್ಧ ನಿಲುಗಡೆಯ ಸಾಧ್ಯಾತೆ ಕ್ಷೀಣಾವಾಗುತ್ತಾ ವಿಶ್ವ ಅಣುಸಮರದ ಅಪಾಯ ಎದುರಾದಂತೆ, ಯುರೋಪ್, ಯು.ಎಸ್. ಗಳಲ್ಲಿ ಯುದ್ಧ–ವಿರೋಧಿ ಪ್ರದರ್ಶನಗಳು ಆರಂಭವಾಗಿವೆ. ಈ ಪ್ರದರ್ಶನಗಳು ಫೆ.18 ರಂದು ಜರ್ಮನಿಯ ಮ್ಯೂನಿಕ್ ನಲ್ಲಿ ಯು.ಎಸ್–ಯುರೋ ಕೂಟದ ಜಂಟಿ ಭದ್ರತಾ ಸಮ್ಮೇಳನದಲ್ಲಿ ಉಕ್ರೇನ್ ಗೆ ಶಸ್ತ್ರಾಸ್ತ್ರಗಳ ಪೂರೈಕೆ ಮತ್ತಿತರ ಮಿಲಿಟರಿ ನೆರವು ತೀವ್ರಗೊಳಿಸಲು ನಿರ್ಧರಿಸಿದಾಗಿನಿಂದ ತೀವ್ರಗೊಂಡಿವೆ. ಫೆ. 18–25ರ ವಾರದಲ್ಲಿ ಯುರೋಪ್–ಯು.ಎಸ್ ಗಳಲ್ಲಿ ಹಲವಾರು ಸಂಯೋಜಿತ ಪ್ರದರ್ಶನಗಳು ನಡೆದಿವೆ.

ಯು.ಎಸ್.–ಯು.ಕೆ. ಗಳ ತೈಲ ಮತ್ತು ಶಸ್ತ್ರಾಸ್ತ್ರ ಕಾರ್ಪೊರೇಟುಗಳು ಮತ್ತು ಆಳುವ ವಲಯಗಳನ್ನು ಬಿಟ್ಟರೆ ಈ ಯುದ್ಧ ಯಾರಿಗೂ ಬೇಕಾಗಿಲ್ಲ. ಈ ಯುದ್ಧ ಆರಂಭವಾಗಿರುವುದಕ್ಕೆ ಮತ್ತು ಅದು ಮುಂದುವರೆಯುತ್ತಿರುವುದಕ್ಕೆ ರಷ್ಯಾದಷ್ಟೇ ಯು.ಎಸ್.–ನಾಟೋಗಳೂ ಕಾರಣ, ಯುದ್ಧ ಆರಂಭವಾದನಂತರ ಯುದ್ಧ ನಿಲುಗಡೆಯ ಅವಕಾಶಗಳನ್ನು ಅವು ಬೇಕೆಂತಲೆ ನಿರ್ಲಕ್ಷಿಸಿವೆ. ನ್ಯಾಟೋ ಮತ್ತು ಯುರೋ ಕೂಟ ಉಕ್ರೇನ್ ಸಂಘರ್ಷ ವನ್ನು ಹೆಚ್ಚಿನ ಶಸ್ತ್ರಾಸ್ತ್ರಗಳ ಪೂರೈಕೆ ಮಾಡಿ ಇನ್ನಷ್ಟು ತೀವ್ರಗೊಳಿಸುವುದನ್ನು ಕೈ ಬಿಟ್ಟು ಯುದ್ಧ ನಿಲುಗಡೆಗೆ ರಾಜತಾಂತ್ರಿಕ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದು ಈ ಪ್ರದರ್ಶನಗಳ ಹಕ್ಕೊತ್ತಾಯ.



ಇಟಲಿಯಲ್ಲಿ 100 ನಗರ–ಪಟ್ಟಣಗಳಲ್ಲಿ ಫೆ. 25ರಂದು ಪ್ರದರ್ಶನಗಳು ನಡೆದಿವೆ. ಪೆರುಜಿಯ ಎಂಬ ಪಟ್ಟಣದಿಂದ ಅಸ್ಸಿಸಿ ಎಂಬ ಪಟ್ಟಣಕ್ಕೆ 24 ಕಿ.ಮಿ ಜಾಥಾ ಸಹ ಸಂಘಟಿಸಲಾಗಿತ್ತು. ಫ್ರಾನ್ಸಿನಾದ್ಯಂತ ಸಹ ಫೆ. 18–25 ಅವಧಿಯಲ್ಲೆ ಹಲವು ಪ್ರದರ್ಶನಗಳು ನಡೆದಿವೆ. ಲಂಡನ್ (ಯುಕೆ) ವಿಯೆನ್ನಾ (ಆಸ್ಟ್ರಿಯಾ), ಜೂರಿಕ್ (ಸ್ವಿಟ್ಜರ್ ಲ್ಯಾಂಡ್), ಬ್ರಸ್ಸೆಲ್ಸ್ (ಬೆಲ್ಜಿಯಂ ಮತ್ತು ಯುರೋ ಕೂಟದ ರಾಜಧಾನಿ) ಗಳಲ್ಲೂ ಭಾರೀ ಪ್ರದರ್ಶನಗಳು ನಡೆದಿವೆ. ಫೆ. 18–25ರ ಯುರೋಪಿನ ಪ್ರದರ್ಶನಗಳು ಇತ್ತೀಚಿನ ವರ್ಷಗಳಲ್ಲಿ ನಡೆದ ವ್ಯಾಪಕ ಮತ್ತು ಭಾರೀ ಯುದ್ಧ–ವಿರೋಧಿ ಪ್ರದರ್ಶನಗಳು ಎನ್ನಲಾಗಿದೆ.

ಇವುಗಳಲ್ಲಿ ಅತ್ಯಂತ ದೊಡ್ಡ ವ್ಯಾಪಕ ಪ್ರದರ್ಶನಗಳು ಜರ್ಮನಿಯಲ್ಲಿ ನಡೆದಿವೆ. 10 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದ 20 ರಷ್ಟು ಪ್ರದರ್ಶನಗಳು ಹಲವು ನಗರಗಳಲ್ಲಿ ನಡೆದವು. ಫೆಬ್ರುವರಿ 25 ರಂದು ಬರ್ಲಿನ್ ನಲ್ಲಿ ನಡೆದ ಪ್ರದರ್ಶನ ಅತ್ಯಂತ ದೊಡ್ಡದೂ ಮಹತ್ವದ್ದೂ ಆಗಿತ್ತು. ಬರ್ಲಿನ್ ನಲ್ಲಿ ನಡೆದ ಪ್ರದರ್ಶನದಲ್ಲಿ 50 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಶೀತಲಸಮರದ ಪ್ರತೀಕವಾಗಿದ್ದ ಪೂರ್ವ–ಪಶ್ಚಿಮ ಜರ್ಮನಿಗಳನ್ನು ಪ್ರತ್ಯೇಕಿಸಿದ್ದ ಬ್ರಾಂಡನ್ ಬರ್ಗ್ ಗೇಟ್ ಬಳಿ ಭಾರೀ ರ್‍ಯಾಲಿ ನಡೆದಿತ್ತು. "ಇಂದು ಹೆಲ್ಮೆಟ್ಸ್, ನಾಳೆ ಟ್ಯಾಂಕುಗಳು, ನಾಡಿದ್ದು ನಮ್ಮ ಮಕ್ಕಳು" ನಂತಹ ದೊಡ್ಡ ಬ್ಯಾನರುಗಳನ್ನು ಪ್ರದರ್ಶನಕಾರರು ಹಿಡಿದಿದ್ದರು. ಜರ್ಮನ್ ಸರಕಾರ 5000 ಹೆಲ್ಮೆಟ್ಸ್ ಗಳ ಪೂರೈಕೆಯಿಂದ ಆರಂಭಿಸಿ ಕ್ರಮೇಣ ಟ್ಯಾಂಕುಗಳ ಪೂರೈಕೆ ಆರಂಭಿಸಿದ್ದು, ಮುಂದಿನ ಹೆಜ್ಜೆ ಸೈನಿಕರನ್ನು ಕಳಿಸುವುದು ಎಂಬುದು ಬ್ಯಾನರ್ ನ ಇಂಗಿತವಾಗಿತ್ತು. ಯುದ್ಧದಲ್ಲಿ ಸರಕಾರ ಹೆಚ್ಚೆಚ್ಚಾಗಿ ತೊಡಗಿಸಿಕೊಳ್ಳುವುದಕ್ಕೆ ಜರ್ಮನ್ನರ ವಿರೋಧ ಈ ರೀತಿ ವ್ಯಕ್ತವಾಗಿದೆ. 'ಗ್ರೇನೆಡ್ಸ್ ಅಲ್ಲ, ಡಿಪ್ಲೊಮ್ಯಾಟ್ಸ್', "ಕೊಲೆಗಳನ್ನು ನಿಲ್ಲಿಸಿ", "ಇದು ನನ್ನ ಸರಕಾರವೂ ಅಲ್ಲ, ಇದು ನನ್ನ ಯುದ್ಧವೂ ಅಲ್ಲ", "ನಿಜವಾದ ಶತ್ರು ಲಂಡನ್ ನಲ್ಲಿ, ನ್ಯೂಯಾರ್ಕಿನಲ್ಲಿ ಕೂತಿದ್ದಾನೆ" – ಇವು ಇತರ ಬ್ಯಾನರುಗಳು, ಪೋಸ್ಟರುಗಳಾಗಿದ್ದವು. ಬಿಟಲ್ಸ್ ಹಾಡುಗಳು ಸೇರಿದಂತೆ ಪ್ರಸಿದ್ಧ ಯುದ್ಧ–ವಿರೋಧಿ ಶಾಂತಿ ಹಾಡುಗಳು ಪ್ರದರ್ಶನದಲ್ಲಿ ಕೇಳಿಬಂದವು.

ಬರ್ಲಿನ್ ಮತ್ತು ಜರ್ಮನಿಯ ಯುದ್ಧ–ವಿರೋಧಿ ಪ್ರದರ್ಶನಗಳು ಜನವಿಭಾಗಗಳ ಅತ್ಯಂತ ವ್ಯಾಪಕ, ವಿಶಾಲ ಅಣಿನೆರೆಸುವಿಕೆಯಾಗಿತ್ತು. ಸರಕಾರಕ್ಕೆ ವಿರೋಧವಾಗಿರುವ ಬಲಪಂಥೀಯ, ಉಗ್ರ–ಬಲಪಂಥೀಯ ಕಾರ್ಯಕರ್ತರೂ, ನಾಯಕರೂ ಪ್ರದರ್ಶನದಲ್ಲಿ ಭಾಗವಹಿಸಿದ್ದು, ಫ್ಯಾಸಿಸ್ಟ್–ವಿರೋಧಿ ಕಾರ್ಯಕರ್ತರು ಮತ್ತು ಅವರ ನಡುವೆ ಸಣ್ಣ ಘರ್ಷಣೆ ಸಹ ನಡೆಯಿತು. ಆದರೆ ಸಂಘಟಕರು ಮಧ್ಯಪ್ರವೇಶ ಮಾಡಿ ಪರಿಸ್ಥಿತಿಯನ್ನು ತಿಳಿಯಾಗಿಸಿದರು. ಯುದ್ಧಕ್ಕೆ ವಿರೋಧಿಯಾಗಿರುವ ಎಲ್ಲರೂ ಪ್ರದರ್ಶನದಲ್ಲಿ ಭಾಗವಹಿಸಬಹುದು ಎಂದು ಸ್ಪಷ್ಟನೆ ನೀಡಿದರು. ಆದರೆ ಇದನ್ನೇ ದೊಡ್ಡದು ಮಾಡಿ ಮಾಧ್ಯಮಗಳು ಉಗ್ರ ಬಲಪಂಥೀಯರು ಮತ್ತು ಉಗ್ರ ಎಡಪಂಥೀಯರು ಒಟ್ಟು ಸೇರಿದ್ದಾರೆಂದು ಅಪಪ್ರಚಾರ ಮಾಡಲೆತ್ನಿಸಿದರು. ಆದರೆ ನಿಜವಾಗಿಯೂ ಉಗ್ರ ಬಲಪಂಥೀಯರು ಬಹಳ ಸಣ್ಣಸಂಖ್ಯೆಯಲ್ಲಿದ್ದರು ಎಂದು ಸಂಘಟಕರು ತಿಳಿಸಿದ್ದಾರೆ.

ಇನ್ನೊಂದು ಕಾರಣಕ್ಕಾಗಿ ಕೂಡಾ ಜರ್ಮನಿ ಮತ್ತು ಬರ್ಲಿನ್ ಪ್ರದರ್ಶನಗಳು ಗಮನಾರ್ಹವಾಗಿದ್ದವು. ಈ ಪ್ರದರ್ಶನಗಳಿಗೆ "ಶಾಂತಿಗಾಗಿ ದಂಗೆ" ಎಂಬ ಹೆಸರಿಡಲಾಗಿತ್ತು. ಇದನ್ನು ಸಂಘಟಿಸಲು ಮುತುವರ್ಜಿ ವಹಿಸಿದ್ದು ಇಬ್ಬರು ಮಹಿಳೆಯರು. ಜರ್ಮನಿಯ ಮಹಿಳಾವಾದಿ ಚಳುವಳಿಯ ಸ್ಥಾಪಕರಲ್ಲೊಬ್ಬರಾಗಿದ್ದ ಆಲಿಸ್ ಶ್ವಾರ್ಝರ್ ಮತ್ತು ಎಡ ನಾಯಕಿ ಸಾಹ್ರಾ ವಾಗೆನ್ ನೆಕ್ಟ್. ಎರಡು ವಾರಗಳ ಹಿಂದೆ ಅವರು "ಶಾಂತಿಗಾಗಿ ಪ್ರಣಾಳಿಕೆ"ಯನ್ನು ಅನುಮೋದನೆಯ ಸಹಿಗಾಗಿ ಸಾರ್ವಜನಿಕವಾಗಿ ಬಿಡುಗಡೆ ಮಾಡಿದ್ದರು. ಅನಿರೀಕ್ಷಿತವಾಗಿ 69 ಪ್ರಸಿದ್ಧ ಕಲಾವಿದರು, ಅಧಿಕಾರಿಗಳು, ರಾಜಕಾರಣಿಗಳು, ಬುದ್ಧಿಜೀವಿಗಳು, ಅದಕ್ಕೆ ಸಹಿ ಹಾಕಿ ವ್ಯಾಪಕ ಮತ್ತು ಭಾರಿ ಬೆಂಬಲ ವ್ಯಕ್ತವಾಯಿತು. ಪ್ರದರ್ಶನದ ಹಿಂದಿನ ದಿನ ಅದಕ್ಕೆ ಸಹಿ ಹಾಕಿದವರ ಸಂಖ್ಯೆ ಎರಡೇ ವಾರಗಳಲ್ಲಿ 6.5 ಲಕ್ಷಕಕ್ಕೇರಿತ್ತು. ರ್‍ಯಾಲಿಯ ನಂತರ ಅದಕ್ಕೆ ಬೆಂಬಲ ಇನ್ನಷ್ಟು ಏರುತ್ತಿದ್ದು, ಅದು 10 ಲಕ್ಷಕ್ಕೆ ಸದ್ಯದಲ್ಲೇ ಮುಟ್ಟಿ, ಒಂದು ಪ್ರಬಲ ಜನಾಂದೋಲನವಾಗಹುದು ಎಂಬ ನಿರೀಕ್ಷೆಯಿದೆ. ಎರಡು ಮಹಾಯುದ್ಧಗಳನ್ನುಆರಂಭಿಸಿದ್ದ ಜರ್ಮನಿ ಮೂರನೆಯದನ್ನು ಆರಂಭವಾಗದಂತೆ ತಡೆಯಬೇಕು. ಯುದ್ಧ ನಿಲುಗಡೆ ಮತ್ತು ಶಾಂತಿ ಸಾಧ್ಯ. ಆದರೆ ಅದಕ್ಕಾಗಿ ಹೋರಾಡಬೇಕಾಗುತ್ತದೆ ಎಂದು ರ್‍ಯಾಲಿಯಲ್ಲಿ ಸಾಹ್ರಾ ಭಾರೀ ಹರ್ಷೋದ್ಗಾರದ ಮಧ್ಯೆ ಘೋಷಿಸಿದರು.



ಜರ್ಮನಿಯಲ್ಲಿ ಭಾರೀ ಯುದ್ಧ–ವಿರೋಧಿ ಭಾವನೆಗೆ ಹಲವು ಕಾರಣಗಳಿವೆ. ಎರಡು ಮಹಾಯುದ್ಧದಲ್ಲಿ ಯುದ್ಧಕೋರ ನಾಯಕರ ಮಹತ್ವಾಕಾಂಕ್ಷೆಯಿಂದ ಭಾರೀ ಕಷ್ಟನಷ್ಟದ ಅನುಭವಗಳು ಇನ್ನೂ ಮಾಸಿಲ್ಲ. ರಷ್ಯಾದ ಜತೆ ಉತ್ತಮ ಸಂಬಂಧವಿದ್ದ, ಇಂಧನಕ್ಕೆ ಹೆಚ್ಚಾಗಿ ಅವಲಂಬಿಸಿದ್ದ, ಯುದ್ಧ ಮತ್ತು ದಿಗ್ಬಂಧನದಿಂದ ಅತ್ಯಂತ ಹೆಚ್ಚು ಸಂಕಷ್ಟ ಅನುಭವಿಸುತ್ತಿರುವ ಜರ್ಮನ್ನರಿಗೆ ಈ ಯುದ್ಧವನ್ನು ಹೊರಿಸಿದ್ದು ಮುಂದುವರೆಸಿದ್ದು ಯು.ಎಸ್ ತನ್ನ ಹಿತಾಸಕ್ತಿಗಳಿಗಾಗಿ ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಈಗಿನ ಇಂಧನ ಪೂರೈಕೆ ಮತ್ತು ಬೆಲೆಯ ಪರಿಸ್ಥಿತಿಯಲ್ಲಿ ಪ್ರಸಿದ್ಧ ಜರ್ಮನ್ ಕೈಗಾರಿಕೋದ್ಯಮ ಅವನತಿ ಹೊಂದಬಹುದೆಂಬ ಆತಂಕವೂ ಸೇರಿಕೊಂಡಿದೆ. ನಾರ್ಡ್ ಸ್ಟ್ರೀಂ ಪೈಪ್ ಲೈನ್ ಸ್ಫೋಟ ಮಾಡಿದ್ದು ಯು.ಎಸ್ ಎಂಬ ಸುದ್ದಿ ಇನ್ನಷ್ಟು ಆಕ್ರೋಶಕ್ಕೆ ಕಾರಣವಾಗಿದೆ.

ಉಕ್ರೇನಿಗೆ ಮಿಲಿಟರಿ ಆರ್ಥಿಕ ಬೆಂಬಲ ತೀವ್ರಗೊಳಿಸಿ, ರಷ್ಯಾವನ್ನು ಸೋಲಿಸಿ ಉಕ್ರೇನಿನಿಂದ ಪೂರ್ಣವಾಗಿ ಹಿಮ್ಮೆಟ್ಟಿಸಿ ಯುದ್ಧ ನಿಲುಗಡೆ ಮಾಡಬೇಕೆಂದು ಸಹ ಕೆಲವು ರಷ್ಯಾ–ವಿರೋಧಿ ಯುದ್ಧ–ವಿರೋಧಿ ಪ್ರದರ್ಶನಗಳು ಸಹ ನಡೆದಿವೆ. ಇದು ಕಾರ್ಯಸಾಧ್ಯವಲ್ಲವೆಂಬುದು ಬಹುತೇಕ ಎಲ್ಲರಿಗೂ ತಿಳಿದಿದೆ. ಹಾಗಾಗಿ ಇಂತಹ ಪ್ರದರ್ಶನಗಳಿಗೆ ಅಷ್ಟಾಗಿ ಜನಬೆಂಬಲ ವ್ಯಕ್ತವಾಗಿಲ್ಲ.

ಮೋದಿ ಭಾರತದಲ್ಲಿ ಅದಾನಿ ಏಳು–ಬೀಳು...... ಪುಟ 13 ರಿಂದ

ಈ ಹಗರಣವನ್ನು ನಿಭಾಯಿಸುತ್ತವೆ ಎಂದು ಸರ್ಕಾರವು ಹೇಳಿಕೊಂಡಿದೆ, ಆದರೆ ಈ ಸಂಸ್ಥೆಗಳ ಕಾರ್ಯಕ್ಷಮತೆ ಇದುವರೆಗಂತೂ ಶೋಚನೀಯವಾಗಿದೆ. ಹಲವಾರು ಶಾಸಕರಿಂದ "ಸೈಲೆಂಟ್ ಆಪರೇಟರ್"(ಮೌನ ನಿರ್ವಾಹಕ) ಆಗಿ ಕೆಲಸ ಮಾಡುತ್ತಿದೆ ಎಂಬ ದೂಷಣೆಗೆ ಒಳಗಾಗಿರುವ ಸೆಬಿ(ಸೆಕ್ಯುರಿಟೀಸ್ ಅಂಡ್ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯ) ಆರೋಪಗಳ ಬಗ್ಗೆ ತನಿಖೆ ನಡೆಸುವುದಾಗಿ ಭರವಸೆ ನೀಡುವ ಮತ್ತು ಪ್ರತಿಕ್ರಿಯಿಸಲು ಅದಾನಿ ಸಮೂಹಕ್ಕೆ ಆರು ತಿಂಗಳ ಕಾಲಾವಕಾಶವನ್ನು ನೀಡಲಾಗಿದೆ ಎನ್ನುವ ಒಂದು ಸಪ್ಪೆ ಪತ್ರಿಕಾ ಪ್ರಕಟಣೆಯನ್ನು ನೀಡಿದೆ. ಆದಾಗ್ಯೂ, ಈ ಸಂಸ್ಥೆ ಅದಾನಿ ಸಮೂಹದ ಶೇರುಗಳು ಮತ್ತು ಕಾರ್ಪೊರೇಟ್ ಬಾಂಡ್‌ಗಳ ಕುಸಿತವನ್ನು ಪರಿಶೀಲಿಸಿ, ಕೆಲವು ಅಲ್ಪಾವಧಿ–ಮಾರಾಟದ ಚಟುವಟಿಕೆ ದೇಶದ ಹೊರಗಿನಿಂದ ಹುಟ್ಟಿಕೊಂಡಿದೆ ಎಂಬುದಕ್ಕೆ ಪುರಾವೆಗಳನ್ನು ಕಂಡುಹಿಡಿದಿದೆ.

ಅದಾನಿ ಸಮೂಹ ಚೇತರಿಸಿಕೊಂಡು ಮೊದಲಿನಂತಾಗಲಿ ಅಥವ ಆಗದಿರಲಿ, ಅದರ ಪ್ರಸಕ್ತ ತೊಂದರೆಗಳನ್ನು ಆರ್ಥಿಕ ಅಭಿವೃದ್ಧಿಯನ್ನು ಮುಂದೊತ್ತಲು ಕೆಲವು ರಾಷ್ಟ್ರೀಯ ಅತಿರಥ–ಮಹಾರಥರ ಮೇಲೆ ಭಾರತವು ಅತಿಯಾಗಿ ಅವಲಂಬಿಸುವುದರ ದೋಷಗಳು ಎಂದೇ ಪರಿಗಣಿಸಬೇಕಾಗುತ್ತದೆ. ಈ ಕಾರ್ಯತಂತ್ರವು ವ್ಯಾಪಕ ಆಧಾರದ ಮತ್ತು ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿಯನ್ನು ತಂದುಕೊಡುವಲ್ಲಿ ವಿಫಲವಾಗಿದೆ, ಇದರಿಂದಾಗಿ ಭಾರತವು ನಿರಾಶಾದಾಯಕ ಉದ್ಯೋಗ ಬೆಳವಣಿಗೆ, ಕ್ಷೀಣಿಸುತ್ತಿರುವ ಬಳಕೆ, ಕುಸಿಯುತ್ತಿರುವ ಹೂಡಿಕೆ ದರಗಳು ಮತ್ತು ಪರಿಸರ ವಿನಾಶವನ್ನು ಕಾಣುವಂತಾಗಿದೆ. ರಿಲಯನ್ಸ್, ಟಾಟಾ ಮತ್ತು ಆದಿತ್ಯ ಬಿರ್ಲಾರಂತಹ ಉದ್ದಿಮೆ ಸಮೂಹಗಳನ್ನು ಅವಲಂಬಿಸುವ ಬದಲು, ಸರ್ಕಾರವು ಈ ಕ್ಷಣವನ್ನು ಹಾದಿಯನ್ನು ಬದಲಾಯಿಸುವ ಅವಕಾಶವನ್ನಾಗಿ ಬಳಸಿಕೊಳ್ಳಬೇಕು. ಸಣ್ಣ ಮತ್ತು ಮಧ್ಯಮ ಗಾತ್ರದ ಕಂಪನಿಗಳನ್ನು ಉತ್ತೇಜಿಸುವುದು ಮತ್ತು ಸಾಮಾಜಿಕ ಸೇವೆಗಳನ್ನು ವಿಸ್ತರಿಸುವುದು ಉದ್ಯೋಗ ಸೃಷ್ಟಿಯನ್ನು ಉತ್ತೇಜಿಸುತ್ತದೆ ಮತ್ತು ಆರ್ಥಿಕ ಸುಸ್ಥಿರತೆಯನ್ನು ಉತ್ತಮಗೊಳಿಸುತ್ತದೆ.

ಈ ಹಗರಣವು ಮೋದಿಯವರ ಜನಪ್ರಿಯತೆಯನ್ನು ಬಾಧಿಸಿದಂತೆ ಕಂಡು ಬರದಿದ್ದರೂ, ರಾಜಕೀಯ ಪರಿಣಾಮವನ್ನು ಇಷ್ಟು ಬೇಗನೇ ಅಂದಾಜು ಮಾಡಲಾಗದು. ಮೋದಿ ಮತ್ತು ಬಿಜೆಪಿ ಈ ವರ್ಷಗಳಲ್ಲಿ ಹಲವಾರು ಭ್ರಷ್ಟಾಚಾರ ಹಗರಣಗಳನ್ನು ಎದುರಿಸಿದ್ದಾರೆ ಮತ್ತು ಮಾಧ್ಯಮಗಳ ಮೇಲೆ ಅವರ ಗಮನಾರ್ಹ ನಿಯಂತ್ರಣದಿಂದಾಗಿ ಅವೆಲ್ಲವನ್ನೂ ಮೀರಿ ನಿಲ್ಲಲು ಅವರಿಗೆ ಸಾಧ್ಯವಾಗಿದೆ. ಆದರೆ ಅದಾನಿ ಪತನ ವಿಭಿನ್ನವಾಗಬಹುದು, ಏಕೆಂದರೆ ಇದು ಮೋದಿಯವರ ಆರ್ಥಿಕತತ್ವಶಾಸ್ತ್ರದ ಒಂದು ಪ್ರಮುಖ ವಿಚಾರವನ್ನು ನಂಬಲು ಸಾಧ್ಯವಾಗದಂತೆ ಮಾಡುತ್ತದೆ. ಒಂದೇ ಅಧಿಕಾರ–ಪೋಷಿತ ಸಮೂಹದ ಮುಂದೆ ಅನಂತ ಹಣಕಾಸು ಪ್ರಯೋಜನಗಳು ಮತ್ತು ನಿಯಂತ್ರಕ ರಿಯಾಯ್ತಿಗಳನ್ನು ಧಾರಾಳವಾಗಿ ಸುರಿಯುವುದು, ಒಂದು ವಿಶ್ವಾಸಾರ್ಹ ಅಭಿವೃದ್ಧಿ ತಂತ್ರವಲ್ಲ ಎಂದು ಕಂಡುಕೊಂಡಂತಾಗಿದೆ. ■

NEW No. MAG(3)/NPP/205/2021-2022
JANASHAKTHI KANNADA VARA PATRIKE MARCH 6-12, 2023 Price: Rs. 10/- Date of Publication: 03 MARCH 2023 RNI No. KARKAN /2006/17926 Posted on 07-03-2023
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2

19.20.21 ಸಮಕಾಲೀನ ವಾಸ್ತವಗಳ ಹೃದಯಸ್ಪರ್ಶಿ ಅನಾವರಣ

ತಳಮಟ್ಟದ ಸಮಾಜದ ಅತಂಕ ಮತ್ತು ಆಶಯಗಳನ್ನು ಬಿಂಬಿಸುವ ಮನ್ಸೋರೆ ಅವರ ಚಿತ್ರ

ನಾ ದಿವಾಕರ

ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎಂದು ಭಾರತ ಹೆಮ್ಮೆಯಿಂದ ಘೋಷಿಸಲು ಮೂಲ ಕಾರಣ ಎಂದರೆ ಈ ದೇಶದಲ್ಲಿ ಪ್ರಜಾಪ್ರಭುತ್ವದ ಬೇರುಗಳು ಸಾಮಾಜಿಕ–ಸಾಂಸ್ಕೃತಿಕ ನೆಲೆಯಲ್ಲಿ ಬೇರೂರದಿದ್ದರೂ, ಸಾರ್ವಜನಿಕ ಬದುಕಿನಲ್ಲಿ, ರಾಜಕೀಯ ವಲಯದಲ್ಲಿ ಮತ್ತು ಸಾಂವಿಧಾನಿಕ ಆಡಳಿತ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವದ ಆಶಯಗಳು ಇನ್ನೂ ಗಟ್ಟಿಯಾಗಿವೆ. ವಿಭಿನ್ನ ಕಾಲಘಟ್ಟಗಳಲ್ಲಿ ರಾಜಕೀಯ ಪ್ರಾಬಲ್ಯ ಮತ್ತು ಬಹುಸಂಖ್ಯಾವಾದದ ಪ್ರಭಾವದಿಂದ, ಆಡಳಿತಾರೂಢ ಪಕ್ಷಗಳು, ಈ ಆಶಯಗಳಿಗೆ ತದ್ವಿರುದ್ಧವಾಗಿ



ನಡೆದುಕೊಳ್ಳುತ್ತಿದ್ದರೂ, ಈ ತಪ್ಪು ನಡಿಗೆಯನ್ನು ಸರಿಪಡಿಸುವ ನಿಟ್ಟಿನಲ್ಲಿ ಭಾರತದ ನ್ಯಾಯಾಂಗ ವ್ಯವಸ್ಥೆ ಸದಾ ಜಾಗರೂಕವಾಗಿರುದನ್ನು ಗಮನಿಸಬಹುದು. ಇತ್ತೀಚೆಗೆ ಮುಖ್ಯ ಚುನಾವಣಾ ಆಯುಕ್ತರನ್ನು ನೇಮಿಸಲು ತಟಸ್ಥ ಸಾಂವಿಧಾನಿಕ ಸಮಿತಿಯನ್ನು ರಚಿಸುವಂತೆ ಸುಪ್ರೀಂಕೋರ್ಟ್ ನೀಡಿರುವ ಆದೇಶ ಈ ನಿಟ್ಟಿನಲ್ಲಿ ಪ್ರಜಾಸತ್ತೆಯ ಪ್ರತಿಪಾದಕರಲ್ಲಿ ಆಶಾಭಾವನೆ ಮೂಡಿಸುತ್ತದೆ.

ಆದರೂ ಕಳೆದ ಐದಾರು ದಶಕಗಳ ರಾಜಕೀಯ ಬೆಳವಣಿಗೆಗಳನ್ನು ಮತ್ತು ವಿವಿಧ ಆಳುವ ಪಕ್ಷಗಳ ಆಡಳಿತ ನೀತಿಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇರಬಹುದಾದ ಲೋಪಗಳನ್ನು ಅಥವಾ ತೂತುಗಳನ್ನು ಆಡಳಿತಾರೂಢ ಪಕ್ಷಗಳು ಹೇಗೆ ದುರ್ಬಳಕೆ ಮಾಡಿಕೊಂಡಿವೆ ಎನ್ನುವುದನ್ನೂ ಗಮನಿಸಬಹುದು. ದೇಶದ ಸುರಕ್ಷತೆ, ಭದ್ರತೆ, ಅಖಂಡತೆ ಮತ್ತು ಸಾರ್ವಜನಿಕ ಜೀವನದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಗುರುತರ ಜವಾಬ್ದಾರಿ ಇರುವ ಸರ್ಕಾರಗಳು ಈ ಹೊಣೆಗಾರಿಕೆಯನ್ನು ನಿಭಾಯಿಸುವ ಹಾದಿಯಲ್ಲಿ ಅನೇಕ ಸಂದರ್ಭಗಳಲ್ಲಿ ಸಂವಿಧಾನದ ಮೂಲ ಆಶಯಗಳನ್ನೇ ಉಲ್ಲಂಘಿಸುವಂತಹ ಕಾಯ್ದೆ ಕಾನೂನುಗಳನ್ನು ಅನುಸರಿಸಿರುವುದನ್ನೂ ಗುರುತಿಸಬಹುದು. ರಾಜದ್ರೋಹ ಕಾಯ್ದೆ ಮತ್ತು ಈಗ ಚಾಲ್ತಿಯಲ್ಲಿರುವ ಯುಎಪಿಎ ಕಾಯ್ದೆ ಮುಂತಾದ ಕರಾಳ ಶಾಸನಗಳು ದೇಶದ ಅಖಂಡತೆಯ ರಕ್ಷಣೆಗಾಗಿ ಇರುವ ಕಾನೂನಾತ್ಮಕ ಅಸ್ತ್ರಗಳೇ ಆದರೂ, ಈ ಕಾಯ್ದೆಗಳೇ ಸಾವಿರಾರು



ಕಾರ್ಯಕರ್ತರ, ಬುದ್ಧಿಜೀವಿಗಳ ಮತ್ತು ಅಮಾಯಕ ಪ್ರಜೆಗಳ ಪಾಲಿಗೆ ಕಂಟಕಪ್ರಾಯವಾಗಿರುವ ನಿದರ್ಶನಗಳೂ ನಮ್ಮ ಮುಂದಿವೆ.

ಭಯೋತ್ಪಾದನೆ ಮತ್ತು ಯಾವುದೇ ರೀತಿಯ ಉಗ್ರವಾದಿ ಚಟುವಟಿಕೆಗಳು ದೇಶದ ಭದ್ರತೆಗೆ ಮಾರಕವಾಗುವುದೇ ಅಲ್ಲದೆ ಜನಸಾಮಾನ್ಯರ ನೆಮ್ಮದಿಯ ಬದುಕಿಗೂ ಕಂಟಕಪ್ರಾಯವಾಗುತ್ತದೆ. ಹಿಂಸಾತ್ಮಕ ಚಳುವಳಿಗಳು, ಹೋರಾಟಗಳು ತಳಮಟ್ಟದ ಸಮಾಜ ಎದುರಿಸುತ್ತಿರುವ ಜಟಿಲ ಸಮಸ್ಯೆಗಳನ್ನು ಪರಿಹರಿಸುವುದಕ್ಕಿಂತಲೂ ಹೆಚ್ಚಾಗಿ, ಮತ್ತಷ್ಟು ಜಟಿಲಗೊಳಿಸಿರುವುದನ್ನೂ ನಾವು ಕಂಡಿದ್ದೇವೆ. ಮತ್ತೊಂದು ನೆಲೆಯಲ್ಲಿ ನಿಂತು ನೋಡಿದಾಗ, ತಳಮಟ್ಟದ ಜನಸಮುದಾಯಗಳ ನಿತ್ಯ ಜೀವನದ ಜ್ವಲಂತ ಸಮಸ್ಯೆಗಳು ದಿನದಿಂದ ದಿನಕ್ಕೆ ಮತ್ತಷ್ಟು ಸಂಕೀರ್ಣವಾಗುತ್ತಲೇ ಹೋಗುತ್ತಿದ್ದು, ಆದಿವಾಸಿಗಳು, ಬುಡಕಟ್ಟು ಸಮುದಾಯಗಳು, ಮಹಿಳೆಯರು, ಶೋಷಿತ–ಅವಕಾಶವಂಚಿತ ಸಮುದಾಯಗಳು ಮತ್ತು ಅಂಚಿಗೆ ತಳ್ಳಲ್ಪಟ್ಟ ಜನಸಮೂಹಗಳು ತಮ್ಮ ಜೀವನ ಹಾಗೂ ಜೀವನೋಪಾಯದ ಮಾರ್ಗಗಳನ್ನು ಸುಗಮಗೊಳಿಸಲು ಹಕ್ಕೊತ್ತಾಯಗಳ

ಪುಟ 14 ಕ್ಕೆ

ನಮ್ಮವನೇ ಆದ ಶಿವ, ನಮ್ಮೊಳಗಿನ ಶಿವ 'ಶೂದ್ರಶಿವ'

ಶ್ರೀನಿವಾಸ ಕಾರ್ಕಳ

'ಶೂದ್ರಶಿವ' ಎಂಬ ಹೆಸರಲ್ಲೇ ಏನೋ ಒಂದು ವಿಶೇಷ ಅರ್ಥವಿದೆ, ಶಕ್ತಿಯಿದೆ, ಆಕರ್ಷಣೆಯಿದೆ. ಆತ ವೈದಿಕರ ಗಗನದ ಶಿವನಲ್ಲ, ಶೂದ್ರರ ನೆಲದ ಶಿವ. ನೀವು ಶಿವನನ್ನು ನಮ್ಮಿಂದ ದೂರ ಇಟ್ಟಾಗ ನಾವೇ ಕಂಡುಕೊಂಡ ನಮ್ಮ ಶಿವ. ನಾರಾಯಣ ಗುರುಗಳ ಮೂಲಕ ನಮಗೆ ಸಿಕ್ಕಿದ ಸ್ವಾಭಿಮಾನ, ಆತ್ಮಗೌರವದ ಶಿವ. ಮನುಜಭೇದವ ತೊರೆದು ನಮ್ಮವನೇ ಆದ ನಮ್ಮೊಳಗಿನ ಶಿವ.

ನೀವು ನಾರಾಯಣ ಗುರುಗಳ ಬಗ್ಗೆ, ಅವರ ಸಮಾಜ ಸುಧಾರಣಾ ಚಳುವಳಿಯ ಬಗ್ಗೆ ದೊಡ್ಡ ದೊಡ್ಡ ಗ್ರಂಥ ಬರೆಯಬಹುದು, ದೀರ್ಘ ಲೇಖನ ಬರೆಯಬಹುದು, ಗಂಟೆಗಟ್ಟಲೆ ಭಾಷಣ ಮಾಡಬಹುದು. ಇಷ್ಟಾಗಿಯೂ ಪಾಮರರಿಗೆ ಗುರುಗಳ ಕೆಲಸದ ವಿವರ ದಕ್ಕದೆ ಹೋಗಬಹುದು. ಆದರೆ ಸಿನಿಮಾ ಅಥವಾ ನಾಟಕದಂತಹ ಒಂದು ದೃಶ್ಯ ಮಾಧ್ಯಮ ಬೀರಬಹುದಾದ ಪರಿಣಾಮ ಅಸಾಧಾರಣವಾದುದು. ಇದಕ್ಕೆ ಮಂಗಳೂರಿನ ರುದ್ರ ಥೇಟರ್ ತಂಡದ 'ಶೂದ್ರಶಿವ' ನಾಟಕ ಅತ್ಯುತ್ತಮ ಉದಾಹರಣೆ. ಜನಸಾಮಾನ್ಯರಿಗೆ ಅರ್ಥವಾಗದ ನಾರಾಯಣ ಗುರುಗಳನ್ನು, ಅವರ ಆಲೋಚನೆಗಳನ್ನು, ಅವರ ಸುಧಾರಣಾ ಚಳುವಳಿಯ ಇತಿಹಾಸವನ್ನು ಶೂದ್ರಶಿವ ಕೇವಲ ಎರಡು ಗಂಟೆಗಳ ನಾಟಕದಲ್ಲಿ ವೀಕ್ಷಕರಿಗೆ ಪರಿಣಾಮಕಾರಿಯಾಗಿ ದಾಟಿಸುತ್ತದೆ; ಅವರನ್ನು ಕಾಡುತ್ತದೆ; ಅವರು ಎಂದೂ ಮರೆಯದಂತೆ ಮಾಡುತ್ತದೆ.

ಮೇಲ್ನೋಟಕ್ಕೆ ತಿಳಿಯುವಂತೆ ಈ ನಾಟಕದ ಮುಖ್ಯ ಉದ್ದೇಶವೇ ಸಾಮಾನ್ಯ ಪ್ರೇಕ್ಷಕರನ್ನು ತಲಪುವುದು. ಆದ್ದರಿಂದಲೇ ಅತಿಯಾದ ಸಾಂಕೇತಿಕತೆಯ ರೂಪಕ ಭಾಷೆಯ ಬದಲು, ಅದು ಸರಳವಾಗಿ ನೇರವಾಗಿ ಕತೆಯನ್ನು ಹೇಳುತ್ತಾ ಹೋಗುತ್ತದೆ. ಸ್ವಾಮಿ ವಿವೇಕಾನಂದರಿಂದಲೇ 'ಹುಚ್ಚಾಸ್ಪತ್ರೆಯಂತೆ' ಎಂದು ಕರೆಸಿಕೊಂಡ ಅಂದಿನ ಕೇರಳದಲ್ಲಿ ತಥಾಕಥಿತ ಕೆಳ ಜಾತಿಯವರು ಅನುಭವಿಸುತ್ತಿದ್ದ ಜಾತಿ ಶೋಷಣೆ, ಜಾತಿ ದೌರ್ಜನ್ಯ, ನಂಬೂದಿರಿಗಳು ಬರುವ ದಾರಿಯಲ್ಲಿ ಕಾಣಿಸಿಕೊಂಡರೂ ಶಿಕ್ಷೆ, ಮದುವೆಯಾದರೆ ಆ ಹೆಣ್ಣು ಮೊದಲು ನಂಬೂದಿರಿಗಳೊಂದಿಗೆ ಒಂದು ರಾತ್ರಿ ಕಳೆಯ ಬೇಕಾಗುವ ನರಕ, ಹೆಣ ತೆಗೆಯಲೂ ತೆರಿಗೆ, ಮೊಲೆಗೂ ತೆರಿಗೆ, ಬದುಕೇ ಕತ್ತಲು ಎನಿಸುವ ಕಾಲ ಅದು. ಅಂತಹ ಕಾಲದಲ್ಲಿ ಕಗ್ಗತ್ತಲ ಸುರಂಗದ ತುದಿಯಲ್ಲಿ ಬೆಳಕಿನ ಕಿರಣದಂತೆ, ಕಾರ್ಮೋಡದ ಬಾನಿನಲ್ಲಿ ಭರವಸೆಯ ನಕ್ಷತ್ರದಂತೆ ಕಾಣಿಸಿಕೊಳ್ಳುವ ನಾರಾಯಣ ಗುರುಗಳು, ದೇವಾಲಯಗಳಿಗೆ ಪ್ರವೇಶ ಇಲ್ಲ



ಎಂದಾದಾಗ ತಮ್ಮದೇ ದೇವಾಲಯ ಕಟ್ಟಿಕೊಳ್ಳುವಂತೆ ಮಾಡಿದರು. 'ತಿಳಿಸಲು ಅಲ್ಲ, ತಿಳಿಯಲು' ಎನ್ನುವ ಉದಾತ್ತ ಆಲೋಚನೆಗಳು, ಸಂಘಟನೆ ಮತ್ತು ಶಿಕ್ಷಣದ ಆದ್ಯತೆಯ ಕರೆ, ಡಾ ಪಲ್ಪು, ಕವಿ ಕುಮಾರನ್ ಆಶನ್ ಅವರ ಸಹಯೋಗ, ಮತಾಂತರ ಆಗುವ ಕುರಿತು ನಡೆಯುವ ಚರ್ಚೆಗಳು, ಗುರುಗಳ ಸಮಾಜ ಸುಧಾರಣೆಯ ಚಳುವಳಿಗೆ ಮಾರು ಹೋಗಿ ಓಡೋಡಿ ಬಂದು ಭೇಟಿಯಾಗುವ ಗಾಂಧೀಜಿ, ಹೀಗೆ ಕೇವಲ ಎರಡು ಗಂಟೆಗಳ ಅವಧಿಯಲ್ಲಿ ಶತಮಾನವೊಂದರ ಕತೆಯನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತದೆ ಶೂದ್ರಶಿವ.

ಶೂದ್ರ ಶಿವ ನಾಟಕದ ಪ್ರೇರಣಾ ಪತ್ಯ ಬಾಬು ಶಿವ ಪೂಜಾರಿಯವರದು. ನಾಟಕವನ್ನು ಪ್ರತಿಭಾವಂತ ಮತ್ತು ಅನುಭವಿ ರಂಗ ನಿರ್ದೇಶಕ ವಿದ್ದು ಉಚ್ಚಿಲ್ ನಿರ್ದೇಶಿಸಿದ್ದಾರೆ. ರಂಗಭೂಮಿ ಮತ್ತು ಚಲನಚಿತ್ರ ರಂಗದ ಕಲಾ ವಿನ್ಯಾಸದಲ್ಲಿ ದೊಡ್ಡ ಹೆಸರು ಮಾಡಿರುವ ಶಶಿಧರ ಅಡಪ ಅವರು ನಾಟಕದ ರಂಗ ವಿನ್ಯಾಸ ಮಾಡಿದ್ದಾರೆ. ಶರತ್ ಎಸ್ ನೀನಾಸಂ ಹಾಗೂ ಮನೋಜ್ ವಾಮಂಜೂರು ರಂಗ ರೂಪ ನೀಡಿದ್ದಾರೆ.

ಬೆಳಕು–ನಿತೇಶ್ ಬಂಟ್ವಾಳ, ಧ್ವನಿ– ರಾಜೇಶ್, ತಂಡ ನಿರ್ವಹಣೆ–ಯೋಗೇಶ್ ಜೆಪ್ಪು ಮತ್ತು ಲೋಕೇಶ್, ಪ್ರಸಾದನ–ಶಿವರಾಮ ಕಲ್ಮಡ್ಕ, ಮಾರ್ಗದರ್ಶನ–ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದ ಕೋಶಾಧಿಕಾರಿ ಪದ್ಮರಾಜ್ ಆರ್, ಸಂಗೀತ– ಶರತ್ ಉಚ್ಚಿಲ, ಹಾಡಿದವರು–ಮೇಘನಾ ಕುಂದಾಪುರ ಮತ್ತು ಸಂಗಡಿಗರು. ಅಶ್ವಥ್ ಕುಂದಾಪುರ, ಸುದೀಶ್ ಕಾಸರಗೋಡು, ಜಯದೀಪ್ ಮೈಸೂರು, ಪ್ರಿಯಾಂಕಾ ಶಿವಮೊಗ್ಗ, ಕಾವ್ಯ ಶಿವಮೊಗ್ಗ, ಮಂಜುನಾಥ ಹುಬ್ಬಳ್ಳಿ, ಗಣೇಶ್ ಪುತ್ತೂರು, ಪವನ್ ಮಿಟ್ಟ ಆಂಧ್ರಪ್ರದೇಶ್, ಸುಮನ್ ಚನ್ನರಾಯ ಪಟ್ಟಣ, ರಾಜೇಂದ್ರ ಪ್ರಸಾದ್ ಮಂಡ್ಯ, ರಾಜೇಂದ್ರ ಶ್ರೀನಿವಾಸ್ ಮಂಡ್ಯ, ಚೈತ್ರಾ ಟಿ ಪಿ ಚನ್ನಪಟ್ಟಣ, ಮಣಿಯನ್ ಕುಂಬ್ಳೆ, ಸದಾನಂದ ಎಸ್ ಮಂಡ್ಯ, ಸಂದೀಪ್ ಮಸ್ಕರೇನಸ್ ಮಂಗಳೂರು, ಯೋಗೀಶ್ ಉತ್ತರಕನ್ನಡ, ಅಭಿಷೇಕ್ ಮಂಡ್ಯ, ಶ್ರೀಧರ್ ಗದಗ್, ಜೀವನ್ ಸಿದ್ದಿ ಮುಂಡುಗೋಡು ಹೀಗೆ ರಾಜ್ಯದ 13 ಜಿಲ್ಲೆಗಳ 19 ಕಲಾವಿದರು ಅಭಿನಯಿಸಿದ್ದಾರೆ.

ನಾಟಕ ತಾಂತ್ರಿಕವಾಗಿ ತುಂಬಾ ಮೇಲ್ಮಟ್ಟವನ್ನು ಕಾಯ್ದುಕೊಂಡಿದೆ. ಬೆಳಕು, ಸಂಗೀತ, ರಂಗ ಸಂಯೋಜನೆ ಎಲ್ಲವೂ ಅತ್ಯುತ್ತಮವಾಗಿದೆ. ಕಲಾವಿದರ ನಟನಾ ಪ್ರತಿಭೆ ಎದ್ದು ಕಾಣಿಸುವಂತಿದೆ. ದೃಶ್ಯ ಸಂಯೋಜನೆಗಳು ನೆನಪಿನಲ್ಲಿ ಉಳಿಯುವಂತಿವೆ. ಉದಾಹರಣೆಗೆ ನಾರಾಯಣ ಗುರುಗಳನ್ನು ಭೇಟಿಯಾಗಲು ಮಹಾತ್ಮಾ ಗಾಂಧಿ ಓಡೋಡಿ ಬರುವ ದೃಶ್ಯ ತುಂಬಾ ಶಕ್ತಿಶಾಲಿಯಾಗಿ ಮೂಡಿಬಂದಿದ್ದು, ಬರೇ ಗಾಂಧಿ ಮತ್ತು ಸಂಗಡಿಗರ ಚುರುಕಿನ ನಡಿಗೆಯೇ ಅನೇಕ ಅರ್ಥಗಳನ್ನು ಹೊರಡಿಸುವಂತಿದೆ.

ವಿಸ್ತಾರವಾದ ಕ್ಯಾನ್ವಾಸ್ ಇರುವ ವಸ್ತುವನ್ನು ನಾಟಕಕ್ಕೆ ಒಗ್ಗಿಸಿಕೊಳ್ಳುವುದು ಸುಲಭವಲ್ಲ. ಪ್ರಯೋಗಗಳು ಈಗಷ್ಟೇ ಆರಂಭವಾಗಿರುವುದರಿಂದ ವೀಕ್ಷಕರ ಹಿಮ್ಮಾಹಿತಿಯೊಂದಿಗೆ ಸುಧಾರಣೆಗೆ ಅನೇಕ ಅವಕಾಶಗಳಿವೆ. ಆದರೂ ಎಲ್ಲ ಇತಿಮಿತಿಗಳ ನಡುವೆ ಒಂದು ಒಳ್ಳೆಯ ನಾಟಕವನ್ನು ರುದ್ರ ಥೇಟರ್ ಗ್ರೂಪ್ ಕೊಟ್ಟಿದೆ.

ಈ ನಾಟಕ ದೊಡ್ಡ ಪ್ರಮಾಣದಲ್ಲಿ ನಾಡಿನಲ್ಲಿ ಮಾತ್ರವಲ್ಲ ನಾಡಿನ ಹೊರಗೂ ಪ್ರದರ್ಶನ ಕಾಣಬೇಕು. ಅದಕ್ಕೆ ಬಹಳ ಮುಖ್ಯವಾದ ಕಾರಣ ಎರಡು. ಮೊದಲನೆಯದಾಗಿ, ದೇಶ ದುರಿತ ಕಾಲದ ಹೆಬ್ಬಾಗಿಲಲ್ಲಿ ಬಂದು ನಿಂತಿದೆ. ಜಾತಿ ನೆಲೆಯ ತಾರತಮ್ಯ ಮತ್ತು ದೌರ್ಜನ್ಯ ಮತ್ತೊಮ್ಮೆ ವಿಜೃಂಭಿಸುತ್ತಿದೆ. ಅವಕಾಶ ವಂಚಿತ

ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**